ಪ್ರದರ್ಶಿನ ಮಾಡಿ ನಾನು ಧರಣಿ ಕುಳಿತುಕೊಳ್ಳಬೇಕೆಂದು ಮಾಡಿದ್ದೇನೆ. ಇದು ಸರಿಯಾದ ನೀತಿಯಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ನನ್ನ ಮಾತನ್ನು ಕೇಳಿ. ನಿಮಗೆ ನೋವಾದಾಗಲೆಲ್ಲ ದಯವಿಟ್ಟು ಧರಣಿ ಮಾಡಬೇಡಿ. ನಿಮಗೆ ನೋವು ಆಗಿಂದಾಗ್ಗೆ ಆಗುತ್ತಿರುತ್ತದೆ. ತಾವು ಧರಣಿ ಮಾಡುವುದು ಬೇಡ. ಏತಕ್ಕೆ ಧರಣಿ ಸುಮ್ಮನೆ? ನಿಮ್ಮ ಮಾತಿನ ಬಗ್ಗೆ ಕಳಕಳಿಯಿದೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ತಮ್ಮ ಪೀಠದಿಂದ ಎದ್ದು ಅಧ್ಯಕ್ಷರ ಪೀಠದ ಮುಂದೆ ಬಂದು ಕುಳಿತುಕೊಂಡರು)

(ಗೊಂದಲ)

ಅಧ್ಯಕ್ಷರು : ಅಲ್ ರೈಟ್ ಮಾನ್ಯ ಕಂದಾಯಮಂತ್ರಿಗಳು.

1990ನೇ ಇಸವಿಯ ಭೂ ಕಂದಾಯ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, 1990ನೇ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ವಿನಂತಿಕೊಳ್ಳುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಸಾಧ್ಯವಿಲ್ಲ, ಇಲ್ಲ, ಇಲ್ಲ ಸಾಧ್ಯವಿಲ್ಲ. ಮಾನ್ಯ ವಿರೋಧಪಕ್ಷದ ಉಪನಾಯಕರೇ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ಬಿಲ್ ಇದೆ, ಅದು ಮುಗಿಯಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಸ್ವಲ್ಪ ಕೇಳಿ, ನಾಳೆ ಕನ್ನಡ ಸಾಹಿತ್ಯ ಸಮ್ಮೇಳನವಿದೆ, ಸಂತೋಷದಿಂದ ಈ ಸಭೆಯಿಂದ ವಿರಮಿಸೋಣವೆಂದರೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ತಾವು ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಟ್ಟಿದ್ದೀರಿ. ಮುಂದಿನ ಅಧಿವೇಶನ ಸೇರುವುದರೊಳಗೆ ಬೆಳಗಾವಿ ಮಹಾನಗರ ಪಾಲಿಕೆಯವರು ಹಾಕಿಕೊಂಡಿರತಕ್ಕ ಬಾವುಟದ ಬ್ಯಾಕ್‌ಗ್ರೌಂಡ್‌ನಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ತಾವು ಸೂಚನೆಯನ್ನು ಸರ್ಕಾರಕ್ಕೆ ಕೊಟ್ಟಿದ್ದೀರಿ, ಅದಕ್ಕೆ ನಾವು ನಿಮ್ಮನ್ನು ಅಭಿನಂದಿಸುತ್ತೇವೆ. ತಾವು ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಅದಕ್ಕೆ ನಾವು ಅಭಿನಂದಿಸುತ್ತೇವೆ. ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ. ಅಂದರೆ ಸೊಲ್ಲಾಪುರದಿಂದ 800 ಕಿಲೋಮೀಟರ್ ದೂರದಿಂದ ಏನು ಜನರು ಬಂದಿದ್ದಾರೆ ಅವರಿಗೆ ಒಂದು ಭರವಸೆ ಬೇಕು. ಮಾನ್ಯ ಮಂತ್ರಿಗಳು

ಸರ್ಕಾರದ ಪರವಾಗಿ ಭೇಟಿ ಮಾಡಿ ಅವರ ವಿಚಾರವನ್ನು ಪ್ರಸ್ತಾಪ ಮಾಡಿ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳುವುದು ಒಂದು. ಎರಡನೆಯದಾಗಿ ಕೇಂದ್ರಸರ್ಕಾರದ ಅನುದಾನದಿಂದ ನಡೆಯುತ್ತಿರುವ ರೈಲ್ವೆ ಟ್ರೈನಿಂಗ್ ಸ್ಕೂಲ್ ಏನಿದೆ ಅದಕ್ಕೆ ವಿದೇಶದಿಂದ 1 ಕೋಟಿ ರೂಪಾಯಿ ಅನುದಾನ ಏನು ಬರುತ್ತಿತ್ತು ಅದು ತಮಿಳುನಾಡಿಗೆ ಹೋಗುತ್ತದೆಂದು ಪತ್ರಿಕಾಕರ್ತರು ಬಹಳ ಪ್ರಾಮಾಣಿಕವಾಗಿ ವರದಿ ಮಾಡಿದ್ದಾರೆ. ನಾವು 26 ಮತ್ತು 27ನೇ ತಾರೀಖು ಬೇರೆ ವಿಷಯಗಳನ್ನು ಚರ್ಚೆಮಾಡುವುದಕ್ಕೆ ಅವಕಾಶವಿಲ್ಲವೆಂದು ತಿಳಿದು ಯಾವುದೇ ರೂಪದಲ್ಲಿ ನಾವು ಇದನ್ನು ತರುವುದಕ್ಕೆ ಸಾಧ್ಯವಾಗಲಿಲ್ಲ. ಆ ವಿಚಾರದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಕುಳಿತುಕೊಂಡಿದ್ದಾರೆ. ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ, ಅವರು ತಮ್ಮ ಪೀಠಕ್ಕೆ ವಾಪಸ್ಸು ಬರಬೇಕು ಎಂದು ಅದಕ್ಕೆ ಮುಂಚೆ ನಮ್ಮ ಸರ್ಕಾರ ಕೇಂದ್ರಸರ್ಕಾರಕ್ಕೆ ತಿಳಿಸಿ ಪ್ರಧಾನಮಂತ್ರಿಗಳಿಗೆ ತಕ್ಷಣ ಪತ್ರ ಬರೆದು ರೈಲ್ವೆ ತಾಂತ್ರಿಕಶಾಲೆ ಇಲ್ಲೇ ಇರಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಲೋಕ ಸಭಾಸದಸ್ಯರಾದ ಮಾನ್ಯ ಗುಂಡೂರಾಯರು ಈಗಾಗಲೇ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದು ಪತ್ರಿಕೆಗಳಲ್ಲಿ ಬಂದಿದೆ. ಅದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಮಾತುಕತೆಗೆ ಕರೆದು ಮಾತನಾಡುತ್ತೇವೆಂದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಿಂಧ್ಯರವರು ಏನು ಸೂಚನೆಯನ್ನು ಕೊಟ್ಟಿದ್ದಾರೆ ಅದಕ್ಕೆ ಬೇರೆ ಮಾತಿಲ್ಲ, ತಾವು ಹೇಳಿದ್ದೀರಿ, ನಾವು ಕೂಡ ಮೊದಲಿನಿಂದಲೂ ಹೇಳುತ್ತಿದ್ದೇವೆ. ಬರುವ ಅಧಿವೇಶನದೊಳಗೆ ಧ್ವಜದ ಬಗ್ಗೆ ಬೇಕಾದಂಥ ಮಸೂದೆ ತಂದೇ ತರುತ್ತೇವೆ. ಎರಡನೆಯದು ರೈಲ್ವೆ ತಾಂತ್ರಿಕಶಾಲೆ ವಿಚಾರದಲ್ಲಿ ನಾನು ಬರುವ ತಿಂಗಳು ಪ್ರಥಮ ವಾರದಲ್ಲಿ ದೆಹಲಿಗೆ ಹೋಗುವವನು ಇದ್ದೇನೆ. ಆಗ ಸಂಬಂಧಪಟ್ಟವರಲ್ಲಿ ಒತ್ತಾಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ. ನಾನು ಸಹ ದೆಹಲಿಗೆ ಹೋದಾಗ ಸಂಬಂಧಪಟ್ಟ ಸಚಿವರ ಜೊತೆಯಲ್ಲಿ ಅದನ್ನು ಇಲ್ಲಿಯೇ ಉಳಿಸಿಕೊಳ್ಳುವುದಕ್ಕೆ ಒತ್ತಾಯವನ್ನು ಖಂಡಿತವಾಗಿ ಮಾಡುತ್ತೇನೆ. ಬೇರೆ ವಿಚಾರವನ್ನು ತಾವೇನು ಪ್ರಸ್ತಾಪ ಮಾಡಿದ್ದೀರಿ, ಕನ್ನಡದ ಹಿತರಕ್ಷಣೆಯ ಬಗ್ಗೆ ಖಂಡಿತವಾಗಿಯೂ ಯಾವುದೇ ಒಂದು ಲೋಪ ಬಾರದಹಾಗೆ ನಡೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸೊಲ್ಲಾಪುರದಿಂದ ಸಾವಿರಾರು ಜನ ಬಂದಿದ್ದಾರೆ, ಅವರನ್ನು ಭೇಟಿ ಮಾಡಿ ಅವರ ಬೇಡಿಕೆಯನ್ನು ಪರಿಶೀಲನೆ ಮಾಡಿಯೆಂದು ಹೇಳುತ್ತಿದ್ದಾರೆ.

11.30 ಎ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ : ಅವರನ್ನು ಭೇಟಿಯಾಗುತ್ತೇನೆ. ದಯಮಾಡಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

(ಧರಣಿ ಕುಳಿತಿದ್ದ ಶ್ರೀ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ಮರಳಿದರು)

1990ನೇ ಇಸವಿಯ ಭೂಕಂದಾಯ (ತಿದ್ದುಪಡಿ) ವಿಧೇಯಕ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : (ಕಂದಾಯ ಮಂತ್ರಿ) ಮಾನ್ಯ ಅಧ್ಯಕ್ಷರೇ, ಈಗ ಮಂಡಿಸಿದಂಥ ಈ ತಿದ್ದುಪಡಿಯಿಂದ ಸುಮಾರು 3 ಲಕ್ಷ 17 ಸಾವಿರ 328 ಜನರಿಗೆ ಅನುಕೂಲವಾಗುವಂತ ತಿದ್ದುಪಡಿ ಆಗಿದೆ. ಈ ಮಸೂದೆಯಲ್ಲಿ ಅಂತಹ ದೊಡ್ಡ ಬದಲಾವಣೆಗಳು ಏನೂ ಇಲ್ಲ. ಈಗಾಗಲೇ ನಾನು ಮೊದಲು ಮಂಡಿಸಿದಂಥ ತಿದ್ದುಪಡಿ ಏನಿದೆ, ಅದಕ್ಕೆ ಪುನಃ ಹೊಸದಾಗಿ ಕ್ಲಾಸ್-2ನ್ನು ಒಮಿಟ್ ಮಾಡಬೇಕೆಂದು ಕೂಡ ಕೊಟ್ಟಿದ್ದೇವೆ. ಅಂದರೆ ವೆನಾಲ್ಟಿ ಕ್ಲಾಸ್ 2 ಮತ್ತು 3 ನ್ನು, ಏಕೆಂದರೆ ಸಮಗ್ರವಾಗಿ ವಿಚಾರ ಮಾಡಿ ಯಾವುದು ಜನರಿಗೆ ಅನುಕೂಲವಾಗುತ್ತದೆ, ಸಹಾಯಕವಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ನಾವು ತಂದಿದ್ದೇವೆ. ಮತ್ತು ಇದರಲ್ಲಿ ಮೂರು ಲಕ್ಷಕ್ಕಿಂತ ಹೆಚ್ಚಿಗೆ ಒತ್ತುವರಿದಾರರು ಏನಿದ್ದಾರೆ, ಅವರಿಗೆ ಅನುಕೂಲವಾಗುತ್ತದೆ. ಮತ್ತು ವಿಶೇಷವಾಗಿ ಸ್ಮಾಲ್ ಫಾರ್ಮರ್ಸ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಮತ್ತು ಶೆಡ್ಯೂಲ್ಡ್ ಕಾಸ್ಟ್‌ನವರಿಗೆ ಅನುಕೂಲವಾಗುತ್ತದೆ. ಇದರಲ್ಲಿ ಎಸ್‌ಸಿ 92,736 ಜನ ಇದ್ದಾರೆ. ಭೂಹೀನರು 74,165, ಮಾರ್ಜಿನಲ್ ಫರ್ಮರ್ಸ್ 64,210 ಮತ್ತು ಬೇರೆಯವರು 86,217 ಹೀಗೆ ಒಟ್ಟು 3,17,328 ಜನರಿಗೆ ಅನುಕೂಲವಾಗತಕ್ಕದ್ದು ಮತ್ತು ಸುಮಾರು 7,01,010 ಎಕರೆ ಒತ್ತುವರಿ ಜಮೀನನ್ನು ರೆಗ್ಯುಲರೈಸ್‌ಮಾಡತಕ್ಕದ್ದುನ್ನು ಇದರಲ್ಲಿ ಅಳವಡಿಸಲಾಗಿದೆ. ಇದನ್ನು ರೆಗ್ಯುಲರೈಸ್ ಮಾಡುವಾಗ ಇದಕ್ಕೆ ಶಾಸನರನ್ನೇರಿ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಮತ್ತು ಇದಕ್ಕೆ ಇಬ್ಬರು ಸದಸ್ಯರು ಮಾತ್ರ ಇರಬೇಕು, ಹೆಚ್ಚಿಗೆ ಸದಸ್ಯರು ಇದ್ದರೆ ರೆಗ್ಯುಲರೈಸ್ ಮಾಡುವುದಕ್ಕೆ, ಡಿಸ್ಟ್ರಿಬ್ಯುಶನ್ ಮಾಡುವುದಕ್ಕೆ ಕಷ್ಟವಾಗಬಹುದು ಎಂದು ಹೀಗೆ ಮಾಡಿದ್ದೇವೆ. ಮತ್ತು ಇದಕ್ಕೆ ಟೈಮ್ ಕೂಡ ಮೊದಲು ಎರಡು ತಿಂದಳು ಇತ್ತು, ಈಗ ಆರು ತಿಂಗಳು ಒಳಗಾಗಿ ಎಲ್ಲರೂ ಅಪ್ಲಿಕೇಶನ್ ಕೊಡಬೇಕೆಂದು ಹೇಳಿದ್ದೇವೆ. ಪ್ಲಾಂಟೇಶನ್ ಆಗಲಿ ಮತ್ತು ಫಾರೆಸ್ಟ್ ಜಮೀನು ಒತ್ತುವರಿ ಇದ್ದರೆ ಅದು ಇದರಲ್ಲಿ ಸಂಬಂಧಿಸಿಲ್ಲ. ಆದರೂ ಕೂಡ ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್ ಏನಿದೆ ಅದನ್ನು ನಾವು ಮೊದಲು ಫಾರೆಸ್ಟ್‌ನವರಿಗೆ ವಹಿಸಿಕೊಟ್ಟಿದ್ದೇವೆ, ಅದರ ಮೇಲೆ ಒತ್ತುವರಿ ಇದ್ದರೆ, ಅದನ್ನು ವಾಪಸ್ ತೆಗೆದುಕೊಂಡು ಅದನ್ನು ಕೂಡ ರೆಗ್ಯುಲರೈಸ್ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದರೆ ಯಾವುದು ನೋಟಿಫೈ ಆಗಿದೆ, ಅಂತಹ ಜಮೀನುಗಳು ಇದರಲ್ಲಿ ಬರುವುದಿಲ್ಲ ಅದಕ್ಕಾಗಿ ಸಂಪೂರ್ಣವಾಗಿ ಈಗ ಇರತಕ್ಕಂಥ ಈ ತಿದ್ದುಪಡಿಯಿಂದ ಅನೇಕ ಜನರಿಗೆ ಅನುಕೂಲವಾಗುತ್ತದೆ. ಬಹುಶಃ ಎಲ್ಲರೂ ಕೂಡ ಇದನ್ನು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ಇದಕ್ಕೆ ಎಲ್ಲರೂ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕು. ಏಕೆಂದರೆ ಇದು ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ಒಂದು ತಿದ್ದುಪಡಿ ಇದೆ. ಇದರಿಂದ ಪ್ರಯೋಜನವಾಗುತ್ತದೆ ಎಂಬು ದೃಷ್ಟಿಯಿಂದ ಇದನ್ನು ತಂದಿದ್ದೇವೆ. ಎಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಸಿ. ಕೇಶಮೂರ್ತಿ ಅವರು ಅಧ್ಯಕ್ಷಪೀಠದಲ್ಲಿ ಉಪಸ್ಥಿತರಾದರು)

+ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದಿರತಕ್ಕ ಈ ಒತ್ತುವರಿ ಜಮೀನನ್ನು ಸಕ್ರಮಗೊಳಿಸತಕ್ಕ ಮಸೂದೆ ಏನಿದೆ, ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಒತ್ತುವರಿಯನ್ನು ಸಕ್ರಮಗೊಳಿಸತಕ್ಕ ಕೆಲಸ ನಮ್ಮ ಸರ್ಕಾರ ಇದ್ದಾಗಲೂ ಕೂಡ ನಡೆದಿತ್ತು. ಇದಕ್ಕೆ ಬಹಳಷ್ಟು ಕೆಲಸ ಆಗಲೂ ನಡೆದಿತ್ತು. ಆದರೆ, ಅವತ್ತು ಪ್ರಮುಖವಾದ ಪ್ರಶ್ನೆ ಅಡ್ಡಬಂದಿದ್ದು ಎಂದರೆ, ಈ ರಾಜ್ಯದಲ್ಲಿರತಕ್ಕ ಕಾಫಿ, ಟೀ ಪ್ಲಾಂಟೇಷನ್ ಬೆಳೆ ಏನಿದೆ, ಅಲ್ಲಿಯೂ ಕೂಡ ನೂರಾರು ಎಕರೆ, ಸಾವಿರಾರು ಎಕರೆ ಒತ್ತುವರಿ ಆಗಿರುವುದು ಇದೆ. ಈ ವಿಚಾರ ಅವತ್ತು ಅಡ್ಡಿಯಾಯಿತು. ಮತ್ತೆ ನಮ್ಮ ಬಯಲು ಪ್ರದೇಶದಲ್ಲಿರತಕ್ಕ ಸಣ್ಣಪುಟ್ಟ ಜನಗಳು, ತಮ್ಮ ಜಮೀನಿನ ಪಕ್ಕದಲ್ಲಿರುವ ಜಮೀನನ್ನು ಒತ್ತುವರಿ ಮಾಡಿರುವುದು ಹತ್ತಾರು ವರ್ಷಗಳಿಂದ ನಡೆದಿದೆ. 20-30 ವರ್ಷಗಳಿಂದ ಒತ್ತುವರಿ ಮಾಡಿಕೊಂಡು, ಸಾಗುವಳಿ ಮಾಡುತ್ತಿರುವುದೂ ಇದೆ. ಈ ವಿಚಾರದಲ್ಲಿ ಹಳ್ಳಿಗಳಲ್ಲಿ ಈ ಬಗ್ಗೆ ಒಂದಲ್ಲ, ಒಂದಕ್ಕಿಂತ ಹೆಚ್ಚಿಗೆ ಸಮಸ್ಯೆಗಳು ಇವೆ. ನಾವು ಹಳ್ಳಿಗಳಿಗೆ ಹೋದಾಗ ನಮ್ಮನ್ನು ಕೇಳುತ್ತಾರೆ. ನಾವು ಈ ಭೂಮಿಯನ್ನು 20 ವರ್ಷದಿಂದ ಉಳುತ್ತಿದ್ದೇವೆ, ನಮಗೆ ಖಾತೆ ಮಾಡಿಲ್ಲ, ಮಂಜೂರಾ ಮಾಡಿಲ್ಲ, ನಾವು ಈ ಭೂಮಿಯನ್ನು ಅಭಿವೃದ್ಧಿ ಮಾಡುವುದಕ್ಕಾಗುತ್ತಿಲ್ಲ ಎಂದು ಹೇಳುತ್ತಾರೆ. ಬ್ಯಾಂಕುಗಳಲ್ಲಿ ಇಲ್ಲವೇ ಸಹಕಾರ ಸಂಘಗಳಲ್ಲಿ ಸಾಲವಾಗಿ ಹಣ ತೆಗೆದುಕೊಂಡು, ಬೋರ್‌ವೆಲ್ ಹಾಕಿ, ಭೂಮಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಅವಕಾಶವಾಗುತ್ತಾ ಇಲ್ಲ, ಬ್ಯಾಂಕುಗಳಲ್ಲಿ ಸಾಲಸೋಲ ಸಿಕ್ಕುತ್ತಾ ಇಲ್ಲ, ಇದನ್ನು ಸರಿಪಡಿಸತಕ್ಕ ಕೂಗನ್ನು ಹತ್ತಾರು ವರ್ಷಗಳಿಂದ ಪ್ರತಿಯೊಂದು ಹಳ್ಳಿಯ ಜನಗಳಿಂದ ನಾವು ಕೇಳುತ್ತಿದ್ದೇವೆ. ಆ ಕೆಲಸವನ್ನು ಇವತ್ತಿನದಿವಸ ಮಾಡಿದ್ದಾರೆ, ಅದಕ್ಕಾಗಿ ಮತ್ತೊಂದು ಸಾರಿ ಅಭಿನಂದಿಸಬೇಕಾದುದು ನನ್ನ ಕರ್ತವ್ಯ. ಆದರೆ ಇದೇ ಸಂದರ್ಭದಲ್ಲಿ ಸರ್ಕಾರದ ನೀತಿಯನ್ನು ಖಂಡಿಸುತ್ತೇನೆ ಎನ್ನುವ ಮಾತನ್ನೂ ಹೇಳಬೇಕಾಗಿದೆ. ಇದಕ್ಕೆ ಕಾರಣವೇನೆಂದರೆ, ಇದಕ್ಕೆ ಮೊದಲು ಅಡ್ಡಿ ಬಂದಿದ್ದು ಪ್ಲಾಂಟೇಷನ್ ಜಮೀನು. ಪ್ಲಾಂಟೇಷನ್ ಜಮೀನು ಎಲ್ಲಿ ಒತ್ತುವರಿಯಾಗಿದೆ ಇದೇ ಅಡ್ಡಿ ಬಂದಿತ್ತು. ಇವತ್ತಿನ ವರೆಗೂ ಈ ಸಮಸ್ಯೆ ಬಗೆಹರಿದಿಲ್ಲ. ಇದು ಈ ಸರ್ಕಾರಕ್ಕೂ ಸಾಧ್ಯವಾಗಿಲ್ಲ. ನಮ್ಮ ಸರ್ಕಾರ ಇದ್ದಾಗಲೂ, ನಮ್ಮ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ಇದರ ಬಗ್ಗೆ ತೀವ್ರವಾಗಿ ಚರ್ಚೆ ಕೂಡ ನಡೆಯಿತು. ಚರ್ಚೆ ನಡೆದಾಗ ಈ ಪ್ಲಾಂಟೇಷನ್ ಬೆಳೆ ಏನಿದೆ, ಇದರ ಬಗ್ಗೆ ಯಾವ ರೀತಿ ತೀರ್ಮಾನ ಮಾಡಬೇಕು, ಎಂಬ ವಿಚಾರದಲ್ಲಿ ಗೊಂದಲಮಯ ಮತ್ತು ತದ್ವಿರುದ್ಧವಾದ ಅಭಿಪ್ರಾಯಗಳು ಬಂದಕಾರದಿಂದ, ಇದನ್ನೇ ನಪ ಇಟ್ಟುಕೊಂಡು, ಮಸೂದೆ ತಯಾರಾಗಿದ್ದರೂ ಕೂಡ ಇದುವರೆಗೂ ಕಾನೂನು ಆಗಲಿಲ್ಲ. ಇವತ್ತಿನ ಸರ್ಕಾರವೂ ಕೂಡ ಅವರ ಬಲೆಗೆ ಬಿದ್ದಿದೆ, ಅದೇ ತೆಕ್ಕೆಗೆ ಬಿದ್ದು, ಪ್ಲಾಂಟೇಷನ್ ಜಮೀನಿಗೆ ಮುಕ್ತಾಯ ಮಾಡುವುದಕ್ಕೆ ಮತ್ತು ಅದಕ್ಕೆ ಮುಕ್ತಿ ಕೊಡುವಂಥ ಕೆಲಸ ಮಾಡಿಲ್ಲ. ಈ ಸರ್ಕಾರದ ನೀತಿಯನ್ನು ಖಂಡಿಸದೇ ಇರುವುದಕ್ಕೆ ಸಾಧ್ಯವಿಲ್ಲ ಮತ್ತು ಖಂಡಿಸಬೇಕಾದುದು ನನ್ನ ಕರ್ತವ್ಯವೆಂದು ಹೇಳುತ್ತೇನೆ. ಈ ಪ್ಲಾಂಟೇಷನ್ ಬೆಳೆಗಾರರು ಏನಿದ್ದಾರೆ, ಅವರ ತೆಕ್ಕೆಗೆ ಸಂಪೂರ್ಣವಾಗಿ ಈ ಸರ್ಕಾರ ಬಿದ್ದಿದೆ. ಈ ವಿಚಾರದಲ್ಲಿ ಚಕಾರ ಎತ್ತುವುದಕ್ಕೆ ಇವರು ತಯಾರಿಲ್ಲ, ಪ್ಲಾಂಟೇಷನ್ ಬೆಳೆ ಜಮೀನನ್ನು ಏನು ಒತ್ತುವರಿ ಮಾಡಿದ್ದಾರೆ, ಈ ವಿಚಾರದಲ್ಲಿ ಸರ್ಕಾರದವರು ಚಕಾರ ಎತ್ತುವುದಕ್ಕೆ ತಯಾರು ಇಲ್ಲ, ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೆಂದು ಹೇಳದೆ ಇರುವುದಿಲ್ಲ. ಈ

ವಿಚಾರದಲ್ಲಿ ಸರ್ಕಾರದವರು ಏಕೆ ಮಾಡಲಿಲ್ಲ. ಇದನ್ನು ಯಾವು ರೀತಿ ಮಾಡಬೇಕು, ಹೇಗೆ ಮಾಡಬೇಕೆಂಬ ಬಗ್ಗೆ ಕಾನೂನು ತನ್ನಿ, ಇವತ್ತು ಸಾವಿರಾರು ಎಕರೆ ಒತ್ತುವರಿಯಾಗಿದೆ. ಇದಕ್ಕೆ ಕಂದಾಯ ಇಲ್ಲ, ಮತ್ತೊಂದು ಇಲ್ಲ, ಎಷ್ಟೋ ವರ್ಷಗಳಿಂದ ಸರ್ಕಾರಿ ಜಮೀನನ್ನು ಅನುಭವಿಸುತ್ತಿದ್ದಾರೆ, ಸಾಕಷ್ಟು ಆದಾಯ ಪಡೆಯುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಏನೇನೂ ಆದಾಯ ಬರುತ್ತಿಲ್ಲ, ಯಾವ ಆದಾಯವೂ ಇಲ್ಲ, ಅವರು ಮಾತ್ರ ಸರ್ಕಾರಿ ಜಮೀನನ್ನು ಅನುಭವಿಸುತ್ತಿದ್ದಾರೆ. ಇದನ್ನು ಯಾವರೀತಿ ಸಕ್ರಮಗೊಳಿಸಬೇಕೆಂಬ ಬಗ್ಗೆ ತಾವು ಕಾನೂನು ತನ್ನಿ. ಇವತ್ತು, ನೀವು ಇದನ್ನು ಮಾಡಿರುವುದಕ್ಕೆ ಸ್ವಾಗತ ಇದೆ. ಆದರೆ ಪ್ಲಾಂಟೇಷನ್‌ನಲ್ಲಿ ಆಗಿರತಕ್ಕ ಒತ್ತುವರಿಯನ್ನು ಕೈಬಿಟ್ಟಿದ್ದೀರಿ. ಅವರ ತೆಕ್ಕೆಗೆ ನೀವು ಬಿದ್ದಿದ್ದೀರಿ. ಅವರ ಮುಲಾಜಿಗೆ ಬಿದ್ದಿದ್ದೀರಿ, ಅವರ ಜೊತೆಯಲ್ಲಿ ಶಾಮೀಲಾಗಿದ್ದೀರಿ ಎಂದು ಹೇಳದೇ ಇರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ, ಇದನ್ನೂ ಸಕ್ರಮಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಯಾವ ರೀತಿ ಮಾಡಬೇಕು, ಹೇಗೆ ಮಾಡಬೇಕೆಂಬ ಬಗ್ಗೆ ಚರ್ಚೆ ಮಾಡೋಣ. ವಿರೋಧಪಕ್ಷದವರನ್ನೂ ಚರ್ಚೆಗೆ ಕರೆಯಿರಿ. ನಾವೂ ಕೂಡ ಸಲಹೆಗಳನ್ನು ಕೊಡುವುದಕ್ಕೆ ಸಿದ್ದವಿದ್ದೇವೆ. ಇದನ್ನು ಸಕ್ರಮ ಗೊಳಿಸುವಂಥ ಸಂದರ್ಭದಲ್ಲಿ ನಮ್ಮನ್ನೂ ಕರೆಯಬೇಕು ಮತ್ತು ಈ ವಿಚಾರದಲ್ಲಿ ನಿದಾನ ಮಾಡಬಾರದು, ಜಾಗ್ರತೆಯಾಗಿ ಕಾನೂನು ತರಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ಸನ್ಮಾನ್ಯ ಬೈರೇಗೌಡರು ಹೇಳಿದಹಾಗೆ, ಈ ಕಾನೂನನ್ನು ನಮ್ಮ ಕಾಲದಲ್ಲೇ ತರಬೇಕೆಂದು ಮಾಡಿದ್ದೆವು. ಕಾರಣಾಂತರದಿಂದ ತರುವುದಕ್ಕೆ ಆಗಲಿಲ್ಲ. ಈಗ ತಂದಿದ್ದಾರೆ. ಅದಕ್ಕಾಗಿ ನಾನು ಮಂತ್ರಿಗಳನ್ನು ಹಾಗೂ ಸರಕಾರವನ್ನು ಅಭಿನಂದಿಸುತ್ತೇನೆ. ಒಂದೆರಡು ಮೂರು ವಿಷಯಗಳ ಬಗ್ಗೆ ಅವರ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ನಾನು ಇದಕ್ಕೆ ಎರಡು ಅಮೆಂಡ್‌ಮೆಂಟ್ಸ್ ಕೂಡಾ ಕಳುಹಿಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಬಗ್ಗೆ ನಾವು ಒಪ್ಪಿಕೊಂಡಿದ್ದೇವಲ್ಲ.. ಅಫಿಷಿಯಲ್ ಅಮೆಂಡ್‌ಮೆಂಡ್ಸ್ ಕೂಡಾ ನಾವು ಮೂವ್ ಮಾಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಒಂದು ಮಾಡಿರುತ್ತೀರಿ. ಇನ್ನೂ ಎರಡು ಇವೆ. ಆ ಎರಡರ ಕಡೆಗೆ ತಮ್ಮ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ."In Clause 5 (b) in the first proviso to Section 94 A in line 2 for the words 'two' the words 'Four' shall be substituted.

ಅಲ್ಲೇನು ಮಾಡಿರುತ್ತೀರಿ ತಾವು ಎಂದರೆ, "ಡಿ" ಕ್ಲಾಸ್ ಜಮೀನನ್ನು ಅವನಿಗೇನಾದರೂ ಜಮೀನು ಇದ್ದರೆ ಮತ್ತು ಸರಕಾರದಿಂದ ಏನು ಕೊಡುತ್ತಿದ್ದೀರಿ, ಆ ಜಮೀನು ಎರಡೂ ಸೇರಿಸಿ ಐದು ಎಕರೆಗಿಂತ ಮೇಲೆ ಇರಬಾರದು ಎಂದು ಮಾಡಿರುತ್ತೀರಿ. ಐದು ಎಕರೆ ಖುಷ್ಕಿ ಜಮೀನು ತೆಗೆದುಕೊಂಡು ಅವನು ಏನು ಮಾಡುವದು, ಅದನ್ನು ಯಾವುದೇ ರೀತಿ ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ದುರಾದೃಷ್ಟವಶಾತ್ ಎಸ್.ಸಿ, ಎಸ್. ಟಿ. ಮತ್ತು ಬ್ಯಾಕ್‌ವರ್ಡ್ ಟ್ರೈಬ್‌ನವರಿಗೆ ಮಕ್ಕಳು ಜಾಸ್ತಿ. 5-6-8 ಜನ ಮಕ್ಕಳು ಇದ್ದರೆ, ಅವರಿಗೆ ಐದು ಎಕರೆ ಜಮೀನು ತೆಗೆದುಕೊಂಡು ಜೀವನ ಮಾಡಿ ಎಂದರೆ ಆಗುವುದಿಲ್ಲ.

ಅವರಿಗೆ ವಿದ್ಯಾಭ್ಯಾಸ ಕೂಡ ಇಲ್ಲ, ಕಡೇ ಪಕ್ಷ ಹತ್ತು ಎಕರೆಯಾದರೂ ಅಂದರೆ ನಾಲ್ಕು ಹೆಕ್ಟೇರ್ಸ್ ಮಾಡದೇ ಇದ್ದರೆ, ಜಮೀನು ಕೊಟ್ಟೂ ಏನೂ ಉಪಯೋಗ ಆಗುವುದಿಲ್ಲ. ಅದರ ಮೇಲೆ ಸಫಿಷಿಯಂಟ್ ಆಗಿ ಸಾಲ ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ಆದುದರಿಂದ ದಯವಿಟ್ಟು ರಿಕನ್ಸಿಡರ್ ಮಾಡಿ ಎರಡು ಹೆಕ್ಟೇರ್‌ಗೆ ಬದಲು ನಾಲ್ಕು ಹೆಕ್ಟೇರ್ ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ಸಲಹೆ ಎಂದರೆ "In the first proviso of Sub-section 2 of section 94, after the words 'scheduled tribe' the words backward classes'

ಇದರಲ್ಲಿ ತಾವು ಅವರಿಗೆ ಹಣ ಫಿಕ್ಸ್ ಮಾಡಿರುತ್ತೀರಿ.

"Provided that the amount payable shall be One-twentieth of the amount payable where he is a person belonging to the scheduled caste or scheduled tribe" ಎಂದು ಹೇಳಿದ್ದೀರಿ. ಈ ಬಗ್ಗೆ ನಾನು ಹೇಳುವುದೇನೆಂದರೆ, ಬ್ಯಾಕ್‌ವರ್ಡ್ ಕ್ಲಾಸಸ್ ಆಲ್ಲೋ ಎಂದು ಸೇರಿಸಿ ಎಂದು ಹೇಳಿದ್ದೇನೆ. ತಾವು ಇದನ್ನು ಗಣನೆಗೆ ತೆಗೆದುಕೊಳ್ಳಬೇಕು. ಒಂದು ವಿಚಾರದ ಬಗ್ಗೆ ತಾವು ಸ್ಟ್ರಿಕ್ಟ್ ಆಗಿ ಇನ್‌ಸ್ಟ್ರಕ್ಷನ್ಸ್ ಕೊಡಬೇಕಾಗುತ್ತದೆ. ಈ ಗುಂಡು ತೋಪು, ಕೆರೆ ಅಂಗಳ, ಸ್ಮಶಾನ ಇವು ಯಾವುದೇ ಆಗಿರಲಿ ಎಂತದವರೇ ಇದನ್ನು ಒತ್ತುವರಿ ಮಾಡಿರಲಿ, ಈ ಮೂರು ವರ್ಗದ ಜಮೀನನ್ನು ಯಾವುದೇ ಕಾರಣದಿಂದ ರೆಗ್ಯುಲರೈಸ್ ಮಾಡಬಾರದು. ಈ ಮೂರು ವರ್ಗದ ಜಮೀನುಗಳನ್ನು ಕಾಯ್ದಿರಿಸಬೇಕು. ಇದರ ಬಗ್ಗೆ ಒಂದು ಸಮಿತಿ ಮಾಡಿರುತ್ತೀರಿ. ಇದರಲ್ಲಿ ಶಾಸಕರು ಮತ್ತು ತಹಸೀಲ್ದಾರರು ಮತ್ತು ಇನ್ನೊಬ್ಬರು ಯಾರು? ಇದಕ್ಕೆ ಯಾರನ್ನು ಹಾಕುತ್ತೀರಿ ಎಂಬುದನ್ನು ಕ್ಲಾರಿಫೈ ಮಾಡಬೇಕು. ಇದನ್ನು ಹಾಕಬೇಕಾದರೆ, ಸೋಷಿಯಲ್ ವೆಲ್‌ಫೇರ್ ಇಲಾಖೆಯ ಅಧಿಕಾರಿ specially belonging to scheduled caste or scheduled tribe or backward classes.

ಈ ಮೂರರಲ್ಲಿ ಯಾರನ್ನಾದರೂ ಒಬ್ಬರನ್ನು ಹಾಕುವುದು ಮೇಲು ಅಂದು ಕೊಂಡಿದ್ದೇನೆ. ಬಹಳಷ್ಟು ಜನ ಶಾಸಕರು ಅಧ್ಯಕ್ಷರಾಗಿರುವುದು ಬೇಡ ಎಂದು ವಿರೋಧ ಮಾಡುತ್ತಿದ್ದಾರೆ. ನನ್ನದೂ ವಿರೋಧವಿದೆ. ಆದರೆ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುವಾಗ ಇದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಶಾಸಕರಿಗೆ ಏನೂ ಕೊಡುವುದು ಬೇಡ, ಮನೆಯಲ್ಲಿ ಇರಲಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದನ್ನು ಮಾಡಿದ್ದೀರಿ. ಇದರ ಬಗ್ಗೆ ಸ್ವಲ್ಪ ರಿಸ್ಟ್ರಿಕ್ಷನ್ ಹಾಕಿ. ನಿಮ್ಮ ಪಕ್ಷದ ಶಾಸಕರನ್ನು ಕಂಟ್ರೋಲ್ ಮಾಡಿ, ಬೇಗ ಜಮೀನು ಹಂಚುವುದಕ್ಕೆ ವ್ಯವಸ್ಥೆ ಮಾಡಿರಿ. ನನ್ನ ತಾಲ್ಲೂಕಿನ ತೇಗನಹಳ್ಳಿಯಲ್ಲಿ ಏನು ನಡೆಯುತ್ತಿದೆ ಎಂದು ಹೇಳುತ್ತೇನೆ. ಅಲ್ಲಿ ಸುಮಾರು 65 ಜನಕ್ಕೆ ಜಮೀನು ಹಂಚಿದ್ದಾರೆ. ಅದರಲ್ಲಿ 25-30 ಜನ ಹೊರಗಡೆಯವರೇ ಇದ್ದಾರೆ. ಅವರು ಆ ಜಮೀನನ್ನು ಮಾಡುತ್ತಿಲ್ಲ, ಅದೇ ಊರಿನವರು ಎಸ್.ಸಿ, ಎಸ್.ಟಿ, ಮತ್ತು ಬಿ.ಟಿ ಜನರು ಮಾಡಿಕೊಂಡಿದ್ದಾರೆ. ಅಧಿಕಾರಿಗಳು ಅದೆಲ್ಲಾ ಇಲ್ಲ ಎಂದು ಹೇಳಿ ಬೇರೆಯವರಿಗೆ ಪೊಸೆಷನ್ ಸರ್ಟಿಫಿಕೇಟ್ ಕೊಟ್ಟಿದ್ದೇವೆ. ಆ ಜಮೀನಿನಿಂದ ನಿಮ್ಮನ್ನು ಎವಿಕ್ಟ್ ಮಾಡಿಸುತ್ತೇವೆ, ಬಿಟ್ಟು ಕೊಡಿ ಎಂದು • ಹೇಳುತ್ತಿದ್ದಾರೆ. ಯಾರೋ ಡ್ರೈವರ್ಸ್ ಆಗಿರುವವರು, ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವರು ಇದ್ದಾರೆ, ಯಾರು ಪಂಪ್‌ಸೆಟ್ ಹಾಕಿಕೊಂಡಿದ್ದಾರೆ ಅಂತಹಜನರಿಗೆ ಹೋಗದಹಾಗೆ ಮಾಡಬೇಕು. ಯಾರು 8-10 ವರ್ಷದಿಂದ ಆ ಜಮೀನಿನಲ್ಲಿ ಇದ್ದಾರೆ, ಅವರಿಗೆ ಕೊಡಬೇಕು. ಬೇರೆಯವರಿಗೆ ಪೊಸೆಷನ್

ಸರ್ಟಿಫಿಕೇಟ್ ಕೊಟ್ಟು ಎವಿಕ್ಟ್ ಮಾಡಿಸುವುದಕ್ಕೆ ಆಗುವುದಿಲ್ಲ. ಹಾಗೆ ಮಾಡಲೂ ಕೂಡದು. ಇದರ ಬಗ್ಗೆ ನಿಮ್ಮ ಸಮಿತಿಯವರಿಗೆ ಡೆಫಿನೆಟ್ ಇನ್‌ಸ್ಟ್ರಕ್ಷನ್ಸ್ ಕೊಡಬೇಕಾಗುತ್ತದೆ.

ಎರಡನೆಯದಾಗಿ ನನ್ನ ತಾಲ್ಲೂಕಿನಲ್ಲಿ ಕಲ್ಲುಗುಂಡೆ ಎನ್ನುವ ಒಂದು ಗ್ರಾಮ ಇದೆ. ಅಲ್ಲಿ ಸುಮಾರು 30 ವರ್ಷಗಳಿಂದ 22 ಎಕರೆ ಜಮೀನು ಪಾಡಾ ಇದೆ. ಅದಕ್ಕೆ ಸರ್ವೆ ನಂಬರು ಇದೆ. ಅದು ಸುಮಾರು 30 ವರ್ಷಗಳಿಂದ ಪಾಡಾ ಬಿದ್ದಿದೆ. ಆ ಜಮೀನಿನ ಜನರು ಅದನ್ನು ಕಲ್ಟಿವೇಟ್ ಮಾಡುತ್ತಿಲ್ಲ. ಆ ಜಮೀನನ್ನು ಸುಮಾರು 15 ವರ್ಷಗಳಿಂದ 6-7 ಜನ ಸೇರಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಈಗ ಮೊನ್ನೆ ಒಂದು ಆರ್ಡರ್ ಮಾಡಿದ್ದಾರೆ. ಆರು ತಿಂಗಳ ಹಿಂದೆ, ಅದನ್ನು ರೆಸ್ಟೋರ್ ಮಾಡಿ ಪುನಃ ಅವರಿಗೆ ಕೊಡಿ ಎಂದು. ಪೊಜಿಷನ್‌ನಲ್ಲಿ ಇರಲಿಲ್ಲ. ಆದರೂ ವಾಪಸ್ ಕೊಡಬೇಕೆಂದು ಹೇಳಿದ್ದೀರಿ. ಅದನ್ನು ಪುನಃ ರೆಸ್ಟೋರ್ ಮಾಡಿ ಖಾತೆ ಚೇಂಜ್ ಮಾಡಿ ಕೊಟ್ಟಿದ್ದಾರೆ. ಇದು ಯಾವ ನ್ಯಾಯ? ನಾನು ತಹಶೀಲ್ದಾರ್ ಬಳಿ ಹೋಗಿ ಕೇಳಿದೆ. ಏನ್ರಿ ಇದು ಯಾವ ಕಾನೂನು ಪ್ರಕಾರ ಮಾಡಿದಿರಿ ಎಂದು ಕೇಳಿದ್ದಕ್ಕೆ ಅವರು ಒಂದು ಸರ್ಕ್ಯುಲರ್ ತೋರಿಸಿದರು. ಆ ಸರ್ಕ್ಯುಲರ್‌ನಲ್ಲಿ ಏನು ಇದೆ. ಪುನಃ ಈ ಬಗ್ಗೆ ಅರ್ಜಿಗಳು ಬರುತ್ತಿವೆ. ಕಳೆದ ನಾಲ್ಕು ವರ್ಷಗಳಿಂದ ಪುನಃ ಅವರಿಗೆ ಇನ್ನೊಂದು ಅವಕಾಶ ಕೊಟ್ಟರೆ ಅವರು ಪಾಡಾ ಬಿದ್ದಿರುವ ಜಮೀನಿಗೆ ಕಂದಾಯ ಕಟ್ಟುತ್ತೇವೆ, ನಮ್ಮ ಹೆಸರಿಗೆ ಮಾಡಿಕೊಡಿ ಎಂದು ಕೇಳಿಕೊಂಡಿದ್ದಾರೆ. ಇಂತಹ ಕೇಸ್‌ಗಳು ಯಾವುದಾದರೂ ಇದ್ದರೆ ನೀವು ಎಲ್ಲಾ ಕನ್‌ಸಾಲಿಡೇಟ್ ಮಾಡಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಿ. ಈಗ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡುತ್ತಿದ್ದೇವೆ ಎಂದು ಹೇಳಿ ಒಂದು ಸುತ್ತೋಲೆ ಇದೆ, ಇಲ್ಲಿ "Provided he is in possession of such lands. ಎಂದು ಹೇಳಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಕಲ್ಲುಗುಂಟೆ ಗ್ರಾಮದಲ್ಲಿ 30 ವರ್ಷಗಳಿಂದ ಅವರು ಪೊಜಿಷನ್‌ನಲ್ಲಿ ಇಲ್ಲ. ಅದು ಸರ್ಕಾರದ ಲ್ಯಾಂಡ್ ಆಗಿದೆ. ಅಲ್ಲಿ 6-7 ಜನ 15 ವರ್ಷಗಳಿಂದ ಜಮೀನನ್ನು ಮಾಡುತ್ತಿದ್ದಾರೆ. ಅವರ ಹೆಸರಿನಲ್ಲಿ ಪಹಣಿ ಇದೆ. ಮತ್ತು ಅವರು ಟಿ.ಟಿ. ಫೈನ್ ಸಹ ಕಟ್ಟಿದ್ದಾರೆ. ಅಂತಹ ಜಮೀನನ್ನು ಕಿತ್ತುಕೊಳ್ಳುವುದು ಯಾವ ನ್ಯಾಯ? ಹಿಂದೆ ಯಾರ ಹೆಸರಲ್ಲಿ ಖಾತೆ ಇತ್ತೋ, ಅವರಿಗೆ ರಾಜಕೀಯ ಆಶ್ರಯ ಇದ್ದರೆ ಮತ್ತೆ ಅವರಿಗೆ ಇದನ್ನು ಕೊಟ್ಟರೆ ಈಗ ಯಾರು ಕಲ್ಟಿವೇಟ್ ಮಾಡುತ್ತಿದ್ದಾರೋ ಅವರಿಗೆ ತೊಂದರೆಯಾಗುತ್ತದೆ. ಈಗ ಯಾರು ಪೊಜಿಷನ್‌ನಲ್ಲಿ ಇದ್ದಾರೆ ಅವರಿಗೇ ಈ ಜಮೀನು ಕೊಡಬೇಕೆಂದು ತೀರ್ಮಾನವನ್ನು ಕಡ್ಡಾಯವಾಗಿ ತಾವು ಸಮಿತಿಯವರಿಗೆ ಹೇಳಬೇಕಾಗುತ್ತದೆ. ತಾವು ಇಂತಾದ್ದನ್ನೆಲ್ಲಾ ಆ ಕಮಿಟಿಗೆ ರೆಫರ್ ಮಾಡುತ್ತೇವೆಂದು ಹೇಳಿದ್ದೀರಿ. These are all the prescriptions you have to give to the Committee. ಅಂತಹ ಹೇಳಿ ಈ ಒಂದು ನನ್ನ ಅನಿಸಿಕೆ. ತಾವು ಆದಷ್ಟು ಬೇಗ ಅಂದರೆ ಇನ್ನು 3 ತಿಂಗಳಲ್ಲಿ ರೆಗ್ಯುಲರೈಜ್ ಮಾಡಿದರೆ ಮುಂದಿನ ವರ್ಷದಲ್ಲಿ ಯಾರಿಗೆ ಜಮೀನು ಸಿಗುತ್ತದೆಯೋ ಅವರು ಮುಂದಿನ ವರ್ಷ ಡೆವಲಪ್‌ಮೆಂಟ್ ಲೋನ್ ತೆಗೆದುಕೊಂಡು ಅದನ್ನು ಅಭಿವೃದ್ಧಿ ಮಾಡಿಕೊಂಡು ಜೀವನ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಬೇಗ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ತಾವು ತಂದಿರತಕ್ಕಂಥ ಮಸೂದೆಯನ್ನು ನಾನು ಸ್ವಾಗತ ಮಾಡಿ ಮಾನ್ಯ ಸದಸ್ಯರಾದ ಬೈರೇಗೌಡರು ಹೇಳಿದ ಹಾಗೆ ಕಾಫಿ ಪ್ಲಾಂಟರ್ಸ್ ಏನು ಒತ್ತುವರಿ ಮಾಡಿದ್ದಾರೆ. ಅದರ ಲಾಭ ಸರ್ಕಾರಕ್ಕೆ

ಇಲ್ಲ, ಅವರು ಸಾಗು ಮಾಡಿಕೊಂಡು ಅನುಭವಿಸುತ್ತಿದ್ದಾರೆ. ಆದ್ದರಿಂದ ಆ ಜಮೀನನ್ನು ಅವರಿಗೆ ಕೊಟ್ಟು ಒಂದು ನೂರು ರೂಪಾಯಿ ಹೆಚ್ಚು ಕಡಿಮೆ ಅವರಿಗೆ ಬಿಟ್ಟು ಕೊಟ್ಟರೆ ಆದರಿಂದ ಸರ್ಕಾರಕ್ಕೆ ಬರತಕ್ಕಂಥ ಆದಾಯ ಬರುತ್ತದೆ. ಇದು ನನ್ನ ಸ್ವಂತ ಅಭಿಪ್ರಾಯ ತಾವು ಇದನ್ನು ಪರಿಗಣಿಸುತ್ತೀರೆಂದು ಸರ್ಕಾರಕ್ಕೆ ಸೂಚನೆ ಕೊಟ್ಟು ಇದನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೇ ಬಹುಶಃ ಸರ್ಕಾರದವರು ಏನು ಒಂದು ಕಾಯ್ದೆಯನ್ನು ತಂದಿದ್ದಾರೆ, ಅದನ್ನು ನಾನು ಸ್ವಾಗತಿಸಿ ನಾವು ಶಾಸಕರಾದ ಮೇಲೆ ಅನೇಕ ಜನ ತಮ್ಮ ತಾಲ್ಲೂಕುಗಳಲ್ಲಿ ಮತ್ತು ಬೇರೆ ಬೇರೆ ತಾಲ್ಲೂಕುಗಳಲ್ಲಿ ಜನರು ಕೇಳುತ್ತಿದ್ದರು. ಏನೆಂದರೆ ನಾವು ಎಷ್ಟೋ ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿದ್ದೇವೆ, ಇದನ್ನು ನಮಗೆ ಖಾಯಂ ಮಾಡಿಕೊಡುವುದಿಲ್ಲವೇ ಎಂದು. ಈಗ ಈ ಕಾಯ್ದೆ ಬಂದಿದೆ. ಇದರ ಬಗ್ಗೆ ನಾನು ಕೆಲವು ಕ್ಲಾರಿಫಿಕೇಶನ್ಸ್ ಕೇಳುತ್ತೇನೆ. ಹಳ್ಳಿಗಳ ಪಕ್ಕದಲ್ಲಿ ಅರ್ಧ ಫರ್ಲಾಂಗ್ ಒಂದು ಫರ್ಲಾಂಗ್‌ನಲ್ಲಿ ಇರತಕ್ಕಂಥ ಸರ್ಕಾರದ ಜಾಗವನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಅಂತಹ ಜಮೀನುಗಳನ್ನು ಸರ್ಕಾರ ಏನು ಮಾಡುತ್ತೀರಿ? ಎರಡನೆಯದಾಗಿ ಮಾನ್ಯ ಸದಸ್ಯರಾದ ಜಾಲಪ್ಪನವರು ಹೇಳಿದಹಾಗೆ ಕೆರೆ ಅಂಗಳ ಮತ್ತು ಗೋಮಾಳ ಮತ್ತು ಸ್ಮಶಾನ ಈ ಜಾಗಗಳನ್ನು ಸಹ ಒತ್ತುವರಿ ಮಾಡಿದ್ದರೆ ಏನು ಮಾಡುತ್ತೀರಿ? ಆಮೇಲೆ ಈ ಕಾಯ್ದೆ ಈಗ ಏನು ಮಾಡಿದ್ದೀರಿ ಬಹುಶಃ ಅದು ಪತ್ರಿಕೆಗಳಲ್ಲಿ ಬಂದ ತಕ್ಷಣ ಈ ಜಮೀನುಗಳಲ್ಲಿರತಕ್ಕಂಥ ಮರಗಳು ಯಾವುವು ಇವೆ, ಆ ಮರಗಳು ಸರ್ಕಾರದ ಮರಗಳಾಗಿರುತ್ತವೆ. ಇವು ಸರ್ಕಾರದ ವಿವೇಚನೆಗೆ ಒಳಪಟ್ಟ ಮರಗಳು ಇವುಗಳನ್ನು ಸೂಕ್ತ ರೀತಿಯಲ್ಲಿ ವಿಲೇ ಮಾಡಬೇಕೆಂದು ಇದೆ. ಇವತ್ತು ಈ ವಿಷಯ ಪತ್ರಿಕೆಗಳಲ್ಲಿ ಬಂದ ತಕ್ಷಣ ಬಗರ್ ಹುಕುಂ ಸಾಗುವಳಿ ಮಾಡಿರತಕ್ಕಂಥ ಜನ ಈ ಮರಗಳನ್ನು ಕಡಿದು ಮಾರಾಟ ಮಾಡುವುದಕ್ಕೆ ಶುರು ಮಾಡುತ್ತಾರೆ. ಆದ್ದರಿಂದ ಸಾಧ್ಯವಾದಷ್ಟು ಜಾಗ್ರತೆ ಅಂದರೆ ಇವತ್ತೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ತಹಶೀಲ್ದಾರರಿಗೆ ಸುತ್ತೋಲೆ ಕಳುಹಿಸಿ ಎಲ್ಲೆಲ್ಲಿ ಇಂತಹ ಮರಗಳು ಇವೆಯೋ ಅವುಗಳನ್ನು ಲೆಕ್ಕ ಹಾಕಿ ಒಂದು ಪಟ್ಟಿ ಮಾಡಿದರೆ ಅದರಿಂದ ಸರ್ಕಾರಕ್ಕೆ ಆದಾರಬರಬಹುದು.

ಅದು ಬಿಟ್ಟುಬಿಟ್ಟು ಇವರು ಸುಮ್ಮನೆ ಕುಳಿತು, ಡಿವಿಜನಲ್ ಕಮಿಷನರ್‌ರವರಿಂದ ರೆವಿನ್ಯೂ ಕಮಿಷನರ್, ಡೆಪ್ಯುಟಿ ಕಮಿಷನರ್, ಅಲ್ಲಿಂದ ತಹಶೀಲ್ದಾರ್ ಎಂದರೆ ಇನ್ನೂ ಒಂದೂ ಒಂದೂವರೆ ತಿಂಗಳಾದರೂ ಅಲ್ಲಿಗೆ ಇವರು ಸುತ್ತೋಲೆ ತಲುಪುವುದಿಲ್ಲ, ಎಲ್ಲಾ ಕಡೆಗೂ ಟೆಲೆಕ್ಸ್ ಮೆಸೇಜ್ ಕಳುಹಿಸುವ ಅನುಕೂಲ ಇರುವುದರಿಂದ ಕೂಡಲೇ ಎಲ್ಲಾ ತಹಶೀಲ್ದಾರ್‌ಗಳಿಗೂ ಟೆಲೆಕ್ಸ್ ಮೆಸೇಜ್ ಕಳುಹಿಸಿ ಎಲ್ಲೆಲ್ಲಿ ಎಷ್ಟೆಷ್ಟು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೋ ಅಲ್ಲಿ ಎಷ್ಟು ಗಿಡ ಮರಗಳು ಇವೆ ಹಾಗೂ ಅವುಗಳು ಎಷ್ಟು ವ್ಯಾಲ್ಯು ಆಗುತ್ತದೆ ಎಂಬುದನ್ನೆಲ್ಲಾ ಪಟ್ಟಿ ಹಾಕಬೇಕು. ಇಲ್ಲದಿದ್ದರೆ ಕನ್‌ಸರ್ನ್ಡ್ ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ವಿಲೇಜ್ ಅಕೌಂಟೆಂಟ್ ಶಾಮೀಲಾಗಿ ಇನ್ನೊಂದು ವಾರದಲ್ಲಿ ಯಾವ ಗಿಡ ಮರಗಳು ಇಲ್ಲದ ಹಾಗೆ ಮಾಡುತ್ತಾರೆ. ಇನ್ನು ಎರಡನೆಯದು, ಎಕ್ಸೆಸ್ ಲ್ಯಾಂಡ್‌ನ್ನು, ಅಕ್ವೈರ್ ಮಾಡಿಕೊಂಡ ಮೇಲೆ ಅಂಥಾ ಜಮೀನುಗಳನ್ನು ಪಬ್ಲಿಕ್ ಪರ್ಪಸ್‌ಗೋಸ್ಕರ ಉಪಯೋಗಿಸಬೇಕು. ಏನು ಪಬ್ಲಿಕ್ ಪರ್ಪಸ್? ಕೆಲವು ಹಳ್ಳಿಗಳಲ್ಲಿ ಸ್ಮಶಾನಕ್ಕೆ ಜಾಗವೇ ಇಲ್ಲ, ಮೊನ್ನೆ ಯಾರೋ ಹೇಳುತ್ತಿದ್ದರು. ನಾವು ಸತ್ತರೆ

ಹೂಳುವುದಕ್ಕೂ ಜಾಗ ಇಲ್ಲ ಏನು ಮಾಡುವುದೆಂದು ಕೇಳುತ್ತಿದ್ದರು. ಆದ್ದರಿಂದ ಎಲ್ಲೆಲ್ಲಿ ಜಾಗಗಳನ್ನು ವಶಪಡಿಸಿಕೊಳ್ಳುತ್ತೀರೋ ಅಂಥಾ ಕಡೆ ಸ್ಮಶಾನಕ್ಕಾಗಿ ಜಾಗಗಳನ್ನು ರಿಸರ್ವ ಮಾಡಿಸಿ, ಸ್ಕೂಲ್‌ಗಳನ್ನು ಕಟ್ಟುವುದಕ್ಕೆ ರಿಸರ್ವ್ ಮಾಡಿಸಬೇಕು, ಮಂಡಲ ಪಂಚಾಯಿತಿ ಆಫೀಸ್‌ಗಳಿಗೆ ಜಾಗ ಬಿಡಬೇಕು, ಆಮೇಲೆ ಮಕ್ಕಳಿಗೆ ಆಟದ ಮೈದಾನಕ್ಕೆ ಜಾಗ ಬಿಡಬೇಕು. ಇದಕ್ಕೆಲ್ಲಾ ನೀವು ಜಮೀನುಗಳನ್ನು ರಿಸರ್ವ್ ಮಾಡಬೇಕು. ಇವಕ್ಕೆ ತಕ್ಷಣ ರೂಲ್ ಮಾಡಬೇಕು. ಈ ಬಗ್ಗೆ ಮೂರು, ನಾಲ್ಕು, ಐದು ತಿಂಗಳು ಆದರೂ ರೂಲ್ಸ್ ಮಾಡುವುದಿಲ್ಲ. ಆದಷ್ಟು ಬೇಗನೆ ಮಾಡಬೇಕು. ನಮ್ಮ ಖರ್ಗೆಯವರು ಬಹಳ ಚಟುವಟಿಕೆಯಿಂದ ಇದ್ದಾರೆ. ಈ ಬಗರ್ ಹುಕುಂ ಸಾಗುವಳಿ ಮಂಜೂರು ಮಾಡುವುದಿದ್ದರೆ ಇನ್ನೊಂದು ತಿಂಗಳೊಳಗೆ ಮಾಡಿ ಕಳುಹಿಸಿಕೊಟ್ಟರೆ ಒಳ್ಳೆಯದು. 6 ತಿಂಗಳು ಅರ್ಜಿಗಳನ್ನು ಕೊಡುವುದಕ್ಕೆ ಸಮಯ ಇಟ್ಟಿದ್ದೀರಿ. 6 ತಿಂಗಳೊಳಗೆ ಬೇಕಾದಷ್ಟು ರೆಡಿಯಾಗಿರುತ್ತದೆ, ತಕ್ಷಣ ಅಂತಹ ಫೈಲ್ಸ್ ಡಿಸ್ಪೋಸ್ ಮಾಡಬಹುದು ಅಲ್ಲವೇ? We need not wait uptill six months.

ಸಪೋಸ್ ಈವಾಗ ಟಿ.ಟಿ.ಹಾಕಿ ಅಥವಾ ಫೈಲ್ಸ್ ರೆಡಿಯಾಗಿದ್ದರೆ, ಅವುಗಳನ್ನು ಡಿಸ್ಪೋಸ್ ಮಾಡಬಹುದಲ್ಲಾವ? ಇದರ ಬಗ್ಗೆ ನನಗೆ ಒಂದು ಕ್ಲಾರಿಫಿಕೇಷನ್ ಬೇಕು. ಆಮೇಲೆ ಈ ಹಣ ಮೂರು ಕಂತಿನಲ್ಲಿ ಕೊಡಬೇಕೆಂದು ಹೇಳುತ್ತಿದ್ದೀರಿ. ಶೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ನಮ್ಮ ಸರ್ಕಾರದವರೇ 50 ಪರ್‌ಸೆಂಟ್ ಹಣವನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ಅವರ ಹತ್ತಿರ ಹಣ ಇರುವುದಿಲ್ಲ, ಆಯಾ ದಿನದ ಜೀವನಕ್ಕೇ ಎಷ್ಟೋ ಕಷ್ಟ ಇದೆ. ಜೀವನ ಮಾಡಲಿಕ್ಕೆ ಆಗುವುದಿಲ್ಲ. ಶೆಡ್ಯೂಲ್ಡ್ ಕ್ಯಾಸ್ಟ್‌ನವರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದರೆ ಅಂಥವರುಗಳಿಗೆ ಸರ್ಕಾರದವರೇ 50ಪರ್‌ಸೆಂಟ್ ಏಕೆ ಕೊಡಬಾರದು? ಎನ್ನುವ ಸಲಹೆಯನ್ನು ನಾನು ಕೊಡುತ್ತಿದ್ದೇನೆ. ಈ ರೀತಿ ಮಾಡಬೇಕೆಂದು ಹೇಳಿ ಮತ್ತೊಮ್ಮೆ ಇದನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಣೆಯವರು : ಮಾನ್ಯ ದೇಶಪಾಂಡೆಯವರು,

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆ ಹೀಗೆ ಮಾಡುತ್ತೀರೋ ಗೊತ್ತಿಲ್ಲ. ಒಂದು ಆರ್ಡರ್‌ನಲ್ಲಿ ನೀವು ಕರೆಯಬೇಕು. ಬಿ.ಜೆ.ಪಿ. ನವರು ಸದಸ್ಯರಲ್ಲವೇನು? ಈ ಸದನದಲ್ಲಿ ಒಂದು ವಿರೋಧ ಪಕ್ಷದ ಹೆಸರನ್ನು ಕಡೆಯುವಂಥಾ ಸಂದರ್ಭದಲ್ಲಿ ಅವರಾದ ಮೇಲೆ ಯಡಿಯೂರಪ್ಪನವರನ್ನು ಕರೆಯುತ್ತೇನೆಂದು ಹೇಳಿದ್ದಿರಿ, ಇದು ನನಗೆ ಅರ್ಥವಾಗಲಿಲ್ಲ, ನಾವು ರೆಕಗ್‌ನೈಸ್ಡ್ ಪಾರ್ಟಿಯಲ್ಲಿ ಕುಳಿತಿರಬೇಕಾದರೆ ಒಂದು ಆರ್ಡರ್‌ನಲ್ಲೇ ಕರೆಯಬೇಕಾಗುತ್ತದೆ. ಬಿ.ಜೆ.ಪಿ ಬಂದಾಗ ಬದಲಾವಣೆ ಮಾಡುವುದಕಾಕ್ಕಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಏಕೆ ಜಗಳ ಮಾಡುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮ ಜೊತೆ ಜಗಳ ಮಾಡುತ್ತಿಲ್ಲ. ನೀವು ಮಾತನಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಅವರು ನನ್ನನ್ನು ಕರೆಯುತ್ತೇನೆಂದು ಹೇಳಿ ಕರೆಯಲಿಲ್ಲ, ಇದು ನನಗೆ ಅರ್ಥವಾಗಲಿಲ್ಲ.

+ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಉಪಾಧ್ಯಕ್ಷಿಣೆಯವರೇ, ಈ ಅಮೆಂಡ್‌ಮೆಂಟ್ ಏನು ತಂದಿದ್ದಾರೆ? ಇದು ಒಂದು ಸ್ವಾಗತ ಮಾಡುವಂಥ ಬಿಲ್ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಬಿಲ್‌ನ್ನು ತೆಗೆದುಕೊಂಡು

ಬನ್ನಿ ಎಂದು ನಾವು ಹೇಳುತ್ತಿದ್ದೆವು. ಆದ್ದರಿಂದ ಮಾನ್ಯ ಸಚಿವರು ನಮ್ಮನ್ನು ಮುಂಚೆ ಅಭಿನಂದಿಸಬೇಕು. ಈ ಬಿಲ್‌ನಲ್ಲಿ ಮುನಿಸಿಪಲ್ ಮತ್ತ ಕಾರ್ಪೊರೇಷನ್ ಲಿಮಿಟ್‌ನಲ್ಲಿ ಲ್ಯಾಂಡ್ ರೆಗ್ಯುಲರೈಸ್ ಮಾಡುವುದು ಹೋಗಿಬಿಟ್ಟಿದೆ. ಇವತ್ತು ನಿಜವಾಗಿ ತಾವು ಒಳ್ಳೆಯ ಕೆಲಸ ಮಾಡಿದ್ದೀರಿ. ಇದನ್ನು ನಿಜವಾಗಿ ನಾವೇ ಕೊಡಬೇಕಾಗಿತ್ತು. ಈ ಭಾಗ್ಯ ನಿಮಗೆ ಸಿಕ್ಕಿದೆ. ಇವತ್ತು ತಾವು ಈ ಪೀನಲ್ ಕ್ಲಾಸ್ ತೆಗೆದಿದ್ದೀರಿ. ಪೀನಲ್ ಕ್ಲಾಸ್‌ನಲ್ಲಿ ಏನು ಇತ್ತು ಅದನ್ನು ತೆಗೆದು ನಿಜವಾಗಿ ತಾವು ಬಡವರಿಗೆ ಅನ್ಯಾಯ ಮಾಡುತ್ತಿದ್ದೀರೆಂದು ನಾನು ಹೇಳುತ್ತಿದ್ದೇನೆ. ಇಲ್ಲಿ ಪೀನಲ್ ಕ್ಲಾಸ್ ಇರುವುದು ಬಹಳ ಅವಶ್ಯಕತೆ ಇತ್ತು. ಎಲ್ಲಿಯ ತನಕ ಕಾಯಿದೆ ಭಯ ಜನರಲ್ಲಿ ಇರುವುದಿಲ್ಲ, ಆ ತನಕ ಕೊನೆ ಆಗುವುದಿಲ್ಲ. ತಾವು ಹೇಳಿದಿರಿ, ಮೂರು ಲಕ್ಷದ ಹದಿಮೂರು ಜನರಿಗೆ ರೆಗ್ಯುಲರೈಸ್ ಆಗುತ್ತದೆ ಎಂದು, ಬಹಳ ಸಂತೋಷ. ಇವತ್ತು ಪೀನಲ್ ಕ್ಲಾಸ್ ಇದ್ದರೆ ಅದಕ್ಕೆ ಒಂದು ಕೊನೆ ಆಗುತ್ತಿತ್ತು. ಒಂದು ಫುಲ್ ಸ್ಟಾಪ್ ಆಗುತ್ತಿತ್ತು. ಆದರೆ ಪೀನಲ್ ಕ್ಲಾಸ್ ಇಲ್ಲ, ಹೀಗಾಗಿ ಇದೇ ಒಂದು ಕೊನೆ. ಸರ್ಕಾರದಿಂದ ಆದೇಶ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಪೀನಲ್ ಕ್ಲಾಸ್‌ನ್ನು ತಾವು ತೆಗೆದಿರಿ. ಯಾಕೆ ತೆಗೆದುದಿರಿ ಎಂದು ಗೊತ್ತಿಲ್ಲ, ಆದರೆ ಇದು ಬಹಳ ಅವಶ್ಯಕ ಇತ್ತು ಎಂದು ತನ್ನ ಅಭಿಪ್ರಾಯ. ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಪೀನಲ್ ಕ್ಲಾಸ್ ಮೂರು ವರ್ಷ ಸಜೆ, ಐದು ಸಾವಿರ ರೂಪಾಯಿ ದಂಡ ಎಂದು ಇರಬೇಕಾಗಿತ್ತು ಎಂದು ಹೇಳುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ : ತಮ್ಮ ಪೀನಲ್ ಕ್ಲಾಸ್‌ನಲ್ಲಿ ಇಂಪ್ರಿಸನ್‌ಮೆಂಟ್ ಇರಬೇಕು ಎಂದು ನಾನು ಹೇಳುತ್ತಿಲ್ಲ. ಜೈಲಿಗೆ ಕಳಿಸಿ ಎಂದು ಹೇಳುವುದಿಲ್ಲ. ಆದರೆ ಒಂದು ಸರ್ಕಾರೀ ಭೂಮಿ ಪ್ರೊಟೆಕ್ಟ್ ಮಾಡುವ ಜವಾಬ್ದಾರಿ ಎಲ್ಲರದ್ದೂ ಇದೆ. ಆ ದೃಷ್ಟಿಯಿಂದ ಈ ಇಂಪ್ರಿಸನ್‌ಮೆಂಟ್ ತೆಗೆದು ಫೈನ್ ಪ್ರಾವಿಷನ್ ಇಟ್ಟರೆ ಏನೂ ತೊಂದರೆ ಆಗುತ್ತಾ ಇರಲಿಲ್ಲ, ಅಥವಾ ಇನ್ನು ಮುಂದೆ ಯಾರಿಗೂ ಎನ್‌ಕ್ರೋಚ್‌ಮೆಂಟ್ ಮಾಡುವುದಿಲ್ಲ. ಯಾವ ಕಾರಣದಿಂದಲೂ ಇದನ್ನು ರೆಗ್ಯುಲರೈಸ್ ಮಾಡುವುದಿಲ್ಲ ಎಂದು ಹೇಳುವುದಕ್ಕೆ ಸಾಧ್ಯ ಇರುತ್ತಿತ್ತು. ಸನ್ಮಾನ್ಯ ರಂಗನಾಥ್‌ಜೀ ಅವರು ಹೇಳುವ ಪ್ರಕಾರ ಮೂರು ವರ್ಷ ಇಂಪ್ರಿಸನ್‌ಮೆಂಟ್ ಮಾಡುವುದು ತಪ್ಪು ಎಂದು ಒಪ್ಪಿಕೊಳ್ಳುತ್ತೇನೆ. ಅದೇ ಪ್ರಕಾರ ತಾವು ಒಂದು ಉತ್ತರ ಹೇಳಿದಿರಿ. ಈಗ ಈ ಕಾನೂನು ಜಾರಿಯಲ್ಲಿ ಬಂದ ನಂತರ ಆರು ತಿಂಗಳು ಸಮಯ ಕೊಟ್ಟಿರಿ. ಅರ್ಜಿ ಮಾಡಲಿಕ್ಕೆ, ಒಂದು ಸಮಿತಿ ರಚನೆ ಮಾಡುತ್ತಿದ್ದೀರಿ, ಶಾಸಕರ ಅಧ್ಯಕ್ಷತೆಯಲ್ಲಿ ಎಂದು ಹೇಳಿದಿರಿ. ಇದರ ಬಗ್ಗೆ ಪರ್ಸನಲ್ ಆಗಿ ನನ್ನ ವಿರೋಧ ಇದೆ. ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಯಾಕೆಂದರೆ ಇದರಲ್ಲಿ ಸಾಕಷ್ಟು ದುರುಪಯೋಗ ಆಗುವುದಕ್ಕೆ ಸಹ ಸಾಧ್ಯ ಇದೆ. ಎಷ್ಟೋ ಜೆನ್ಯೂನ್ ಕೇಸ್‌ನಲ್ಲಿ ಪೊಲಿಟಿಕಲ್ ಇದರಿಂದ ದುರುಪಯೋಗ ಆಗುವುದಕ್ಕೆ ಸಾಧ್ಯ. ನಾವು ಇದೇ ಕೆಲಸ ತಹಶೀಲ್ದಾರ್ ಕಡೆಯಲ್ಲಿ ಕೊಟ್ಟರೂ ಆಗುತ್ತಿತ್ತು. ಹಿಂದೆ ಲ್ಯಾಂಡ್ ಗ್ರಾಂಟ್ ಕಮಿಟಿಯಲ್ಲಿ ತಹಶೀಲ್ದಾರ್‌ರವರೇ ಛೇರ್ಮನ್ ಆಗಿ ಕೆಲಸ ಮಾಡುತ್ತಿದ್ದರು. ಆದರೆ ಇವತ್ತು ತಾವು ಶಾಸಕರನ್ನು ಛೇರ್ಮನ್ ಆಗಿ ಮಾಡುವುದು ಎಂದರೆ ಒಂದು ಭಯ ಬರುತ್ತದೆ. ಇದು ಪೊಲಟಿಕಲಿ ಡಿಸ್-ಅಡ್ವಾಂಟೇಜಸ್ ಆಗಬಹುದೇನೋ? ವಿರೋಧ ಪಕ್ಷದ ಜನರು ಜಮೀನು ಸಾಗುವಳಿ ಮಾಡಿದ್ದಾರೆ

ಅವರಿಗೆ ಅನ್ಯಾಯ ಆಗಬಹುದೇನೋ ಎಂಬ ಭಾವನೆ ಬರುತ್ತದೆ. ಸನ್ಮಾನ್ಯ ಜಾಲಪ್ಪನವರು ಹೇಳಿದ ಹಾಗೆ ಪ್ರಜಾಪ್ರಭುತ್ವದಲ್ಲಿ ಎಂಎಲ್‌ಎ ಮೇಲೆ ವಿಶ್ವಾಸ ಇರುವುದಿಲ್ಲ ಎಂದು ಹೇಳುವುದು ಬರುವುದಿಲ್ಲ. ಅದನ್ನು ತಾವು ಮಾಡಿದ್ದೀರಿ. ಏನೇ ಇರಲಿ, ತಾವು ಕೇಸ್‌ಗಳನ್ನು ಎಷ್ಟು ದಿವಸದಲ್ಲಿ ಡಿಸ್ಪೋಸ್ ಮಾಡಬೇಕು ಎಂದು ಒಂದು ರಿಸ್ಟ್ರಿಕ್ಷನ್ ಹಾಕಬೇಕು. ಆ ಒಂದು ರಿಸ್ಟ್ರಿಕ್ಷನ್ ಇಲ್ಲ. ಅಪ್ಲಿಕೇಶನ್ಸ್ ಕೊಡುವ ಬಗ್ಗೆ ಅಮೆಂಡ್‌ಮೆಂಟ್ ಮಾಡಿ ಆರು ತಿಂಗಳು ಎಂದು ಮಾಡಿದಿರಿ. ಆದರೆ ಅರ್ಜಿ ಡಿಸ್ಪೋಸ್ ಮಾಡುವುದು ಯಾವಾಗ? ಪರಿಹಾರ ಕೂಡಲೇ ಸಿಗಬೇಕಾಗಿದೆ. ಆ ದೃಷ್ಟಿಯಿಂದ ತಾವು ಇದರ ಬಗ್ಗೆ ಒಂದು ಬೆಳಕನ್ನು ಚೆಲ್ಲಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ತಾವು ಕಮಿಟಿ ಏನು ಮಾಡುತ್ತಿದ್ದೀರಿ, ಅದಕ್ಕೂ ಸಹ ಕೆಲವು ಗೈಡ್‌ಲೈನ್ಸ್‌ಗಳನ್ನು ತಾವು ಕೊಡಬೇಕಾಗುತ್ತದೆ. ಆ ಗೈಡ್‌ಲೈನ್ಸ ಫ್ರೇಮ್‌ನಲ್ಲಿ ಕಮಿಟಿ ಕೆಲಸ ಮಾಡಬೇಕಾಗುತ್ತದೆ. ಅದಕ್ಕೆ ಮನಸ್ಸು ಬಂದಾಗ ಅವರಿಗೆ ಯಾರೋ ಬೇಕು ಎಂದಾಗ ರುಜು ಮಾಡುವುದು, ಬೇಡ ಎಂದಾಗ ರಿಜೆಕ್ಟ್ ಮಾಡಿದರೆ ಬಹಳ ತೊಂದರೆ ಆಗಬಹುದು. ಆದ್ದರಿಂದ ನಾನು ಹೇಳುತ್ತಿರುವುದು ಏನು ಎಂದರೆ, ಈ ಭೂಮಿಯನ್ನು ಯಾರು ಅತಿಕ್ರಮಣ ಮಾಡಿದ್ದಾರೆ. ಅದರ ಬಗ್ಗೆ ನೋಟಿಫೈ ಡೇಟನ್ನು ಛೇಂಜ್ ಮಾಡಿದ್ದೀರಿ. ಮುಂಚೆ 1.1.1989ಕ್ಕೆ ಇತ್ತು. ಈಗ ತಾವು 14.4.90ಕ್ಕೆ ಎಂದು ಮಾಡಿದ್ದೀರಿ. ನಾನು ಕರೆಕ್ಟಾಗಿ ಹೇಳಿದ್ದೆನೆಂದು ತಿಳಿದಿದ್ದೇನೆ. ಇದೇ ಕೊನೆಯಲ್ಲಿ ಇರುತ್ತದೆಯೋ ಎಂದು ನನಗೆ ಗೊತ್ತಿಲ್ಲ. ಇದಕ್ಕೂ ಒಂದು ಅಮೆಂಡ್ ಮೆಂಟ್ ಬರಬಹುದೇನೋ ಎಂದು ಕಾಣಿಸುತ್ತದೆ. ನಿಜವಾಗಿ 14.4.90ಕ್ಕೆ ಮಾಡುವ ಬದಲು 30.12.90 ಎಂದು ಮಾಡಬಹುದಿತ್ತಲ್ಲ ಅಥವಾ ಇವತ್ತೇ ಮಾಡಬಹುದಿತ್ತಲ್ಲ. 30.12.90 ಇಲ್ಲವೇ 1.1.91 ಎಂದು ಹೇಳಬಹುದಿತ್ತಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 14ರ ಏಪ್ರಿಲ್ ಯಾಕೆ ಕೊಟ್ಟಿದ್ದೇವೆ ಎಂದರೆ ಡಾ. ಬಾಬಾ ಸಾಹೇಬ್ ಅವರ ಸೆಂಟೆನರಿ ಸೆಲೆಬ್ರೇಷನ್ ಇಯರ್ ಎಂದು. ನಿಮ್ಮ ಅಮೆಂಡ್‌ಮೆಂಟ್ ಪ್ರಕಾರ 1.1.89 ಇತ್ತು. ಆದನ್ನು 14.4.90ಕ್ಕೆ ವಿಸ್ತಣಗೆ ಮಾಡಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ತಾವು ರೆಗ್ಯುಲರೈಸ್ ಮಾಡುವಾಗ ನಿಜವಾಗಿ ಯಾರು ಬೋನಾಫೈಡ್ ಎನ್‌ಕ್ರೋಚರ್ಸ್ ಇದ್ದಾರೆಂದು ತಿಳಿಯಬೇಕಾದರೆ ತಾವು ಕೆಲವು ಗೈಡ್‌ಲೈನ್ಸ್ ಕೊಡಬೇಕಾಗುತ್ತದೆ. ಆ ಗೈಡ್ ಲೈನ್ಸ್ ಏನು? ಯಾರು ನಿಜವಾಗಿ ಈ ಡೇಟ್‌ನಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ. ಅವನ ಫೈನ್ ಡೇ ಮಾಡಿದ ರಿಸೀಟ್ ಇರಬೇಕು ಅಥವಾ ಅಲ್ಲಿ ಕ್ಯಾಟಲ್ ಶೆಡ್ ಇರಬೇಕು ಅಥವಾ ಮನೆ ಕಟ್ಟಿರಬೇಕು ಅಥವಾ ಪಹಣಿಯಲ್ಲಿ ಅವನು ಎನ್‌ಕ್ರೋಚರ್ ಎಂದು ನಮೂದು ಆಗಿರಬೇಕು. ಅಥವಾ ಅವು ಗಿಡಮರಗಳನ್ನು ಬೆಳೆಸಿದ್ದು ಇರಬೇಕು. ಯಾವುದಾದರೂ ಒಂದು ಗೈಡ್‌ಲೈನ್ಸ್ ಇರಬೇಕಲ್ಲ. ಇಲ್ಲದಿದ್ದರೆ ಯಾವ ಭೂಮಿ ಎನ್‌ಕ್ರೋಚ್ ಮಾಡಿದ್ದಾನೆ. ಎಂದು ಯಾವುದರ ಮೇಲೆ ಪುರಾವೆ ಮಾಡುತ್ತೀರಿ? ಆದ್ದರಿಂದ ನಾನು ಏನು ಸಲಹೆ ಕೊಟ್ಟಿದ್ದೇನೆ ಈ ಗೈಡ್‌ಲೈನ್ಸ್‌ನ್ನು ಹಾಕಬೇಕಾಗುತ್ತದೆ. ಮುಂದೆ ಸಿಟಿ ಮುನಿಸಿಪಾಲಿಟಿ ಲಿಮಿಟ್ಸ್ ಬಗ್ಗೆ ಹೇಳಿದಿರಿ. ಈಗ ಐದು ಕಿಲೋಮೀಟರ್ ಹೊರಗೆ ಇದ್ದರೆ ಅಷ್ಟೇ ಮಾತ್ರ ರೆಗ್ಯುಲರೈಸ್ ಮಾಡುತ್ತೇವೆ ಎಂದು,

12.00 ಪಿ.ಎಂ.

ಬೆಂಗಳೂರು ಬೆಳಗಾಂ ಗುಲ್ಬರ್ಗಾಗಳಂತ ಕಾರ್ಪೊರೇಷನ್ಸ್‌ಗೆ ಮಾತ್ರ ಸಾಧ್ಯ. ಆದರೆ ಸಣ್ಣ ಸಣ್ಣ ಸಿಟಿ ಮುನಿಸಿಪಾಲಿಟಿಗಳು ಏನಿವೆ ಅಲ್ಲಿ ಐದು ಎಕರೆ ಕ್ಷೇತ್ರ ಅಂದರೆ ಅದು ಜಿಲ್ಲಾಪರಿಷತ್ತಿನವರೆಗೂ ಸೇರಿಬಿಟ್ಟಿದೆ. ಉದಾಹರಣೆಗೆ Dandeli is a city municipality. Karwar is a city municipality. ಅಲ್ಲಿ ಒಂದು ಕಿಲೋಮೀಟರ್ ಒಳಗೇ ಜಿಲ್ಲಾಪರಿಷತ್ ವ್ಯಾಪ್ತಿಗೆ ಸೇರಿದೆ. ಈಗ ಏನು ಮಾಡುತ್ತೀರಿ? ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಒಬ್ಬ ಅತಿಕ್ರಮಣ ಮಾಡಿದ ಬಡವನಿದ್ದಾನೆ ಅವನಿಗೆ ರೆಗ್ಯುಲರೈಸ್ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ತಾವು ಒಂದು ಲಿಮಿಟ್ ಇಟ್ಟು ಅತಿಕ್ರಮಿತ ಭೂಮಿ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದಿದ್ದರೆ, ಅದನ್ನೂ ರೆಗ್ಯುಲರೈಸ್ ಮಾಡುವ ಕ್ರಮವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಜಿನ್ಯೈನ್ ಬಡವರಿಗೆ ಅನ್ಯಾಯವಾಗುತ್ತದೆ. ನನ್ನದೊಂದು ಪರ್ಸನಲ್ ವಿಚಾರ ಅಂದರೆ ಯಾರು ಅತಿಕ್ರಮಣ ಮಾಡಿದ್ದಾರೆ ಅವರೆಲ್ಲರಿಗೂ ರೆಗ್ಯುಲರೈಸ್ ಆಗಬಾರದು ನಿಜವಾಗಿ ಆರ್ಥಕವಾಗಿ ಯಾರು ಸಂಪನ್ನರಿದ್ದಾರೋ ಅವರಿಗೆ ಭೂಮಿ ಕೊಡುವ ಅವಶ್ಯಕತೆ ಏನಿದೆ? ಇಲ್ಲಿ ತಾವೊಂದು ರಿಸ್ಟ್ರಿಕ್ಷನ್ ಹಾಕಬೇಕಾಗಿತ್ತು. ಹರಿಜನರಿಗೆ ಗಿರಿಜನರಿಗೆ ಹಿಂದುಳಿದ ವರ್ಗದವರಿಗೆ ಎಂದು ಮಾಡಬೇಕೇ ಹೊರತು ಆರ್ಥಿಕ ಸಂಪನ್ನರಿಗೆ ಕೊಟ್ಟರೆ ತಾವು ಎಲ್ಲಿಗೆ ಹೋಗಿ ಮುಟ್ಟುತ್ತೀರಿ? ಭೂಮಿ ಇಲ್ಲದೆ ಎಷ್ಟೋ ಜನ ನಮ್ಮ ಕಡೆ ನಿರ್ಗತಿಕರಾಗಿದ್ದಾರೆ ಅಂತಹ ಜನರಿಗೆ ಸಹಾಯ ಮಾಡಬೇಕೇ ವಿನಾ ಆರ್ಥಿಕವಾಗಿ ಸಂಪನ್ನರಾದವರಿಗೆ ಭೂಮಿ ಕೊಟ್ಟರೆ ತಪ್ಪಾಗುತ್ತದೆ, ಒಂದು ಲಿಮಿಟ್ ಹಾಕಬೇಕು. ಅಗ್ರಿಕಲ್ಚರ್ ಸೋರ್ಸ್ ಬಿಟ್ಟು ಬೇರೆ ಸೋರ್ಸಿನಿಂದ 12 ಸಾವಿರ ಆದಾಯ ಇದ್ದರೆ ಭೂಮಿ ಕೊಡುವುದಿಲ್ಲ ಎಂದು ನನ್ನಂಥ ಬಲಿಷ್ಟರಿಗೆಲ್ಲ ನೀವು ರೆಗ್ಯುಲರೈಸ್ ಮಾಡುತ್ತೀರಾ? ನೀವು ಹಾಗೆ ಮಾಡುವುದಿಲ್ಲವೆಂದು ಹೇಳಬೇಕು. ಎಸ್‌ಸಿ/ಎಸ್‌ಟಿ ಇರಬಹುದು. ಹಿಂದುಳಿದ ವರ್ಗ ಇರಬಹುದು ಅವರಲ್ಲೂ 50 ಸಾವಿರ ಲಕ್ಷ ಇನ್‌ಕಂ ಇರುವವರು ಇದ್ದಾರೆ. ಹರಿಜನ ಎಂದು ಬಸವಲಿಂಗಪ್ಪನವರಿಗೂ ಅತಿಕ್ರಮಣ ಮಾಡಿದ್ದರೆ ರೆಗ್ಯುಲರೈಸ್ ಮಾಡಿಕೊಡುತ್ತೀರಾ? ಇದರ ಸಲುದಾಗಿ ಸಾಮಾಜಿಕ ನ್ಯಾಯ ಮಾಡಬೇಕಾದರೆ ನಿಜವಾದ ಕಡುಬಡವರಿಗೆ ನೀವು ಖಾಯಂ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಬಡ ಜನರಿಗೆ ಅನುಕೂಲವಾಗಲಿ ಎಂದು ರೂಲ್ಸ್‌ನಲ್ಲೇ ಫ್ರೇಮ್ ಮಾಡಬೇಕೆಂದು ಇದನ್ನು ಮಾಡಿದೆವು. ಅದಕ್ಕಾಗಿ ಸರಳವಾಗಿ ಇದನ್ನು ತಂದೆವು. ನೀವೂ ಸಜೆಸ್ಟ್ ಮಾಡಿದ್ದೀರಿ 500 ರೂ ಎಂದು ಆದರಲ್ಲಿ 500 ಟೈಮ್ ಎಂದು ಇತ್ತು. 120 ಟೈಮ್ ಆಫ್ ಎಸ್‌ಸಿ ಎಸ್‌ಟಿ ಎಂದು ಇತ್ತು. ಅದೆಲ್ಲ ಬೇಡ, ರೂಲ್ಸ್‌ನಲ್ಲೇ ಬಡವರಿಗೆ ಅನುಕೂಲವಾಗುವಂತೆ ಮಾಡೋಣ ಎಂದು as prescribed by the rulers. ಮಾಡಿದೆವು ಅದೇ ರೀತಿ ಸೆಕ್ಷನ್ 95 ಕನ್‌ವರೆಷನ್ ಕ್ಲಾಸ್ ಕೂಡ ಹಾಕಿ ಸಿಡಿಪಿ ಒಡಿಪಿ ಏರಿಯದಲ್ಲ ಕೂಡ ನೇರವಾಗಿ ಅಪ್ಲಿಕೇಷನ್ ಕೊಟ್ಟರೆ ಡಿಸಿ ಅದನ್ನು ರೆಫ್ಯೂಸ್ ಮಾಡಬಾರದು ಎಂದು ಹೇಳಿದ್ದೇವೆ. ಆದ್ದರಿಂದ ಕರ್ಪಷನ್ ಕಡಿಮೆಯಾಗುತ್ತದೆ, ಅವನು ಅಡ್ಡಾಡುವುದು ಕಡಿಮೆಯಾಗುತ್ತದೆ. ಎಂದು ತಂದೆವು ಹೊರತು ಪೀನಲ್ ಕ್ಲಾಸ್ ಮೊದಲೇ ಇತ್ತು. ಆದರೆ ಆ ಕಡೆಯವರು ಈ ಕಡೆಯವರು ಏನು ಸಲಹೆ ಮಾಡಿದರೆಂಥರೆ ದೊಡ್ಡವರು ಎಷ್ಟೋ ಜನ ಮಾಡುತ್ತಾರೆ, ಅವರಿಗೆ ನೀವು

ಶಿಕ್ಷೆ ಕೊಡುವುದಿಲ್ಲ ಬಡವ ಎನ್‌ಕ್ರೋಚ್ ಮಾಡಿದರೆ ಶಿಕ್ಷೆ ಕೊಡುತ್ತೀರಿ. ಇದ್ಯಾವ ನ್ಯಾಯ ಎಂದು, ಆದ್ದರಿಂದ ಸದ್ಯಕ್ಕಿರುವ ಆಕ್ಟಿನಲ್ಲಿ ಸೆಕ್ಷನ್ 94 ರಲ್ಲಿ ಏನಿದೆ, ಆ ಪ್ರಕಾರವೇ ಮಾಡಿದರೆ ಸಾಕೆಂದು ತೀರ್ಮಾನಕ್ಕೆ ಬಂದ ಮೇಲೆ ಸೆಕ್ಷನ್ 94 ಏನಿದೆ ಅದನ್ನು ಮುಂದುವರಿಸೋಣ, ಪೀನಲ್ ಕ್ಲಾಸ್ ತೆಗೆಯೋಣವೆಂದು ತೆಗೆದಿದ್ದೇವೆ. ಒಂದು ವೇಳೆ ಇದೂ ಸರಿಯಾಗಿಲ್ಲ ಎಂದರೆ ಮುಂದೆ ತಿದ್ದುಪಡಿ ತರೋಣ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಮನಸ್ಸಿನಲ್ಲಿ ಏನೇನು ನಡೆದಿದೆ ಎಂದು ನನಗೆ ಹೇಗೆ ಗೊತ್ತಾಗಬೇಕು ತಮ್ಮ ಅಮೆಂಡ್‌ಮೆಂಟ್‌ಗೆ ತಂದಿರುವ ಅಮೆಂಡ್‌ಮೆಂಟ್‌ನಲ್ಲಿ ಪ್ರಿಸ್ಕ್ರೈಬ್ಡ್ ಈ ಬಗ್ಗೆ ನನ್ನ ಸಲಹೆ ಎಂದರೆ ಆರ್ಥಿಕವಾಗಿ ಯಾರು ಸಂಪನ್ನರಿದ್ದಾರೋ ಅವರ ಭೂಮಿಯನ್ನು ಸರ್ಕಾರ ಅಧೀನಕ್ಕೆ ತೆಗೆದುಕೊಳ್ಳಿ ಮತ್ತು ಯಾರು ಕಡು ಬಡವರಿದ್ದಾರೆ, ಅವರು ಸಹ ಲಕ್ಷಾಂತರ ಜನರಿದ್ದಾರೆ, ಇವತ್ತು ಏನಾಗುತ್ತದೆ ಎಂದರೆ ಲಾ ಅಬೈಡಿಂಗ್ ಜನ ಎಲ್ಲೂ ಸಿಗುತ್ತಿಲ್ಲ. ಯಾರು ಪ್ರಾಂಮ್ ಪೇಮೆಂಟ್ ಮಾಡತ್ತಾರೋ ಅವರಿಗೆ ಇಂಟರೆಸ್ಟ್‌ನಲ್ಲಿಯಾ ರಿಯಾಯಿತಿ ಸಿಗುವುದಿಲ್ಲ. ಯಾರು ಪ್ರಾಂಮ್ಟ್ ಆಗಿ ಸಾಲ ತೀರಿಸುತ್ತಾರೆ, ಅವರಿಗೆ ಸಾಲ ಮನ್ನಾ ಆಗುವುದಿಲ್ಲ, ಲ್ಯಾಂಡ್ ರಿಫರ್ಮರ್ಸ್‌ನಲ್ಲಿ ಯಾರು ಹಣ ಪ್ರಮ್ಟಾಗಿ ಕಟ್ಟಿದ್ದಾರೋ ಅವರಿಗೆ ಏನೂ ರಿಯಾಯತಿ ಸಿಗುತ್ತಿಲ್ಲ ಹೀಗೆ ನಾವು ತಪ್ಪು ದಾರಿಗೆ ಹೋದರೂ ಕೂಡ ಸರ್ಕಾರದ ರಿಯಾಯತಿ ಸಿಗುತ್ತದೆ ಎಂಬುದು ಹೋಗಬೇಕು. ಅದಕ್ಕಾಗಿ ಯಾರು ಕಡು ಬಡವರಿದ್ದಾರೆ, ಅವರಿಗೆ ಭೂಮಿ ಸಿಗಬೇಕು, ಅತಿ ಕ್ರಮಣ ಮಾಡಿದ ಸಿರಿವಂತರ ಭೂಮಿಯನ್ನು ಹಿಂದಕ್ಕೆ ತೆಗೆದುಕೊಂಡು ಬಡವರಿಗೆ ಸಹಾಯ ಮಾಡಬೇಕು. ಮತ್ತೊಂದು ಸಲಹೆ ಅಂದರೆ ಶ್ರೀ ವೆಂಕಟಪ್ಪನವರು ಹೇಳಿದಂತೆ ಸರ್ಕಾರದಿಂದ ಅವರಿಗೆ ಹಣಕೊಡಿಸಲು ಅವಕಾಶವಿದ್ದರೆ ಕೊಡಿಸಿ ; ಈಗ ಭೂಸುಧಾರಣಾ ಕಾಯಿದೆಯಲ್ಲಿ 20 ಕಂತುಗಳಲ್ಲಿ ಹಣ ತುಂಬಲಿಕ್ಕೆಂದು ಅವಕಾಶಕೊಟ್ಟರೂ ಅವನು ತುಂಬಲಿಲ್ಲ; ಅದಕ್ಕಾಗಿ ಅದನ್ನು ವೇವ್ ಮಾಡುವುದಕ್ಕಾಗಿ ಅಮೆಂಡ್‌ಮೆಂಟ್ ತರುತ್ತಿದ್ದೀರಿ; ಆದ್ದರಿಂದ ನನ್ನ ಸಲಹೆ ಏನೆಂದರೆ 3 ಕಂತು ಎಂದಿರುವುದನ್ನು ಕನಿಷ್ಟ 10 ಕಂತು ಎಂದು ಮಾಡಬೇಕು. ಮೊದಲನೇ ಕಂತನ್ನು ತುಂಬುವುದಕ್ಕೆ 30 ದಿವಸ ಕೊಟ್ಟರೆ ಆಗುವುದಿಲ್ಲ; ಕನಿಷ್ಟ 6 ತಿಂಗಳಾದರೂ ಸಮಯ ಕೊಡಬೇಕು, ಬಾಕಿ ಕಂತುಗಳನ್ನು 3 ವರ್ಷ 5 ವರ್ಷ ಕಾಲದಲ್ಲಿ ತುಂಬಲಿಕ್ಕೆ ಕೊಡಬೇಕು. ಎಷ್ಟೋ ಬಡ ಜನರಿದ್ದಾರೆ; ಅವವವ ಹತ್ತಿರ ಹಣ ಇಲ್ಲ; ಭೂಸುಧಾರಣಾ ಕಾಯಿದೆಯಲ್ಲಿ ಒಂದು ವ್ಯವಸ್ಥೆ ಮಾಡಿದ್ದೀರಿ; ಅಗ್ರಿಕಲ್ಚರ್ ರೂರಲ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ಕೊಡುವ ವ್ಯವಸ್ಥೆ ಮಾಡಿ, ಅದರಿಂದ ಸಾಲ ಜಮಾ ಮಾಡುವ ವ್ಯವಸ್ಥೆ ಮಾಡಿದ್ದೀರಿ; ಆ ಪ್ರಕಾರ ಭೂಮಿ ಮಂಜೂರಾಗಿರುವವರಿಗೆ ಕರ್ನಾಟಕ ರೂರಲ್ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ಕೊಡಿಸುವ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಬೇಕಾದರೆ ಸರ್ಕಾರ ಬಡ್ಡಿದರವನ್ನು ಸಬ್ಸಿಡೈಜ್ ಮಾಡಲಿ, ಇದರಿಂದ ಆದಷ್ಟು ಬೇಗ ಹಣವೂ ಬರುತ್ತದೆ ಅವರ ಹೆಸರಿಗೆ ಪಟ್ಟಾ ಕೂಡ ಆಗುತ್ತದೆ. ಇಂದು ನೀವು ಏನು ಹೇಳಿದ್ದೀರಿ.

"the grant of land, if any shall be provisional, subject to the confirmation by the concerned Tahsildar, on the amount payable being paid, in three

equal instalments, of which the first on shall be paid before the expiry of thirty days...

ಈ ಅಧಿಕಾರವನ್ನು ತಹಸೀಲ್ದಾರ್ ಕೈಗೆ ಏಕೆ ಕೊಡುತ್ತೀರಿ. ಕಮಿಟಿ ಅನ್ನು ಶಾಸಕರ ಅಧ್ಯಕ್ಷತೆಯಲ್ಲಿರುತ್ತದೆ. ಕನ್‌ಫರ್ಮೇಶನ್ ಮಾತ್ರ ತಹಸೀಲ್ದಾರ್ ಕೈಗೆ ಕೊಡುತ್ತೀರಿ ; ಆ ಅಧಿಕಾರವನ್ನೂ ನೀವು ಕಮಿಟಿ ಕೈಗೇ ಕೊಡಬೇಕಾಗುತ್ತದೆ. ಈ ಕಮಿಟಿಯ ಸೆಕ್ರಟರಿಯಾಗಿ ತಹಸೀಲ್ದಾರ್‌ರನ್ನು ಮಾಡಿದ್ದೀರಿ. the grant of land, if any, shall be provisional subject to confirmation by the concerned Tahsildar. ಎಂದು ನೀವೇ ತಂದಿರುವ ತಿದ್ದುಪಡಿಯಲ್ಲಿ ಹೇಳಿದ್ದೀರಿ.

ಅಂದರೆ, ಎಂಎಲ್‌ಎಗಳು ಲ್ಯಾಂಡ್ ಗ್ರಾಂಟ್ ಮಾಡುತ್ತಾರೆ. ತಹಸೀಲ್ದಾರ್ ಕನ್‌ಫರ್ಮೇಷನ್ ಮಾಡುವುದು ಸರಿಯಲ್ಲ, ಆ ಅಧಿಕಾರವೂ ಶಾಸಕರ ಸಮಿತಿಗೇ ಇರಬೇಕು. ಆಮೇಲೆ 30 ದಿವಸದಲ್ಲಿ ಮೊದಲ ಇನ್‌ಸ್ಟಾಲಮೆಂಟ್ ಬರಲಿಲ್ಲ ಎಂದರೆ ಹಣ ಫೋರ್ಫಿಟಾಗಿ ಪ್ರಾವಿಷನಲ್ ಆರ್ಡರ್ ಸರಿಯಾಗುವುದಿಲ್ಲ; ಎಷ್ಟೋ ಕಡೆ ಬೋನಾಫೈಡ್ ಕಾರಣಗಳಿರುತ್ತವೆ ಹಣ ತುಂಬಲು ಆಗದಿರಬಹುದು, ಅಂತಹ ಜನರ ಹಣವನ್ನು ಫೋರ್‌ಫಿಟ್ ಮಾಡುವ ವಿಚಾರ ಮಾಡಬಾರದು.

ಕೆಲವು ಜೈನ್ಯೂನ್ ಬೋನಫೈಡ್ ಕಾರಣಗಳು ಇರುತ್ತವೆ. ಹಣವನ್ನು ಅವರು ತುಂಬುವುದಕ್ಕಾಗುವುದಿಲ್ಲ. ಅದರ ಸಲುವಾಗಿ ಅವರ ಹಣವನ್ನು ಪರ್‌ಫೀಟ್ ಮಾಡುವಂಥ ವಿಚಾರವನ್ನು ಮಾಡಬಾರದು. ಎರಡನೆಯದು, ಜೆನ್ಯೂನ್ ರೀಜನ್ ಇದ್ದರೆ, ಸೂಕ್ತ ಕಾರಣಗಳೇನಾದರೂ ಇದ್ದರೆ ಆ ಎಕ್ಸ್‌ಟನ್ಷನ್ ಕೊಡುವ ವ್ಯವಸ್ಥೆಯನ್ನು ಸಹಾ ಮಾಡಬೇಕಾಗಿತ್ತು. ಇದನ್ನು ತಾವು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಅದರ ನಂತರ ನಮ್ಮ ಸ್ನೇಹಿತರು ಹೇಳಿದ ಹಾಗೆ ಯಾರು default- ಮಾಡುತ್ತಾರೆ, ಅಂತಹವರಿಗೆ 30 ದಿವಸಗಳ ಬದಲು ಆರು ತಿಂಗಳು ಎಂದು ಸಜೆಷನನ್ನು ಮಾಡಿದ್ದೇವೆ. ಜೊತೆಗೆ ಇಂತಹವರಿಗೆ ನೋಟೀಸನ್ನು ಕೊಡುವ ವ್ಯವಸ್ಥೆ ಇರಬೇಕು. ನೋಟೀಸನ್ನು ಕೊಟ್ಟ ನಂತರ, ಅವರಿಂದ ರಿಪ್ಲೈ ಬಂದ ನಂತರ, ಆ ಕಾರಣಗಳು ಸರಿ ಇದ್ದರೆ ಪುನ: ಟೈಮನ್ನು ಕೊಟ್ಟು ಆ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕು. ಏಕೆಂದರೆ ನಿಮ್ಮ ಉದ್ದೇಶ ಏನು ಇದೆ, ಬಡವರಿಗೆ ಭೂಮಿಯನ್ನು ಕೊಡಬೇಕು; ಬಡವರಿಗೆ ಸಹಾಯವನ್ನು ಮಾಡಬೇಕು ಎನ್ನುವ ಉದ್ದೇಶ ಇದ್ದಾಗ ತಾವು ಈ ರೀತಿಯಾಗಿ ಈ ಕ್ಲಾಸನ್ನು ಇನ್‌ಸರ್ಟ್ ಮಾಡುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಇನ್ನು ಟ್ರೀ ಬಗ್ಗೆ ತಾವು ಏನು ಹೇಳಿದ್ದೀರಿ ಅಂದರೆ, 'the trees, if any, standing on the land granted shall not form part of the grant but shall continue to belong to the Government....

ಎಂದು 94(ಎ)ಗೆ ಹೇಳಿದಿರಿ. ಇದರ ಬಗ್ಗೆ ನಮ್ಮ ಸದಸ್ಯರು ಹೇಳಿದರು. ಏನೆಂದರೆ ಇದರ ಬಗ್ಗೆ ಕೂಡಲೇ ಡಿ.ಸಿ. ಅವರಿಗೆ ಟ್ರೀ ಪ್ರೊಟೆಕ್ಟ್ ಮಾಡಲಿಕ್ಕೆ ಹೇಳಿ ಎಂದು; ಆದರೆ ಇಲ್ಲಿ ತಾವು ಕುಳಿತಾಗ,ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾಗ ಒಂದು ವಿಷಯವನ್ನು ತಮಗೆ ನೆನಪು ಮಾಡಿಕೊಡುತ್ತೇವೆ. ಇದೇ ಒಂದು ಸಮಸ್ಯೆ ಭೂಸುಧಾರಣೆ ಕಾಯ್ದೆಯಲ್ಲಿ ಬಂತು. ಭೂಸುಧಾರಣಾ ಕಾಯ್ದೆಯಲ್ಲಿ ಯಾವ ರೈತರಿಗೆ ನಾವು ಅಕ್ಯುಪೆನ್ಸಿ ರೈಟನ್ನು ಕೊಟ್ಟಿದ್ದೇವೆ, ಆ ರೈತರು ಇವತ್ತು ನಮಗೆ ಟ್ರೀ ಸಿಗುತ್ತಿಲ್ಲ ಎಂದು ಗಲಾಟೆಯನ್ನು ಮಾಡಿದಾಗ ನಾವು ಸರ್ಕಾರದಿಂದ ಏನು ಹೇಳಿದೆವು ಎಂದರೆ ಆ ಟ್ರೀಗಳೆಲ್ಲಾ ಗೌರ್ನಮೆಂಟ್‌ನದು ಎಂದು ಹೇಳಿದೆವು.

ಈ ಪಾಯಿಂಟನ್ನು ತಾವು ಬರೆದುಕೊಳ್ಳಿ. ನೀವು ಹಿಂದೆ ಹೇಳಿದ್ದನ್ನೇ ನಿಮಗೆ ನೆನಪು ಮಾಡುತ್ತಿದ್ದೇನೆ. ಭೂಸುಧಾರಣೆ ಕಾಯ್ದೆಯಲ್ಲಿ ಟ್ರೀಗಳು ಗೌರ್ನಮೆಂಟ್‌ನದು ಎಂದು ಹೇಳಿ ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದಾಗ ತಾವುಗಳು ಇಲ್ಲಿ ಕುಳಿತಾಗ ಮಾನ್ಯ ಮುಖ್ಯಮಂತ್ರಿಗಳೂ ಕೂಡಾ ಇಲ್ಲಿ ಕುಳಿತಾಗ 48ನೇ ಆಕ್ಟ್ ಪ್ರಕಾರ ಆಕ್ಯುಪೆನ್ಸಿ ರೈಟನ್ನು ಕೊಟ್ಟಿದ್ದಾರೆ, ಟ್ರೀಗಳು ಇವತ್ತು ನಮ್ಮದು ಎಂದು ರೈತರು ಹೇಳುತ್ತಿದ್ದಾರೆ ಎಂದು ಹೇಳಿದಿರಿ. ಆಗ ನಾವು ಏನು ಹೇಳಿದೆವು ಎಂದರೆ, ಇಲ್ಲ, ಇದು ಈ ರೀತಿ ಆಗುವುದಿಲ್ಲ ಎಂದು ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಆಗ ಧರಣಿ ಮಾಡಬೇಕು ಎಂದು ಹೇಳಿ ಹೋದರು. ಒಮ್ಮೆ ರೈತರಿಗೆ ಭೂಮಿಯನ್ನು ಕೊಟ್ಟನಂತರ ಅಲ್ಲಿ ಬೆಳೆದಂಥ ಗಿಡಮರ ಆ ರೈತರಿಗೆ ಕೊಡಬೇಕು ಎಂದು ಹೇಳಿದಿರಿ. ಆ ಸಮಯದಲ್ಲಿ ನಾನೇ ಉತ್ತರವನ್ನು ಕೊಟ್ಟಿದ್ದೇನೆ, ಫಾರೆಸ್ಟ್ ಮಿನಿಸ್ಟರ್ ಪರವಾಗಿ ಉತ್ತರವನ್ನು ಕೊಟ್ಟೆ. ಆಗ ನಾನು ಸಮಯವನ್ನು ತೆಗೆದುಕೊಂಡೆ. ಲಾ ಡಿಪಾರ್ಟ್‌ಮೆಂಟ್ ಜೊತೆಯಲ್ಲಿ ಇದರ ಬಗ್ಗೆ ಕನ್‌ಸಲ್ಟ್ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಂಡೆವು. ಅದು ಆಯಿತು. ಇದು ಸರ್ಕಾರದ ಆಸ್ತಿಯಲ್ಲ, ಇದು ರೈತರಿಗೆ ನಾವು ಕೊಡುತ್ತೇವೆ, ಈ ಮರಗಳೆನ್ನೆಲ್ಲಾ ನಾವು ರೈತರಿಗೆ ಕೊಡುತ್ತೇವೆ ಎಂದು ಹೇಳಿ ಆ ಪ್ರಕಾರ ಆದೇಶ ಎಲ್ಲಾ ಅರಣ್ಯ ಇಲಾಖೆಯ ಡೆಪ್ಯುಟಿ ಕಮೀಷನರ್‌ಗೂ ಹೋಯಿತು. ಅದರ ಪ್ರಕಾರವಾಗಿ ಇವತ್ತು 15-20 ವರ್ಷಗಳಿಂದ ಭೂಮಿಯನ್ನು ಅಕ್ಯುಪೈ ಮಾಡಿದ್ದಾರೆ, ಅವರೇ ಗಿಡಮರವನ್ನು ಬೆಳೆಸಿದ್ದಾರೆ, ಆ ಆಸ್ತಿಯನ್ನು ಮತ್ತೆ ನೀವು ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದರೆ ಯಾವ ನ್ಯಾಯ ಇದು? ಇದು ಸರಿಯಾಗುತ್ತದೆಯೇ? ಇದನ್ನು ತಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ದೇಶಪಾಂಡೆಯವರು ಬಹಳ ಒಳ್ಳೆಯ ಪ್ರಮುಖವಾದಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಾವು ಮರಗಳನ್ನು ಬೆಳೆಸಬೇಕು ಎಂದು ಹೇಳಿ ಕೋಟ್ಯಾಂತರ ರೂಪಾಯಿ ಹಣವನ್ನು ನಾವು ವಿಶ್ವಬ್ಯಾಂಕ್‌ನಿಂದ ತರುತ್ತಿದ್ದೇವ. ಇವತ್ತು ರೈತನೇ ಮರಗಳನ್ನು ಬೆಳಿಸಿದ್ದಾನೆ. ಅವನಿಗೇ ಮರಗಳನ್ನು ಉಚಿತವಾಗಿ ಕೊಡುವುದರಲ್ಲಿ ಏನೂ ನಷ್ಟವಾಗುವುದಿಲ್ಲ. ಇದು ಎಷ್ಟಿದೆ? ಅವನಿಗೇ ಮರಗಳನ್ನು ಉಚಿತವಾಗಿ ಕೊಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಏಕೆಂದರೆ ಒಂದು ಮರವನ್ನು ಸರ್ಕಾರದವರು ಬೆಳಸಬೇಕಾಗಿದ್ದರೆ ಎಷ್ಟು ರೂಪಾಯಿಗಳು ಖರ್ಚಾಗುತ್ತದೆ ಈಗ? 150-200 ರೂಪಾಯಿಗಳನ್ನು ಒಂದು ಮರಕ್ಕೆ ನಾವು ಖರ್ಚು ಮಾಡಬೇಕಾಗುತ್ತದೆ. ಮರಗಳನ್ನು ಬೆಳೆಸಬೇಕಾದರೆ ಇಷ್ಟು ದುಡ್ಡು ಖರ್ಚಾಗತಕ್ಕಂಥ ಸಂದರ್ಭಗಳು ಕೂಡಾ ಇದೆ. ಬೆಳೆಸಿರತಕ್ಕಂಥ ಮರಗಳನ್ನು ಉಳಿಸಿ. ಸರ್ಕಾರದ್ದು ಮರಗಳು ಎಂದರೆ ಮರುನಿಮಿಷದಲ್ಲಿ ಅದು ಇರುವುದಿಲ್ಲ, ರಸ್ತೆ ಪಕ್ಕದಲ್ಲಿರತಕ್ಕಂಥ ಮರಗಳೆಲ್ಲಾ ಏನಾಗಿದೆ, ಇವತ್ತು ಅದನ್ನು ನೋಡಿದರೆ ಎಲ್ಲಾ ಸರ್ವನಾಶವಾಗಿ ಹೋಗಿದೆ. ಕಾರಣ ಏನೆಂದರೆ ಸರ್ಕಾರದ್ದು ಎಂದರೆ ಮರಗಳೆಲ್ಲಾ ಸರ್ವನಾಶವಾಗಿ ಹೋಗುತ್ತದೆ. ತಿಳಿಗೇಡಿಗಳು ಅದನ್ನು ಕಡಿದು ತೆಗೆದುಕೊಂಡು ಹೋಗುತ್ತಾರೆ. ಸರ್ಕಾರದ ಆಜ್ಞೆ ಒಂದು ಹಿಂದೆ ಬಂತು, ಅದು ಬಂದ ತಕ್ಷಣ ರಸ್ತೆಯ ಪಕ್ಕದಲ್ಲಿರತಕ್ಕಂಥ ಮರಗಳೆಲ್ಲಾ ಸರ್ವನಾಶವಾಗಿ ಹೋಯಿತು. ಆದ್ದರಿಂದ ಇದನ್ನೂ ಈ ರೀತಿ ಮಾಡುವುದು ಬೇಡ. ಆ ಮರಗಳನ್ನು ರಕ್ಷಣೆ ಮಾಡಬೇಕಾಗಿರತಕ್ಕಂಥದ್ದು ಮತ್ತು ಉಳಿಸಬೇಕಾಗಿರತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ಆ ಮರಗಳನ್ನು ಉಚಿತವಾಗಿಯೇ ರೈತರಿಗೆ ದಯವಿಟ್ಟು ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ನಾವು ಈ ಹಿಂದೆಯೇ ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದೇವೆ. ರೈತರ ಗಿಡಮರಗಳಿಗೆ ಕೈ ಹಾಕುವುದಿಲ್ಲವೆಂದು ಹೇಳಿದ್ದೇವೆ. ಅದರ ಪ್ರಕಾರ ತಾವು ಸಹ ಈ ಭೂಮಿಯನ್ನು ರೆಗ್ಯುಲರೈಜ್ ಮಾಡಿದ ನಂತರ ಅಲ್ಲಿ ಬೆಳೆದ ಗಿಡಮರಗಳನ್ನು ಅವರಿಗೇ ಕೊವುದಿಲ್ಲ ಅಂದರೆ ಏನು? ಇದು ಸರಿಯಲ್ಲ. ಆ ದೃಷ್ಟಿಯಿಂದ ಇಲ್ಲಿದ್ದಂತಹ ಗಿಡಮರಗಳನ್ನು ಯಾರಿಗೆ ಜಮೀನು ಮಂಜೂರು ಮಾಡುತ್ತೀರಿ, ಅವರಿಗೇ ಸಿಗುವಂತಹ ವ್ಯವಸ್ಥೆ ಆಗಬೇಕು. ಇವತ್ತು ಈ ಭೂಮಿಯನ್ನು ರೆಗ್ಯುಲರೈಜ್ ಮಾಡುತ್ತಿದ್ದೀರಿ; ಆದರೆ ಈ ಸದಸ್ಯರು ಹೇಳಿದ ಹಾಗೆ ಪ್ಲಾಂಟೇಷನ್ ಭೂಮಿಗಳು ಏನಿವೆ, ಅವುಗಳ ಬಗ್ಗೆ ಸಹ ಆದಷ್ಟು ಬೇಗ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಉತ್ತರಕನ್ನಡ ಮತ್ತು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈ ಫಾರೆಸ್ಟ್ ಲ್ಯಾಂಡ್ ರೆಗ್ಯುಲರೈಜೇಷನ್ ಹಂಗಾಮಿ ಲ್ಯಾಂಡ್ ರೆಗ್ಯುಲರೈಸೇಷನ್ ಈ ಸಮಸ್ಯೆ ಸಹ ಕಳೆದ 20 ವರ್ಷಗಳಿಂದಲೂ ನಿಂತಿವೆ. ಪ್ರತಿ ಚುನಾವಣೆಯಾಗುವಾಗ ನಾವು ನೀವು ಭರವಸೆಯನ್ನು ಕೊಡುತ್ತಲೇ ಬಂದಿದ್ದೇವೆ. 1972ಕ್ಕಿಂತ ಮುಂಚೆ ಯಾವ ಭೂಮಿಯನ್ನು ಒತ್ತುವರಿ ಮಾಡಿದ್ದಾರೋ ಆ ಭೂಮಿಯನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದ್ದೇವೆ. ಆದರೆ ಇಲ್ಲಿಯವರೆಗೂ ಒಂದು ಇಂಚು ಭೂಮಿಯನ್ನು ರೆಗ್ಯುಲರೈಸ್ ಮಾಡಿಲ್ಲ, ಅಷ್ಟೇ ಅಲ್ಲ, ಇವತ್ತು ಅರಣ್ಯ ಅಧಿಕಾರಿಗಳು ಇಂತಹ ಜನರನ್ನು ಹೊರಗೆ ಹಾಕುತ್ತಿದ್ದಾರೆ. ಯಾವ ಬಡಜನರಿಗೆ ಕಾಯಿದೆ ಬದ್ಧವಾಗಿ ಹಂಗಾಮಿಯಲ್ಲಿ ಭೂಮಿಯನ್ನು ಕೊಟ್ಟಿದ್ದೇವೆ, ಯಾವ ಜನ ಬಡವರು ಕಾಯಿದೆ ಬದ್ಧವಾಗಿ ಹಂಗಾಮಿಯಲ್ಲಿ ಭೂಮಿಯನ್ನು ಮಾಡುತ್ತಿದ್ದಾರೆ ಆ ಭೂಮಿಯು ಸಹ ಇವತ್ತು ರೆಗ್ಯುಲರೈಸ್ ಆಗಿಲ್ಲ, ಆ ದೃಷ್ಟಿಯಿಂದ ಈ ಎಲ್ಲಾ ಭೂಮಿಗಳು ಆದಷ್ಟು ಬೇಗ ಬಡಜನರಿಗೆ ಮಂಜೂರಾಗಬೇಕು. ಅದೇ ಪ್ರಕಾರ ಕುಂಕಿ ಲ್ಯಾಂಡ್ ಎಂಬುದು ಶಿವಮೊಗ್ಗ ಜಿಲ್ಲೆಗಳಿಲ್ಲಿದ್ದು ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಇದರದ್ದು ಸಹ ಸಮಸ್ಯೆಯಿದೆ. ನಮ್ಮ ಉತ್ತರಕನ್ನಡ ಜಿಲ್ಲೆಯಲ್ಲಿ 1937ರಲ್ಲಿ ಬಾಂಬೆ ಸರ್ಕಾರದಲ್ಲಿ ಇದ್ದಾಗ ಹಣ್ಣು ಸೊಪ್ಪು ಬೆಳೆಸಲು ಗ್ರಾಂಟ್ ಆಯಿತು. ಆ ಭೂಮಿಯು ಸಹ ಇವತ್ತಿನವರೆಗೂ ಮಂಜೂರಾಗಿಲ್ಲ. ಈ ಬಿಲ್ಲನ್ನು ತಂದಿರುವುದರಿಂದ ಬಹಳ ಸಂತೋಷ. ನಾನು ಕೆಲವು ಸಲಹೆಗಳನ್ನು ನಾನು ಕೊಟ್ಟಿದ್ದೇನೆ. ಬಡವರಿಗೆ ಸಹಾಯ ಮಾಡುವುದಿದ್ದರೆ ನನ್ನ ಸಲಹೆಗಳ ಬಗ್ಗೆ ತಾವು ಗಮನಹರಿಸಬೇಕು. ಮತ್ತು ನಿಜವಾಗಿಯೂ ನಿಮಗೆ ಬಡವರಿಗೆ ಸಹಾಯ ಮಾಡಬೇಕೆನ್ನುವ ಉದ್ದೇಶವಿದ್ದರೆ ಈ ಸಲಹೆಯನ್ನು ಗಮನಿಸಿ ಜಾರಿಗೆ ತರುವಂತೆ ಪ್ರಯತ್ನ ಮಾಡಬೇಕು. ಅರಣ್ಯ ಭೂಮಿ ಹಂಗಾಮಿ ಭೂಮಿ, ಸೊಪ್ಪಿನ ಬೆಟ್ಟದ ಭೂಮಿ, ಪ್ಲಾಂಟೇಶನ್ ಭೂಮಿಯು ಸಹ ರೆಗ್ಯುಲರೈಸ್ ಆಗಬೇಕು. ಅದು ಆದಷ್ಟು ಬೇಗ ಆಗಬೇಕಾಗುತ್ತದೆ. ತಮ್ಮ ಕಾಲದಲ್ಲಿ ಆಗುತ್ತದೆಂದು ನನಗೆ ವಿಶ್ವಾಸ ಇದೆ. ಇಷ್ಟು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಬಹಳ ಅತ್ಯಂತ ಪ್ರಮುಖವಾದಂತಹ ಈ ಭೂ ಕಂದಾಯ ವಿಧೇಯಕ್ಕೆ ತಿದ್ದುಪಡಿ ತಂದು ಈ ರಾಜ್ಯದ ಸುಮಾರು 3 ಲಕ್ಷ 313 ಸಾವಿರ ಕುಟುಂಬಕ್ಕೆ ಅನುಕೂಲವಾಗುವಂತಹ ಒಂದು ಐತಿಹಾಸಿಕ ತಿದ್ದುಪಡಿಯನ್ನು ತಂದಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಳೆದ 20-30 ವರ್ಷಗಳಲ್ಲಿ ಈ ರೀತಿ ಅನೇಕ ಬಡಜನರು ಒತ್ತುವರಿ ಮಾಡಿದ್ದಾರೆ. ಆ ಜನ ಬೇರೆ ಇದ್ದಾರೆ. ಆದರೆ ಏನು ಇಲ್ಲದ ಕೃಷಿ ಕಾರ್ಮಿಕರು, ಹರಿಜನ ಗಿರಿಜನರು

ಒಂದೆರಡು ಎಕರೆ ಜಮೀನನ್ನು ಮಾಡಿಕೊಂಡು ಎರಡು ಹೊತ್ತು ಊಟಕ್ಕೋಸ್ಕರ ದಾರಿಮಾಡಿಕೊಂಡಿದ್ದರೋ ಆ ಬಡವರಿಗೆ ಬಹಳ ಹಿಂದೆಯೇ ಈ ಜಮೀನು ಖಾಯಂ ಆಗಬೇಕಾಗಿತ್ತು. ಈ ರೀತಿ ಕನ್‌ಫರ್ಮ್ ಮಾಡಿ ಸಾಗುವಳಿ ಚೀಟಿಯನ್ನು ಕೊಟ್ಟಿದ್ದರೆ, ಅದರ ಮೇಲೆ ಸಾಲ ಸೋಲ ತೆಗೆದುಕೊಂಡು ಬಾವಿಯನ್ನು ತೊಡಿಸಿ ಹೊಲಕ್ಕೆ ನೀರನ್ನು ಹಾಯಿಸಿ ತನ್ನ ಕಾಲ ಮೇಲೆ ತಾನು ನಿಲ್ಲುವಂತಹ ಪ್ರಯತ್ನ ಮಾಡಬಹುದಾಗಿತ್ತು. ದುರಾದೃಷ್ಟವಶಾತ್ ಇದುವರೆಗೂ ಅದು ಆಗಿಲ್ಲ. ಅದಕ್ಕಾಗಿ ಐತಿಹಾಸಿಕ ಹೆಜ್ಜೆಯನ್ನು ತಾವು ಈಗ ಇಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ವಿಶೇಷವಾಗಿ ದಲಿತರಿಗೆ ವಿಷೇಷವಾಗಿ ಹರಿಜನರಿಗೆ ಜಮೀನನ್ನು ನಾವು ಕೊಡುತ್ತಿದ್ದೇವೆ. ಇಲ್ಲಿ ತಾವು ಬೆಲೆಯನ್ನು ಕಟ್ಟಿ ಅನುಸೂಚಿತ ಜಾತಿಯವರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಅದಕ್ಕೋಸ್ಕರ ಅನೇಕ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಹರಿಜನರ ಅಭಿವೃದ್ಧಿ ಮಾಡುತ್ತಿರುವಂತಹ ಸಂದರ್ಭದಲ್ಲಿ ಅದನ್ನು ಪುಕ್ಕಟೆಯಾಗಿ ಕೊಟ್ಟರೆ ಸರ್ಕಾರಕ್ಕೆ ದೊಡ್ಡ ಲಾಸ್ ಆಗುವುದಿಲ್ಲ. ಲಾಸ್ ಆಗುತ್ತದೆ ಎನ್ನುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ದರಿಂದ ನಾನು ಈ ಸದನದಲ್ಲಿ ವಿಂತಿ ಮಾಡಿಕೊಳ್ಳುವುದೇನೆಂದರೆ, ಮೊದಲನೆಯದಾಗಿ ಅವರಿಗೆ ಫ್ರೀ ಆಗಿ ಆ ಜಮೀನನ್ನು ಕೊಡಬೇಕು. ದೊಡ್ಡದೊಡ್ಡ ಜಮೀನುದಾರರರು ಜಮೀನನ್ನು ಕಬಳಿಸುವಂತಹ ಪ್ರಯತ್ನ ಮಾಡುತ್ತಿದ್ದಾರೆ. ತಾವು ನಿರ್ದಿಷ್ಟವಾದಂತಹ ಆದೇಶವನ್ನು ಕೊಟ್ಟು ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಆ ಸಮಿತಿಯವರು ಸ್ಥಳ ತನಿಖೆ ಮಾಡಬೇಕು. ಬರೀ ಕೇವಲ ಅರ್ಜಿಗಳ ಆಧಾರದಮೇಲೆ ಮಾಡುವುದಿಲ್ಲ. ಯಾರೋ ಒಬ್ಬ ಸಾಹುಕಾರ ಇದ್ದದವನ ಮೇಲೆ ಅರ್ಜಿ ಕೊಡುವಂತಹ ಪ್ರಯತ್ನ ಮಾಡುತ್ತಾನೆ. ಜನರು ಪತ್ರಿಕೆಯನ್ನು ನೋಡಿ ಆ ರೀತಿ ಮಾಡುತ್ತಾರೆ. ಮತ್ತೊಬ್ಬನಿಗೆ ನೀವು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ರೀತಿ ಬೆನಾಮಿ ಹೆಸರಿನಲ್ಲಿ ಜಮೀನನ್ನು ಖಾಯಂ ಮಾಡಿಕೊಡುವಂತಹ ಪ್ರಯತ್ನ ಹಾಗೂ ಷಡ್ಯಂತ್ರ ವ್ಯವಸ್ಥಿತಿವಾಗಿ ನಡೆಯುತ್ತಿದೆ.

ಆದ್ದರಿಂದ ಶಾಸಕರ ಅಧ್ಯಕ್ಷರ ಸಮಿತಿ ಸ್ಥಳ ತನಿಖೆ ಮಾಡಿ ಜಮೀನನ್ನು ಕೊಡಬೇಕು. ಗ್ರಾಮೀಣ ಜನತೆಯ ಬಡವರ ಜಮೀನನ್ನು ನೂರಾರು ಎಕರೆ ಭೂಮಿ ಒತ್ತುವರಿ ಮಾಡಿದ್ದಾರೆಂದು ಗೊತ್ತಾದಾಗ, ಅದನ್ನು ಪಟ್ಟಿಮಾಡಿಕೊಂಡು ವಿಶೇಷವಾಗಿ ಹರಿಜನರಿಗೆ ಆದ್ಯತೆ ಕೊಟ್ಟು ಒತ್ತುವರಿ, ಬಗರ್‌ಹುಕುಂ ಸಾಗುವಳಿ ಮಾಡಿರುವಂತಹ ದೊಡ್ಡದೊಡ್ಡವರು ಜಮೀನುಗಳನ್ನು ಕಸಿದುಕೊಂಡು ಕಡುಬಡವ ಕೃಷಿ ಕಾರ್ಮಿಕನಿಗೆ ವಿಶೇಷವಾಗಿ ಆದ್ಯತೆ ಕೊಡುವಂತಹ ಒಂದು ಪ್ರಯತ್ನ ಮಾಡಿದರೆ, ಅವತ್ತಿನಿಂದ ಇವತ್ತಿನವರೆಗೆ ಬಡವರಿಗೆ ಆ ಜಮೀನು ಸಿಗುತ್ತಿಲ್ಲವೆನ್ನುವ ಕೂಗು ಏನಿದೆ ಆ ಕೂಗಿಗೆ ಒಳ್ಳೆಯ ಬೆಂಬಲವನ್ನು ಸೂಚಿಸಿದಂತಾಗುತ್ತದೆ. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಎರಡನೆಯದು, ಹೇಗಾದರೂ ಮಾಡಿ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಮೀನನ್ನು ಒತ್ತವರಿ ಮಾಡುವಂಥ ಚಟ ಏನಿದೆ, ಬಗರ್ ಹುಕುಂ ಸಾಗುವಳಿ ಮಾಡುವ ಚಟ ಏನಿದೆ, ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ನಿನ್ನೆ ಮೊನ್ನೆಯವರೆಗೆ ಯಾರೂ ಯಾರು ಜಮೀನನ್ನು ಸಾಗುವಳಿ ಮಾಡುತ್ತಿದ್ದರು, ಅಂತಹ ಎಲ್ಲರಿಗೂ ಅನುಕೂಲವಾಗುವಂತೆ ಒಂದು ಶಾಸನ ತಿದ್ದುಪಡಿಯನ್ನು ತರುತ್ತಿರುವ ಸಂದರ್ಭದಲ್ಲಿ ಮುಂಬರುವ ದಿವಸಗಳಲ್ಲಿ, ಯಾವ ಕಾರಣಕ್ಕೆ ಆಗಲಿ, ಯಾವುದೇ ಜಮೀನು ಇರಬಹುದು, ಒಂದು ಗುಂಟೆ ಜಮೀನನ್ನೂ ಒತ್ತುವರಿಯಾಗುವುದಕ್ಕೆ ಬಿಡುವುದಿಲ್ಲ, ಬಗರ್ ಹುಕುಂ ಸಾಗುವಳಿ ಮಾಡುವುದಕ್ಕೆ

ಬಿಡುವುದಿಲ್ಲ ಎಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಅರಣ್ಯ ಪ್ರದೇಶದಲ್ಲಿ ಜಮೀನನ್ನು ಉಳಿಸಬೇಕಾಗಿದೆ. ಹಳ್ಳಿಗಾಡುಗಳಲ್ಲಿ, ಗೋಮಾಳಗಳಿಗೆ ಬೇಕಾದ ಜಮೀನನ್ನು ಉಳಿಸಿಕೊಳ್ಳಬೇಕಾದಂಥ ಸಂದರ್ಭದಲ್ಲಿ ಒಂದು ಗುಂಟೆ ಜಮೀನನ್ನು ಒತ್ತುವರಿಯಾಗುವುದಕ್ಕೆ ಬಿಡದೆ, ಅದಕ್ಕೆ ಬೇಕಾದಂಥ ಬಿಗಿಯಾದಂಥ ಒಂದು ಶಾಸನವನ್ನು ತರುವಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗಿದೆ. ಹಿಂದೆ ಶ್ರೀ ರಾಚಯ್ಯನವರು ಅರಣ್ಯ ಸಚಿವರಾಗಿದ್ದಂಥ ಸಂದರ್ಭದಲ್ಲಿ ರೈತರಿಗೆ ಕೃಷಿ ಕಾರ್ಮಿಕರಿಗೆ ಒದು ದೊಡ್ಡ ಅನ್ಯಾಯ ನಡೆದುಹೋಗಿದೆ. ಅದೇನೆಂದರೆ ಮನೆಯಲ್ಲೇ ಕುಳಿತುಕೊಂಡು ಸಿ ಅಂಡ್ ಡಿ ಲ್ಯಾಂಡ್ ಅಂಥ ಜಮೀನನ್ನು ಕರೆದು, ರೈತಾಪಿ ವರ್ಗಕ್ಕೆ ಅದು ಉಪಯೋಗವಾಗುವುದಿಲ್ಲವೆಂದು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಈ ತರಹದ ಷಡ್ಯಂತರವನ್ನು ವ್ಯವಸ್ಥಿತವಾಗಿ ಕೆಲವರು ಮಾಡಿದ್ದಾರೆ. ಶ್ರೀ ರಾಚಯ್ಯನವರು ಹಿಂದೆ ಅರಣ್ಯ ಸಚಿವರಾಗಿದ್ದಾಗ, ಈ ಸದನದಲ್ಲಿ ಈ ರೀತಿ ಸಿ ಅಂಡ್ ಡಿ ಲ್ಯಾಂಡ್‌ನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವಂಥ ತಿದ್ದುಪಡಿಯನ್ನು ತಂದಾಗ, ಅದಕ್ಕೆ ಉಗ್ರವಾದ ಪ್ರತಿಭಟನೆ ಸದಸ್ಯರಿಂದ ವ್ಯಕ್ತಪಟ್ಟಾಗ, ಆ ಮಂಡನೆಯನ್ನು ವಾಪಸ್ ತೆಗೆದುಕೊಳ್ಳುವ ಪ್ರಯತ್ನ ಮಾಡಿದರು. ತಾವು ಮಾತನಾಡಬೇಕಾದರೆ, ಸಿ ಅಂಡ್ ಡಿ ಲ್ಯಾಂಡ್ ನೋಟಿಫಿಕೇಷನ್ ಹೊರಡಿಸಿದ್ದರೆ, ಈ ಒಂದು ಕಾಯ್ದೆಯಡಿಯಲ್ಲಿ ಖಾಯಮ್ ಮಾಡುವುದಕ್ಕೆ ಬರುವುದಿಲ್ಲ ಎಂದು ಅರಣ್ಯಾಧಿಕಾರಿಗಳು ಮತ್ತು ರೆವಿನ್ಯೂ ಅಧಿಕಾರಿಗಳು ಜಾಯಿಂಟಾಗಿ ಸ್ಥಳ ತನಿಖೆ ಮಾಡಿ, ಸಿ ಅಂಡ್ ಡಿ ಲ್ಯಾಂಡ್ ಅಂಥ ವರ್ಗಾವಣೆ ಮಾಡಿಲ್ಲ. ಹಿಂದೆ ಇದ್ದಂಥ ಸನ್ಮಾನ್ಯ ಶಿವಮೊಗ್ಗ ಅಧಿಕಾರಿಗಳು ಒಂದು ಐತಿಹಾಸಿಕ ಧೈರ್ಯವನ್ನು ತೆಗೆದುಕೊಂಡು ಸಾಗರ ತಾಲ್ಲೂಕಿಗೆ ಹೋಗಿ, ಸಿ ಅಂಡ್ ಡಿ ಲ್ಯಾಂಡ್ ವರ್ಗಾವಣೆ ಮಾಡುವಂಥ ಸಂದರ್ಭದಲ್ಲಿ ಅನ್ಯಾಯವಾಗಿದೆ. ಸ್ಥಳ ತನಿಖೆಯಾಗಿಲ್ಲವೆಂದು ತಿಳಿಸಿದ್ದರು. ಆಗ ಜಮೀನು ಕೊಟ್ಟು, ಊರು ಮಾಡಿ, ವಿದ್ಯುದ್ದೀಪ ಕೊಟ್ಟು ಅನುಕೂಲ ಮಾಡಿದ್ದಾರೆ. ಈಗ ಅಲ್ಲಿ ರಸ್ತೆಗಳು ಆಗಿವೆ. ಕೆರೆಕಟ್ಟೆಗಳು ಇವೆ. 15-20-30 ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ ಜಮೀನನ್ನು ಸಹ ಸಿ ಅಂಡ್ ಡಿ ಲ್ಯಾಂಡ್ ಎಂದು ವರ್ಗಾವಣೆ ಮಾಡಿರುವು ಅನೇಕ ಉದಾಹರಣೆಗಳು ಇವೆ ; ಈ ಸಿ ಅಂಡ್ ಡಿ ಲ್ಯಾಂಡನ್ನು ಮನೆಯಲ್ಲೇ ಕುಳಿತುಕೊಂಡು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ; ಇದರಿಂದ ಆ ಸ್ಥಳದಲ್ಲಿ ಸಾವಿರಾರು ಬಡ ಕುಟುಂಬದವರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ, ಅವರಿಗೆ ನ್ಯಾಯ ಸಿಗುವುದಿಲ್ಲ. ಅಲ್ಲಿ ವಿಶೇಷವಾಗಿ ಕೃಷಿ ಕಾರ್ಮಿಕ ಇದ್ದಾನೆ; ಆದರೂ ಅಧಿಕಾರಿಗಳ ಕುತಂತ್ರದಿಂದ ಈ ಲ್ಯಾಂಡ್ ವರ್ಗಾವಣೆ ನಡೆದಿದೆ. ಈ ರೀತಿ ಲ್ಯಾಂಡ್ ವರ್ಗಾವಣೆಯಾಗಿರುವುದು ತಪ್ಪು. ಅದನ್ನು ಪರಿಶೀಲಿಸುತ್ತೇನೆ ಎಂಬ ಭರವಸೆಯನ್ನು ಆಗಿನ ಮಂತ್ರಿಗಳು ಕೊಟ್ಟರು. ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ತನಿಖೆ ಕೆಲಸ ಪ್ರಾರಂಭ ಆದಾಗ ಅಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ ಕಡು ಬಡವರು ತಮ್ಮ ಜಮೀನನ್ನು ಕಳೆದುಕೊಂಡಿರುವುದು ತಿಳಿದು ಬಂತು. ಇಂತಹ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಇಂಥ ಸಾವಿರಾರು ಉದಾಹರಣೆಗಳು ಇವೆ. ಆದ್ದರಿಂದ ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಆ ಕಮಿಟಿಗೆ ಅಧಿಕಾರ ಕೊಡಿ, ಕಮಿಟಿಯು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಲಿ. ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ ಜಮೀನು ತಮ್ಮ ಗಮನಕ್ಕೆ ಬಂದಲ್ಲಿ, ಅದನ್ನು ಖಾಯಮ್ ಮಾಡುವಂತಹ ಅಧಿಕಾರವನ್ನು ಆ ಕಮಿಟಿಗೆ ಕೊಡಬೇಕು. ಆ ರೀತಿಯಾದ ಒಂದು ಅವಕಾಶವನ್ನು ಆ ಕಮಿಟಿಗೆ ಕೊಟ್ಟಾಗ ಮಾತ್ರ, ನೀವು ನ್ಯಾಯ ದೊರಕಿಸಿಕೊಟ್ಟಂತೆ ಆಗುತ್ತದೆ.

ಇನ್ನೊಂದು ಬಹಳ ಪ್ರಾಮುಖ್ಯವಾದ ಸಂಗತಿ, ಸನ್ಮಾನ್ಯ ಶ್ರೀ ಎಸ್.ಆರ್. ಬೊಮ್ಮಾಯಿಯವರು ಮುಖ್ಯ ಮಂತ್ರಿಯಾಗಿದ್ದಾಗ ನಮ್ಮ ವಿರೋಧಪಕ್ಷದ ಒಂದು ಸಮಿತಿ ಮಾಡಿದ್ದರು. ಆಗ ಮನೆಯಲ್ಲೇ ಕುಳಿತುಕೊಂಡು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿರುವುದು ಸಮಿತಿಯವರಿಗೆ ತಿಳಿಯಿತು. ಅಲ್ಲಿ ಅರಣ್ಯವೇ ಇಲ್ಲ, ಅಲ್ಲಿ 35-40 ವರ್ಷದಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದರು. ಒಂದು ಉದಾಹರಣೆ ಕೊಡುವುದಾದರೆ, ಈ ಅಂಬಾರ್‌ಕೊಪ್ಪದಲ್ಲಿ ಶ್ರೀ ಕಾಗೋಡ್ ತಿಮ್ಮಪ್ಪನವರು ಇದ್ದಾರೆ ; ಅವರೂ ಸಹ ಹೋರಾಟ ಮಾಡಿದ್ದಾರೆ. ಶ್ರೀ ಕೆ. ಹೆಚ್. ಪಾಟೀಲ್‌ರವರೂ ಅನೇಕ ಬಾರಿ ಇಲ್ಲಿಗೆ ಬಂದು ಹೋಗಿದ್ದಾರೆ. ಇದು ಅರಣ್ಯ ಇಲಾಖೆಯ ಲೆಕ್ಕದಲ್ಲಿದೆ. ಅಲ್ಲಿ ವಿದ್ಯುತ್ ಕೊಟ್ಟಿದ್ದೇವೆ, ಮನೆ ಇದೆ, ರಸ್ತೆ ಮಾಡಿದ್ದೇವೆ, ಊರು ಇದೆ. ಆದರೆ ಈಗ ಕನ್‌ಫರ್ಮೇಷನ್ ಮಾಡುವಂಥ ಸಂದರ್ಭದಲ್ಲಿ ಇದು ಆಗುತ್ತಿಲ್ಲ. ಅದೇ ಮಧ್ಯಪ್ರದೇಶ ಸರ್ಕಾರ ಸುಮಾರು ಒಂದೂ ಮುಕ್ಕಾಲು ಲಕ್ಷ ಎಕರೆ ಜಮೀನನ್ನು ಎಸ್.ಟಿ.ಯವರು ಅನಾಥೊರೈಸ್ಡ್ ಕಲ್ಟಿವೇಷನ್ ಮಾಡಿದ್ದು ಅರಣ್ಯ ಇಲಾಖೆಗೆ ಸೇರಿತ್ತು.

ಇದರ ಬಗ್ಗೆ ಕೇಂದ್ರಸರ್ಕಾರದ ಜೊತೆ ಅವರು ಮಾತನಾಡಿ ಸ್ಥಳ ತನಿಖೆ ಮಾಡಿ ಅದನ್ನು ಅವರಿಗೆ ವಾಪಸ್ಸು ಕೊಟ್ಟು ಅವರಿಗೆಲ್ಲಾ ಈಗಾಗಲೇ ಸಾಗುವಳಿ ಚೀಟಿ ಕೊಟ್ಟಾಗಿದೆ. ಅದಕ್ಕೋಸ್ಕರ ನಾನು ಸಲಹೆ ಮಾಡುವಂತಾದ್ದು ಏನೆಂದರೆ, ಅರಣ್ಯ ಇಲಾಖೆಗೆ ಸೇರಿದಂಥ ಜಮೀನನ್ನು ಯಾವ ಕಡುಬಡವ ಒಂದೆರಡು ಎಕರೆ ಉಳುಮೆ ಮಾಡಿದ್ದರೆ, ಆ ಒಂದೆರಡು ಕುಟುಂಬಗಳ ಬಗ್ಗೆ ಇದನ್ನು ನಾನು ಪ್ರಸ್ತಾಪ ಮಾಡುವುದಿಲ್ಲ, ಎಲ್ಲಿ ನೂರಾರು ಎಕರೆ ಈಗಾಗಲೇ ಜಮೀನು ಮಾಡಿದ್ದಾರೆ, ಅಲ್ಲಿ ಒಂದು ಮರಗಿಡಗಳು ಇಲ್ಲ, ಅಂಥ ಸ್ಥಳ ಇರುವಂಥ ಕಡೆ ನಾವೇನು ರೆವಿನ್ಯೂ ಇಲಾಖೆಗೆ ಸೇರಿದಂಥ ಲಕ್ಷಾಂತರ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದ್ದೇವೆ. ಅರಣ್ಯ ಬೆಳೆಸಬೇಕೆಂಬ ಸದುದ್ದೇಶದಿಂದ, ಈ ರೀತಿ ನಮ್ಮ ರೆವಿನ್ಯೂ ಇಲಾಖೆಗೆ ಸೇರಿದಂಥ ಸಿ ಅಂಡ್ ಡಿ ಲ್ಯಾಂಡ್ ವರ್ಗಾವಣೆ ಮಾಡಿರುವಂಥ ಸಂದರ್ಭದಲ್ಲಿ ಅರಣ್ಯ ಇಲಾಖೆಗೆ ಸೇರಿದಂಥ ಜಮೀನಿನಲ್ಲಿ ಏನಾದರೂ ಬಗರ್ ಹುಕ್ಕುಂ ಸಾಗುವಳಿ ಮಾಡಿರುವಂತಾದ್ದು ಸರಿ ಎಂದು ಕಂಡುಬಂದರೆ ಸಾವಿರಾರು ಕುಟುಂಬಗಳು ಅಲ್ಲಿದ್ದರೆ, ಕೇಂದ್ರ ಸರ್ಕಾರದ ಮನವೊಲಿಸಿ ಆ ಜಮೀನನ್ನು ನಾವು ತೆಗೆದುಕೊಂಡು ಆ ಬಡವನಿಗೆ ಹಂಚುವಂಥ ಕೆಲಸವನ್ನು ಮಾಡಬೇಕು. ಮತ್ತೆ ಅವರಿಗೆ ಹೇಳಬೇಕು; ಸನ್ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಈ ಬಗ್ಗೆ ಚರ್ಚೆ ಆಯಿತು. ಪ್ರೊಸೀಡಿಂಗ್ಸ್ ತೆಗೆದು ನೋಡಿ ಅದು ರೆಕಾರ್ಡ್ ಆಗಿದೆ. ನಾವು ಕೇಂದ್ರ ಸರ್ಕಾರದ ಮನವೊಲಿಸುತ್ತೇವೆಂದು ಹೇಳಿದ್ದಾರೆ. ಸಿ ಅಂಡ್ ಡಿ ಲ್ಯಾಂಡ್ ಲಕ್ಷಾಂತರ ಎಕರೆ ನಾವು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಾವು ಸಾವಿರಾರು ಎಕರೆ ಜಮೀನನ್ನು ವಾಪಸ್ಸು ತೆಗೆದುಕೊಳ್ಳುವುದರಲ್ಲಿ ಅಭ್ಯಂತರ ಬರುವುದಿಲ್ಲ. ಇದನ್ನು ಮಾಡೋಣ ಎನ್ನುವಂಥ ಭರವಸೆಯನ್ನು ಅವೊತ್ತು ಸಮಿತಿಯಲ್ಲಿ ಕೊಟ್ಟಿದ್ದರು. ಆದರೆ ಬೇರೆ ಬೇರೆ ಕಡೆಯಲ್ಲಿ ಆಗಲಿಲ್ಲ, ಅದೇ ಮಧ್ಯ ಪ್ರದೇಶದಲ್ಲಿ ಆ ಕೆಲಸಮಾಡಿ ಈಗಾಗಲೇ ಸಾಗುವಳಿ ಚೀಟಿ ಕೊಟ್ಟಿದ್ದಾರೆ. ನಾನು ತಮಗೆ ವಿನಂತಿ ಮಾಡುವುದೇನೆಂದರೆ, ಇದರ ಬಗ್ಗೆ ಸರಿಯಾದಂಥ ಪ್ರಯತ್ನ ಮಾಡಿ ಅರಣ್ಯ ಇಲಾಖೆ ಜಮೀನಿನಲ್ಲಿ ಏನು ಬಗರ್‌ಹುಕ್ಕುಂ ಸಾಗುವಳಿ ಮಾಡುತ್ತಿದ್ದಾರೆ, ಅಂತಹ ಬಡವರಿಗೆ ಅನುಕೂಲವಾಗುವಂಥ ಪ್ರಯತ್ನ ಮಾಡಬೇಕು.

ಅದೇರೀತಿ ಬ್ಯಾಕ್‌ವರ್ಡ್‌ಕ್ಲಾಸ್ ಯಾರು ಇದ್ದಾರೆ ಅವರ ಬಗ್ಗೆ 500 ಪಟ್ಟು ಎಂದು ತಾವು ಏನು ಹೇಳಿದ್ದೀರಿ ಅದು ಬಹಳ ಜಾಸ್ತಿಯಾಯಿತು. ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗದವರಿಗೆ ಫ್ರೀಯಾಗಿ ಕೊಡಿ. ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗದವರಿಗೆ ಯಾವ ರೇಟಿನಲ್ಲಿ ಜಮೀನು ಕೊಡಬೇಕು ಎಂದು ಹೇಳುತ್ತೀರಾ ಅದನ್ನು ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಸಹ ಅನ್ವಯ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾವು ಅದರೊಳಗೆ ಆಸ್ ಪ್ರಿಸ್ಕ್ರೈಬ್ಡ್ ಬೈ ರೂಲ್ಸ್ ಎದು ಮಾಡಿದ್ದೇವೆ. ಈಗ ಆ ಪ್ರಶ್ನೆ ಬರುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಏನು ಮಾಡಬೇಕು, ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಏನು ಮಾಡಬೇಕು, ಮಾರ್ಜಿನಲ್ ಫಾರಮರ್ಸ್‌ಗೆ, ಸ್ಮಾಲ್ ಫಾರ್‌ಮರ್ಸ್, ಲ್ಯಾಂಡ್‌ಲೆಸ್ ಎಲ್ಲರ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಎಷ್ಟು ಎಂದು ನಿಗದಿ ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ದೇಶಪಾಂಡರೆಯವರು ಏನು ಪ್ರಸ್ತಾಪ ಮಾಡಿದ್ದಾರೆಂದರೆ, ಸನ್ಮಾನ್ಯ ಹಿರಿಯ ಸಚಿವರಾದಂಥ ಅವರಿಗೆಲ್ಲಾ ಅದು ಅನುಭವಕ್ಕೆ ಬಂದಿರಬಹುದು. ಈ ಹಿಂದೆ ನಾವೇನು ಬಗರ್‌ಹುಕ್ಕುಂ ಸಾಗುವಳಿ ಖಾಯಂ ಮಾಡಿದೆವ್ವೋ, ರೆಗ್ಯುಲರೈಸ್ ಮಾಡಿದೆವ್ವೋ, ಅವೊತ್ತಿನಿಂದ, ಇವೊತ್ತಿನವರೆಗೆ ಅಲ್ಲಿರುವಂಥ ಮರಗಳನ್ನು 30-40 ವರ್ಷಗಳಿಂದಲೂ ಅಲ್ಲಿರುವಂಥ ರೈತ ಕಾಪಾಡಿಕೊಂಡು ಬಂದಿದ್ದಾನೆ. ಆದರೆ ಅರಣ್ಯ ಇಲಾಖೆಯಿಂದ ಹರಾಜು ಮಾಡುತ್ತಾರೆ ಅಲ್ಲಿರತಕ್ಕ ಹುಣಿಸೇ ಮರಗಳನ್ನು, ಆದರೆ ಅಲ್ಲಿರತಕ್ಕ ರೈತ ಸುಮಾರು 15-20 ವರ್ಷಗಳಿಂದಲೂ ಮರವನ್ನು ನೆಟ್ಟು ಕಾಪಾಡಿಕೊಂಡು ಬಂದಿದ್ದಾನೆ. ಅವೆಲ್ಲವೂ ನಮ್ಮ ಅರಣ್ಯ ಇಲಾಖೆಗೆ ಸೇರಿದಂತಹವು. ಈ ಬಗರ್‌ಹುಕ್ಕುಂ ಸಾಗುವಳಿ ಖಾಯಂ ಮಾಡುವಾಗ ಈ ಒಂದು ಮರಗಳನ್ನು ನಾವು ರೈತರಿಗೆ ಹಸ್ತಾಂತರ ಮಾಡಿಲ್ಲ. ಹೀಗಾಗಿ ಮರವನ್ನು ಕಾಯುವವನು, ಕಾಪಾಡುವವನು ಕಡು ಬಡವ ರೈತ. ಒಂದೆರಡು ಎಕರೆ ಇಟ್ಟುಕೊಂಡು ಮಾಡಿ ಕೊಂಡು ಬಂದಿದ್ದಾನೆ. ಆದರೆ ಅಲ್ಲಿ ಯಾರೋ ಒಬ್ಬ ಕಂಟ್ರಾಕ್ಟರ್ ಬಂದು ಸಾವಿರಾರು ರೂಪಾಯಿ ಬೆಲೆ ಬಾಳುವಂಥ ಹುಣಿಸೇ ಹಣ್ಣನ್ನು ಕಿತ್ತುಕೊಂಡು ಹೋಗುವಂಥ, ಕಸಿದುಕೊಂಡು ಹೋಗುವಂಥ ಪ್ರಯತ್ನ ಮಾಡುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದೇನೆಂದರೆ, ನಾಳೆ ಬೆಳಿಗ್ಗೆಯೇ ಪತ್ರಿಕೆಯಲ್ಲಿ ಅನ್‌ಆಥರೈಸ್ಡ್ ಕಲ್ಟಿವೇಷನ್ ಕನ್‌ಫರಮ್ ಆಗುತ್ತದೆ ಎನ್ನುವುದು ಗೊತ್ತಾದ ತಕ್ಷಣ ಅಂತಹವರ ಮರಗಳು ರಾತ್ರೋ ರಾತ್ರಿ ಖಾಲಿಯಾಗುತ್ತವೆ. ಯಾರು ಶಕ್ತಿ ಇಲ್ಲದೆ, ಕಡುಬಡವ ಬಗರ್‌ಹುಕ್ಕುಂ ಸಾಗುವಳಿ ಮಾಡುತ್ತಿದ್ದಾನೆ ಅವನ ಮರಗಳು ಖಾಲಿಯಾಗುತ್ತವೆ. ನಾನು ಶ್ರೀಮಂತರ ಬಗ್ಗೆ ಮಾತನಾಡುತ್ತಿಲ್ಲ. ಏಕೆಂದರೆ, ಕಡುಬಡವನಿಗೆ ಮರಗಳ ಒಂದು ಬೆಲೆ ಕೂಡ ಗೊತ್ತಿರುವುದಿಲ್ಲ, ಎಲ್ಲಿಯವರಿಗೆ ನಮ್ಮ ಬಡವರು ಇವೊತ್ತು ಒಂದು ಪ್ರಾಪಂಚಿಕ ಜ್ಞಾನ ಗೊತ್ತಿಲ್ಲ, ಅಂದರೆ ಆ ಮರ ಸುಮಾರು 5 ಸಾವಿರ ರೂಪಾಯಿ ಬೆಲೆ ಬಾಳಿದರೆ, ಅವನು ಬಡತನದ ಬೇಗೆಯಲ್ಲಿ ಸಿಕ್ಕಿರುವುದರಿಂದ, 500 ರೂಪಾಯಿಗೆ ಕೊಟ್ಟುಬಿಟ್ಟು ಆ ಮರಗಳನ್ನು ಕಡಿದುಕೊಂಡು ಹೋಗು ಎಂದು ಬಿಟ್ಟುಬಿಡುತ್ತಾನೆ. ಅಂಥಹ ಒಂದು ಪರಿಸ್ಥಿತಿ ನಮ್ಮ ಬಡವರಿಗೆ ಒದಗಬಾರದು. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಅವರಿಗೆ ದೊಡ್ಡ ಸಹಾಯ, ಉಪಕಾರ ಮಾಡಿದಂತಾಗಬೇಕು.

ಅದಕ್ಕೆ ಒಂದು ನಾಮಿನಲ್ ರೇಟು ಫಿಕ್ಸ್‌ಮಾಡಿ, ನಾನು ಫ್ರೀ ಆಗಿ ಕೊಡಿ ಎಂದು ಹೇಳುವುದಿಲ್ಲ. ಅರಣ್ಯ ಇಲಾಖೆಯವರಿಗೆ ಇದನ್ನು ಬಿಡಬೇಡಿ. ಕಮಿಟಿಯವರಿಗೆ ಜವಾಬ್ದಾರಿ ಕೊಡಿ, ಏಕೆಂದರೆ ಹೇಗೂ ಜಮೀನನ್ನು ಕೊಡುತ್ತಿದ್ದೀರಿ. ತಾವು ನಾಮಿನಲ್ ರೇಟು ಫಿಕ್ಸ್‌ಮಾಡಿ ಅವರು ಸಧ್ಯದಲ್ಲಿ ಕಂತುಗಳ ರೂಪದಲ್ಲಿ ಅವರು ಅದರ ಬೆಲೆಯನ್ನು ಕಟ್ಟುವಂಥ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅಲ್ಲಿರತಕ್ಕ ಮರಗಳು ಉಳಿಯುತ್ತವೆ. ಅವನು, ಆ ಮರಗಳನ್ನು ಸಾಕಿ ರಕ್ಷಣೆ ಮಾಡುತ್ತಾನೆ. ಈಗ ನಮ್ಮ ಉದ್ದೇಶ ಇರತಕ್ಕಂಥಾದ್ದು ಬಡವನಿಗೆ ನಾವು ಜಮೀನನ್ನು ಖಾಯಂ ಮಾಡಿಕೊಡಬೇಕು, ಅಲ್ಲಿ ಅವನು ಬೆಳೆದು ಅವನ ಕಾಲಿನ ಮೇಲೆ ಅವನು ನಿಲ್ಲಬೇಕು. ಇದೇ ಉದ್ದೇಶ, ನಾಳೆ ಅವನು ಒಂದೆರಡು ಮೂರು ಎಕರೆ ಜಮೀನಿನಲ್ಲಿ ಮರಗಳನ್ನು ಬೆಳೆಸಿ ಅದರಿಂದ ಅವನಿಗೆ ಒಂದೆರಡು ಸಾವಿರ ರೂಪಾಯಿ ಆದಾಯ ಬಂದರೆ ಅವನು ಗಟ್ಟಿಯಾಗುತ್ತಾನೆ. ಅವನ ಜೀವನಕ್ಕೂ ಕೂಡ ಒಂದು ದಾರಿಯಾಗುತ್ತದೆ. ಆದ್ದರಿಂದ, ಒಂದು ನಾಮಿನಲ್ ರೇಟು ಫಿಕ್ಸ್ ಮಾಡಿ. ಹಿಂದೆ ಏನೋ ನಮ್ಮ ಕಡೆಯಿಂದ ಒಂದು ತಪ್ಪಾಗಿದೆ. ಆ ರೀತಿಯ ತಪ್ಪು ಪುನಃ ಆಗದಂತೆ, ಆ ಜಮೀನಿನಲ್ಲಿರುವಂಥ ಮರಗಳನ್ನು ಅವನಿಗೆ ಉಳಿಸಿಕೊಡುವಂಥ ಒಂದು ತಿದ್ದುಪಡಿಯನ್ನು ತಾವು ತರಬೇಕಾಗುತ್ತದೆ. ಇಲ್ಲದೇ ಇದ್ದರೆ ಆ ಕಮಿಟಿಗೆ ಪವರ್ಸ್ ಕೊಡಬೇಕು. ಮಾನ್ಯ ದೇಶಪಾಂಡೆಯವರು ಹೇಳಿದಂತೆ ಯಾವ ಒಂದು ಶಾಸಕ ಸಮಿತಿಯಲ್ಲಿರುತ್ತಾನೆ, ಆತನಿಗೆ ರೆಗ್ಯುಲರೈಸ್ ಮಾಡುವಂಥ ಪೂರ್ಣ ಅಧಿಕಾರ ಕೊಡಿ. ಅಧಿಕಾರಿಗಳನ್ನು ಮಧ್ಯದಲ್ಲಿ ತರಬೇಡಿ. ಈ ಅಧಿಕಾರ ವಿಕೇಂದ್ರಿಕರಣದ ಮಾತನ್ನು ಆಗುವಂಥ ಸಂದರ್ಭದಲ್ಲಿ ಆ ಸೆಕ್ರೆಟರಿಯವರಿಗಿಂತಲೂ ಹೆಚ್ಚಾಗಿ ದಯಮಾಡಿ ಕಮಿಟಿಗೆ ಪೂರ್ಣ ಅಧಿಕಾರವನ್ನು ಕೊಡಿ. ಆ ಒಂದು ಕ್ಷೇತ್ರದಿಂದ ಎರಡು ಮೂರು ಜನ ಶಾಸಕರು ಆ ಒಂದು ಕ್ಷೇತ್ರದ ಬಗ್ಗೆ ಒಂದು ಸ್ಪಷ್ಟ ನಿಲುವು ತೆಗೆದುಕೊಳ್ಳಿ. ಈಗಾಗಲೇ ತಾವು ಭೂನ್ಯಾಯಮಂಡಲಿಗಳಿಗೆ ಯಾರು ಹೆಚ್ಚಿನ ಒಂದು ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ, ಅವರಿಗೆ ಅಧ್ಯಕ್ಷ ಎಂದು ಮಾಡಿದ್ದೀರಿ. ಅದಕ್ಕೋಸ್ಕರ ನಾನು ಇಲ್ಲಿ ವಿನಂತಿಮಾಡುವುದು ಯಾರು ಹೆಚ್ಚಿನ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ ಅವರಿಗೆ ಅಧ್ಯಕ್ಷರನ್ನಾಗಿ ಮಾಡಿ ಉಳಿದಂಥ ಶಾಸಕರು ಒಬ್ಬರು ಬರಬಹುದು ಅಥವಾ ಎರಡು ಜನ ಬರಬಹುದು, ಅವರು ಸಮಿತಿ ಸದಸ್ಯರು ಎಂದು ಒಂದು ಸಾರಿ ಪಾಲಿಸಿ ಡಿಸಿಷನ್ ಸಾರಿಬಿಟ್ಟಿದೆ ಬಹುಶಃ ಅಲ್ಲಿ ಗೊಂದಲ ಆಗುವುದಿಲ್ಲ.

12.30 ಪಿ.ಎಂ

ಈ ರೀತಿ ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಅದರಲ್ಲೂ ವಿಶೇಷವಾಗಿ ಬಗರ್ ಹುಕ್ಕುಂ ಸಾಗುವಳಿಯನ್ನು ಮಾಡುತ್ತಿರುವ ಬಡವರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಒಂದು ಸಮಗ್ರ ತಿದ್ದುಪಡಿಯನ್ನು ತಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಕಿತ್ತುಹಾಕತಕ್ಕ ಯಾವುದೇ ಸಂಗತಿಯೂ ಇಲ್ಲ. ಬಹುಶಃ ಈ ಸರ್ಕಾರ ಅಧಿಕಾರಕ್ಕೆ ಬಂದ 1 ವರ್ಷದಲ್ಲಿ ಸುಮಾರು 3.13 ಲಕ್ಷ ಕುಟುಂಬಗಳಿಗೆ ಸಿ ಅಂಡ್ ಡಿ ಲ್ಯಾಂಡ್‌ನ್ನು ವರ್ಗಾವಣೆ ಮಾಡಿ ಅದನ್ನು ಸರಿಪಡಿಸಿದರೆ ಇನ್ನೂ ಒಂದು ಲಕ್ಷ ಕುಟುಂಬಗಳು ಜಾಸ್ತಿಯಾಗಬಹುದು. ಇದೇರೀತಿ ಅನೇಕ ವರ್ಷಗಳಿಂದ ಬಗರ್‌ಹುಕುಂ ಮಾಡಿರತಕ್ಕ ಅರಣ್ಯ ಇಲಾಖೆಗೆ ಸೇರಿದಂಥ ಜಮೀನನ್ನು ಯಾರು ಕಡು ಬಡವರಿದ್ದಾರೆ, ಕೃಷಿ ಕಾರ್ಮಿಕರಿದ್ದಾರೆ ಅವರಿಗೂ ಈ ಜಮೀನನ್ನು ಕೊಟ್ಟರೆ ಇನ್ನೂ 1 ಲಕ್ಷ ಕುಟುಂಬ ಅದರ ವ್ಯಾಪ್ತಿಯಲ್ಲಿ ಬರಬಹುದು. ಈ ರೀತಿ 4-5ಲಕ್ಷ ಕುಟುಂಬಗಳಿಗೆ ಅನುಕೂಲವಾಗುವಂಥ

ಒಂದು ಸಮಗ್ರವಾದ ಒಂದು ಹಿನ್ನೆಲೆಯನ್ನಿಟ್ಟುಕೊಂಡು ಈ ತಿದ್ದುಪಡಿಯನ್ನು ನೀವು ತಂದಿದ್ದೀರಿ. ಇದಕ್ಕೆ ನಮ್ಮ ಪಕ್ಷದ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಅನೇಕ ವರ್ಷದಿಂದ ನಾವು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಆ ವ್ಯಕ್ತಿಗೆ ನ್ಯಾಯಸಿಕ್ಕುವಂತೆ ನೀವು ಕೆಲಸಮಾಡಿದ್ದೀರಿ. ಆದ್ದರಿಂದ ಮತ್ತೊಮ್ಮೆ ವೈಯುಕ್ತಿಕವಾಗಿ ಮತ್ತು ನನ್ನ ಪಕ್ಷದ ಪರವಾಗಿ ನಿಮ್ಮ ಸರ್ಕಾರವನ್ನು ಅಭಿನಂದಿಸುತ್ತೇನೆ. ಇನ್ನೂ ಏನೇನು ಕೆಲವು ಸಣ್ಣಪುಟ್ಟ ಲೋಪದೋಷಗಳಿವೆ, ಅವುಗಳ ಬಗ್ಗೆ ಸಮಗ್ರವಾಗಿ ಯಾವುದೇ ಒಂದು ಶಾಸನವನ್ನು ತಂದಾಗ ಇವುಗಳನ್ನು ತರುವುದಕ್ಕಾಗುವುದಿಲ್ಲ. ಆದ್ದರಿಂದ ಸಿ ಅಂಡ್ ಡಿ ಲ್ಯಾಂಡ್ ವರ್ಗಾವಣೆ ಆಗಿರುವ ಕಡೆಗೂ ಮನ ಕೊಡಬೇಕು. ಅರಣ್ಯ ಇಲಾಖೆಯಲ್ಲಿ ಬಗರ್‌ಹುಕುಂ ಮಾಡಿದಂಥ ವ್ಯಕ್ತಿಗಳಿಗೆ ಜಮೀನು ಸಿಕ್ಕುವಂತೆ ಮಾಡಬೇಕು, ಮತ್ತು ಮುಂದೆ ಒಂದು ಗುಂಟೆ ಜಮೀನನ್ನೂ ಈ ರಾಜ್ಯದ, ಅಥವಾ ದೇಶದ ಹಿತದೃಷ್ಟಿಯಿಂದ ಬಗರ್ ಹುಕುಂ ಸಾಗುವಳಿ ಆಗದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಒಂದು ದಿಟ್ಟ ಹೆಜ್ಜೆಯನ್ನು ಇಡಬೇಕೆಂದು ಕೇಳಿಕೊಂಡು ಈ ಸಂದರ್ಭದಲ್ಲಿ ಮಾತನಾಡಲು ನನಗೆ ಅವಕಾಶವನ್ನು ಕೊಟ್ಟಂಥ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಬಗರ್ ಹುಕುಂ ಸಾಗುವಳಿ ಜಮೀನನ್ನು ಖಾಯಂ ಮಾಡುವ ದೃಷ್ಟಿಯಿಂದ ಈ ತಿದ್ದುಪಡಿ ಮಸೂದೆಯನ್ನು ಸರ್ಕಾರ ಇಲ್ಲಿ ಏನು ಮಂಡಿಸಿದೆ ಇದನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ಸಚಿವರಾದ ಖಾರ್ಗೆಯವರು ಬಹಳ ವರ್ಷಗಳಿಂದ ಮಾತನಾಡುತ್ತಿದ್ದರು. ನಮ್ಮ ರಾಜ್ಯದ ಸಣ್ಣ ಬಡ ರೈತರ ಒಂದು ದೊಡ್ಡ ಸಮಸ್ಯೆಯಾಗಿತ್ತು. ಬಹಳಷ್ಟು ಪಕ್ಷಗಳು ಇದಕ್ಕಾಗಿ ಹೋರಾಟಮಾಡಿಕೊಂಡು ಬಂದಿದ್ದುವು. ಸಿ.ಪಿ.ಐ. ಮತ್ತು ಸಿ.ಪಿ.ಎಂ. ಪಕ್ಷದವರು ಇದಕ್ಕಾಗಿ ಅನೇಕ ಸಾರಿ ಬೆಂಗಳೂರಿನಲ್ಲಿ ಧರಣಿ ನಡೆಸಿ, ಚಳವಳಿಯನ್ನು ಮಾಡಿ ಸತ್ಯಾಗ್ರಹ ಮಾಡಿ ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದರ ಮುಂಚೂಣಿಯಲ್ಲಿ ಈ ಸದನದ ಅನೇಕ ಮಾನ್ಯ ಸದಸ್ಯರೂ ಇದ್ದರು. ಈ ಸಂದರ್ಭದಲ್ಲಿ ನಾನು ಮಾನ್ಯ ಖಾರ್ಗೆಯವರಿಗೆ ಹೇಳಬಯಸುವುದೇನೆದಂರೆ, ನಮ್ಮ ರಾಜ್ಯದಲ್ಲಿರತಕ್ಕ ಪ್ಲಾಂಟರ್‌ಗಳು ಏನು ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ, ಅದನ್ನೂ ಕೂಡ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಜಮೀನು ಇಲ್ಲದೇ ಇರತಕ್ಕ ಜನರಿಗೆ ಕೊಟ್ಟಿದ್ದಿದ್ದರೆ ಬಹಳ ಅನುಕೂಲವಾಗುತ್ತಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಕಾಫಿ ಪ್ಲಾಂಟರ್ಸ್ ಮಾಡಿಕೊಂಡಿರತಕ್ಕ ಎನ್‌ಕ್ರೋಚ್‌ಮೆಂಟ್ ಏನಿದೆ ಅದನ್ನೂ ಮಾಡಬಹುದಿತ್ತು. ಮಾನ್ಯ ಕಾಗೋಡು ತಿಮ್ಮಪ್ಪನವರು ಇದಕ್ಕೋಸ್ಕರ ಬಹಳವಾಗಿ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಕಾಫಿ ತೋಟದವರಿಗೆ ಜಮೀನುಗಳನ್ನು ಕೊಡಬೇಕೆಂದು ಹೋರಾಟ ಮಾಡಿದ್ದಾರೆ. ಅದನ್ನು ಮಾಡಿದ್ದರೆ ನಿಜವಾಗಿ ಈ ಸರ್ಕಾರ ಒಂದು ಕ್ರಾಂತಿಕಾರಿ ಕೆಲಸವನ್ನು ಮಾಡಿದೆ ಎಂದು ನಾನು ಈ ಸರ್ಕಾರದ ನೇತಾರರನ್ನು ಮತ್ತು ಮಾನ್ಯ ಖಾರ್ಗೆಯವರನ್ನು ನಾನು ಖಂಡಿತವಾಗಿ ಅಭಿನಂದಿಸುತ್ತಿದ್ದೆ. ಈಗ ಅಭಿನಂದಿಸುವುದಕ್ಕೆ ಮಂಡಿಸಿರುವ ಈ ತಿದ್ದುಪಡಿ ಮಸೂದೆಯಲ್ಲಿ ಏನೂ ಇಲ್ಲ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಇದನ್ನು ವಾಪಸು ತೆಗೆದುಕೊಳ್ಳೋಣವೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ವಾಪಸು ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ನೀವು ಈ ಪಾಪದ ಕೆಲಸವನ್ನು ಮಾಡುವುದಿಲ್ಲ ಎಂದು ನನಗೆ ಗೊತ್ತು. ಬಡವರ ನೋವು ಏನಿದೆ ಅದನ್ನು ತಾವು ಅರ್ಥಮಾಡಿಕೊಂಡಿರುವರು. ತಮ್ಮ ಕಾಲನ್ನು ಯಾರು ಎಳೆದರು ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಇದನ್ನು ಮೊದಲೇ ಯೋಚನೆ ಮಾಡಿದ್ದೆ. ನಮ್ಮಲ್ಲಿರತಕ್ಕ ಪಟ್ಟಿಯ ಪ್ರಕಾರ ಪ್ಲಾಂಟೇಷನ್ ಲ್ಯಾಂಡ್‌ನ್ನು ಎನ್‌ಕ್ರೋಚ್ ಮಾಡಿರತಕ್ಕದ್ದು ಎಷ್ಟು ಜನರು ಎಂದು ಗೊತ್ತೆ? ಸ್ಮಾಲ್, ಮಾರ್ಜಿನಲ್ ಮತ್ತು ಲ್ಯಾಂಡ್‌ಲೆಸ್ ಪೀಪಲ್ ಪ್ರಕಾರ 34,070 ಎಕರೆ ಮಾತ್ರ ಇದೆ. ಬೆನಿಫಿಷಿಯರೀಸ್ ಎಷ್ಟು ಎಂದರೆ 12,012 ಜನ ಮಾತ್ರ ಇದ್ದಾರೆ. ಇವರಿಂದ ಬೇರೆಯವರಿಗೆ ಕಾಂಪ್ಲಿಕೇಷನ್ಸ್ ಆಗಬಾರದು. ಈ 34 ಸಾವಿರ ಎಕರೆಗೋಸ್ಕರ ಅನೇಕ ಜನ ದೊಡ್ಡ ದೊಡ್ಡ ಪ್ಲಾಂಟರ್ಸ್ ಏನು ಎನ್‌ಕ್ರೋಜ್‌ಮೆಂಟ್ ಮಾಡಿಕೊಂಡು ಕೂತಿದ್ದಾರೆ, ಅದಕ್ಕೆ ತೊಂದರೆ ಆಗಬಾರದು ಮತ್ತು ಇದಕ್ಕೂ ಕೂಡ ಡಿಲೇ ಆಗಬಾರದು ಅಂಥ. ಏಕೆಂದರೆ ಇದೇ ವಿಷಯದ ಮೇಲೆ ನೀವು ಪ್ಲಾಂಟರ್ಸ್‌ಗೆ ಕೊಡುತ್ತೀರಿ, ಅವರಿಗೆ ಕೊಡುತ್ತೀರಿ, ಇವರಿಗೆ ಕೊಡುತ್ತೀರಿ ಎಂದು ಬರುತ್ತದೆಂಬುದನ್ನು ಊಹೆ ಮಾಡಿಕೊಂಡೇ ನಾನು ಇದನ್ನು ತಡೆಹಿಡಿದಿದ್ದೇನೆಯೇ ಹೊರತು ಬೇರೆ ಅಲ್ಲ. ಇದು ಬಹಳ ಸರಳವಾಗಿದ್ದರೆ ಈ 34 ಸಾವಿರ ಎಕರೆಯನ್ನು ಕೊಡತಕ್ಕದು ದೊಡ್ಡದೇನೂ ಆಗಿರಲಿಲ್ಲ. ಇದು ತಮ್ಮ ಕಾಲದಲ್ಲಿ ತಯಾರು ಅದಂಥ ಪಟ್ಟಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದಕ್ಕೋಸ್ಕರ ನಾನು ಹೇಳುವುದು, ಏತಕ್ಕೆ ನಿಮ್ಮ ಸರ್ಕಾರವನ್ನು ಅಭಿನಂದಿಸುತ್ತಿಲ್ಲವೆಂದರೆ ಇದೇ ಕಾರಣದಿಂದ. ಅಲ್ಲಿರತಕ್ಕಂಥ 34 ಸಾವಿರ ಎಕರೆ ಜಮೀನು ಎನ್ನುವುದು ಸಹಿತ ಗೊತ್ತಿದೆ. ಆದರೆ ಇಲ್ಲಿ ಬಂದಿರತಕ್ಕಂಥ ಅಂಕಿ ಅಂಶಗಳು ಏನಿದೆ ; ಈ ಅಂಕಿಅಂಶಗಳನ್ನು ಕೊಟ್ಟಿರತಕ್ಕಂಥವರು ಯಾರೆಂದರೆ ಕೆಳಮಟ್ಟದಲ್ಲಿರುವ ರೆವಿನ್ಯೂ ಇನ್‌ಸ್ಪೆಕ್ಟರ್ ; ಕಾಫಿ ಪ್ಲಾಂಟ್ಸ್ ಅತಿಕ್ರಮಣ ಮಾಡಿರತಕ್ಕಂಥ ಲಕ್ಷಾಂತರ ಎಕರೆ ಜಮೀನು ಏನಿದೆ, ಅದರ ಬಗ್ಗೆ ಇಲ್ಲಿ ಏನೂ ಪ್ರಸ್ತಾಪವಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ತಮ್ಮ ಸರ್ಕಾರದ ಲೆಕ್ಕದ ಪ್ರಕಾರ ಇದು ಯಾವ ವರ್ಷದ್ದು? ಯಾವ ವರ್ಷ ಸರ್ವೆ ಆಗಿದ್ದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 1-1-1988, ಯಾರಿಗಾದರೂ ಡಿಫೆಂಡ್ ಆಗಬೇಕಲ್ಲ; ಯಾವ ಸರ್ಕಾರವಿದ್ದರೂ ಡೆಪ್ಯುಟಿ ಕಮೀಷನರ್, ತಹಸಿಲ್ದಾರ್ ಕಡೆಯಿಂದಲೇ ವರದಿಯನ್ನು ತರಿಸಬೇಕಲ್ಲ. ಈ ವಿವರಗಳು ಈ ಎರಡು ವರ್ಷಗಳಲ್ಲಿ ಹೆಚ್ಚಾಗಿ ಆಗಿರಬಹುದು. ಇದು ಕಾಂಪ್ಲಿಕೇಷನ್ ಆಗಬಾರದೆಂದು ಹೇಳಿ ಸದ್ಯಕ್ಕೆ ಅದನ್ನು ಕೈಬಿಡಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಡೆಪ್ಯುಟಿ ಕಮೀಷನರಿಗೂ ಡಿಪೆಂಡ್ ಆಗಬೇಕಾಗಿಲ್ಲ. ಏತಕ್ಕೆಂದರೆ ನೀವು ಮಂತ್ರಿಗಳಾಗಿರುವುದರಿಂದ ಅವರು ಏನು ಹೇಳುತ್ತಾರೆ ಅದನ್ನೇ ಇಲ್ಲಿ ಉತ್ತರ ಕೊಡುತ್ತೀರಿ ನಾವು ಅದನ್ನೇ ಮಾಡಿದ್ದು. ಆದರೆ ಮಾನ್ಯ ರಂಗನಾಥರವರನ್ನು ನಾನು ಡಿಫೆಂಡ್ ಮಾಡುತ್ತೇನೆ. ಏತಕ್ಕೆಂದರೆ ಅವರು ಕಾಫಿ ಪ್ಲಾಂಟೇಷನ್ ಏರಿಯಾದಿಂದ ಒಂದು ಸಾರಿ ಎಲೆಕ್ಟ್ ಆಗಿ ಬಂದಿದ್ದವರು. ಅವರು ಎರಡು ಸಾರಿ ಎಲೆಕ್ಟ್ ಆಗಿ ಬಂದಿರುವುದರಿಂದ ಅವರಿಗೆ ನಮಗಿಂತಲೂ ಹೆಚ್ಚಿನ ವಿಚಾರ ಚೆನ್ನಾಗಿ ಗೊತ್ತಿದೆ. ಈಗ ಅದು ಆಗುವುದಿಲ್ಲವೆಂದು

ಬೇಕಾದರೆ ಫ್ರಾಂಕ್ ಆಗಿ ಹೇಳಿಬಿಡಿ, ನಮ್ಮ ಸರ್ಕಾರದವರಲ್ಲಿ ಆಷಾಡಭೂತಿತನವಿಲ್ಲ, ಅದನ್ನು ನಾವು ಅವರಿಗೆ ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿ. ಒಂದು ಎಕರೆ ತೋಟಕ್ಕೆ ಒಂದು ಲಕ್ಷದಿಂದ ಎರಡು ಲಕ್ಷ ರೂಪಾಯಿಗಳಂತೆ ದುಡ್ಡು ತೆಗೆದುಕೊಳ್ಳುತ್ತೇವೆ ಎಂದು ಹೇಳಿ. ಅದರಿಂದ ಸರ್ಕಾರಕ್ಕೆ 250 ಕೋಟಿ ರೂಪಾಯಿ ಬರುತ್ತದೆಂದು ತಾವೇನಾದರೂ ಆ ಬಗ್ಗೆ ಕಾನೂನು ಮಾಡಿ 250 ಕೋಟಿ ತೆಗೆದುಕೊಂಡಿದ್ದರೆ ನಾನು ಅದನ್ನು ಮೆಚ್ಚುತ್ತಿದ್ದೆ. ಈಗ ಏನಾಗಿದೆ ಎಂದರೆ ಅವರ ವಶದಲ್ಲಿದೆ. ಅವರಿಗೆ ನಾನೇನು ಕ್ರೆಡಿಟ್ ಕೊಡಬೇಕೆಂದು ಹೇಳುತ್ತಿಲ್ಲ. ನಮ್ಮ ಮಾನ್ಯ ಬೊಮ್ಮಾಯಿಯವರು ರೆವಿನ್ಯೂ ಮಂತ್ರಿಗಳಾಗಿದ್ದಾಗ, ಮಾನ್ಯ ಬಿ.ಎಲ್ ಪಾಟೀಲ್‌ರವರು ರೆವಿನ್ಯೂ ಮಂತ್ರಿಗಳಾಗಿದ್ದಾಗ, ಮಾನ್ಯ ಲಕ್ಷ್ಮೀಸಾಗರ್‌ರವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಇದನ್ನು ತಂದದ್ದು. ಈ ಕಾಫಿತೋಟದ ಮಾಲೀಕರಿಂದ ಕಾಂಪ್ಲಿಕೇಷನ್ಸ್ ಬರುತ್ತದೆ ಎಂದು ಹೇಳುತ್ತಿದ್ದೀರಲ್ಲ ಅದು ತೆರೆಯ ಮರೆಯಲ್ಲಿ ಆಗತಕ್ಕಂಥ ಕೆಲಸ ಆ ಶಕ್ತಿಗಳು ನಿಮಗೂ ಸಹ ಎಳೆದಿದೆ ಎಂದು ನಮಗೆ ಅರ್ಥವಾಗುತ್ತಿದೆ. ಆ ಶಕ್ತಿಗಳೇ ಕೆಲಸ ಮಾಡುತ್ತಿದೆ ಎನ್ನುವುದು ನಮಗೆ ಅರ್ಥವುಗುತ್ತಿದೆ. ಈಗ ತಾವು ಆಕಡೆ ಕುಳಿತಾಗ ಮಾನ್ಯ ಬೈರೇಗೌಡರೆ ಕೇಳಿ ನಮ್ಮಲ್ಲಿದ್ದಂಥ ಎಲ್ಲ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಶಾಸಕರು ಏನು ಮಾಡಿದರೆಂದರೆ ನೀವು ಸೈನ್‌ಹಾಕಿ ರೆಗ್ಯುಲರೈಸ್ ಮಾಡುವುದು ಅಥವಾ ಡಿಸ್ಟ್ರಿಬ್ಯೂಷನ್ ಮಾಡುವವರೆಗೆ ಇದನ್ನು ಮಾಡಬಾರದು ಎನ್ನುವ ವಿಚಾರವನ್ನೂ ಕೂಡ ಹೇಳಿದರು. ಅದನ್ನು ಕಿತ್ತು ಇವರಿಗೆ ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದರು, ಅಲ್ಲಿಯವರೆಗೆ ಇದನ್ನು ಪಾಸ್ ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದರು. ನಾನು ರಾಜಕೀಯವಾಗಿ ಇದನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತಿಲ್ಲ. ಆದರೆ ವಸ್ತುಸ್ಥಿತಿಯಲ್ಲಿ ಇದನ್ನು ಮಾಡಲಿಕ್ಕೆ ಆಗುತ್ತಿಲ್ಲ. ಇದನ್ನು ಕ್ರಾಂತಿಕಾರಿ ಎಂದು ಕರೆಯುವುದರಲ್ಲಿ ಏನೂ ಸಹಿತ ಉಳಿದಿಲ್ಲ ; ಆದರೂ ಈಗ ಮಾಡಿರುವುದನ್ನು ನಾನು ಒಪ್ಪುತ್ತೇನೆ. ಈ ಸರ್ಕಾರ ಭೂಮಿಯ ಬಗ್ಗೆ ಮಾನ್ಯ ಜಾಲಪ್ಪನವರು ಈಗಾಗಲೇ ಹೇಳಿದ್ದಾರೆ, ಸ್ಮಶಾನ, ಕೆರೆ ಅಂಗಳ, ಗುಂಡುತೋಪು ಇದನ್ನು ಮಾತ್ರ ಯಾವ ಕಾರಣಕ್ಕೂ ಸಹಿತ ರೆಗ್ಯುಲರೈಸ್ ಮಾಡುವುದಕ್ಕೆ ಹೋಗಬೇಡಿ ಈ ಗುಂಡು ತೋಪು ಏನಿದೆ......

ಶ್ರೀ ಕೆ.ಹೆಚ್. ರಂಗನಾಥ್ : ನಾಳೆ ನೀರು ಸಹಿತ ಬರುವುದು ನಿಂತುಹೋಗತಕ್ಕಂಥ ಪರಿಸ್ಥಿತಿ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಹಾರಾಷ್ಟ್ರ ಸರ್ಕಾರದವರು ಬಹಳ ಉತ್ತಮವಾದಂಥ ಕೆಲಸ ಮಾಡಿದ್ದಾರೆ. ನೀರನ್ನು ನಿಲ್ಲಿಸುವ ಸಲುವಾಗಿ ಸಣ್ಣ ಸಣ್ಣ ಪಾಂಡ್‌ಗಳನ್ನು ಕಟ್ಟಿಸಿ ಬರತಕ್ಕಂಥ ನೀರನ್ನು ನಿಲ್ಲಿಸಿ ಸರ್ಕ್ಯುಲೇಷನ್ ಟ್ಯಾಂಕ್ಸ್‌ನ್ನು ಕಟ್ಟಿದ್ದಾರೆ. ಇದು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥದ್ದು ; ಆದರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಹೋದರೆ ಕುಂಟೆಗಳಲ್ಲಿ ಜನಜಾನುವಾರುಗಳು ಪಕ್ಷಿಗಳು ನೀರು ಕುಡಿಯುವುದಕ್ಕೆ ಹೋಗತಕ್ಕಂಥದ್ದು ಸಹಿತ ಮುಚ್ಚಿಹೋಗಿಬಿಡುತ್ತದೆ. ಆದ್ದರಿಂದ ಇಂಥಾದ್ದನ್ನು ಖಾಯಂ ಮಾಡಬಾರದು.ಹಾಗೂ ಇದನ್ನು ರೆಗ್ಯುಲರೈಸ್ ಮಾಡುವುದಕ್ಕೆ ತಾವು ಅವಕಾಶ ಕೊಡಬಾರದು. ಇದರ ಜೊತೆಗೆ ವಿಶೇಷವಾಗಿ ಬಡವರು ಉಪಯೋಗಿಸತಕ್ಕ ಸ್ಮಶಾನ ಏನಿದೆ, ಹಿಂದುಳಿದ

ಜಾತಿಯವರು, ಹರಿಜನ ಗಿರಿಜನರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಅಲ್ಪ ಸಂಖ್ಯಾತರು ಉಪಯೋಗಿಸತಕ್ಕ ಸ್ಮಶಾಣ ಏನಿದೆ......

ಶ್ರೀ ಸಿ. ಬೈರೇಗೌಡ : ಸತ್ತಮೇಲೆ ಎಲ್ಲರೂ ಒಂದೆ.

ಶ್ರೀ. ಪಿ.ಜಿ.ಆರ್. ಸಿಂಧ್ಯಾ : ನೀವು ಹೇಳಿ ಅದನ್ನು. ಆದರೆ ನಾನು ಹೇಳುತ್ತಾ ಇರತಕ್ಕದ್ದು ಸತ್ತಮೇಲೂ ನಾವೆಲ್ಲಾ ಒಂದೇ, ಹುಟ್ಟುವುದಕ್ಕೆ ಮುಂಚೆಯೂ ನಾವೆಲ್ಲಾ ಒಂದೇ. ಆದರೆ ಹುಟ್ಟಿದಮೇಲೆ ಅಧಿಕಾರ ಹಂಚಿಕೊಳ್ಳಬೇಕಾದರೆ ನಾವು ಬೇರೆ ನೀವು ಬೇರೆ ಆಗುತ್ತೇವೆ ನೋಡಿ, ಅದಕ್ಕೆ ನಾನು ಹೇಳುತ್ತಾ ಇದ್ದೇನೆ. ಈ ವರ್ಗದವರಿಗೆ ಸ್ಮಶಾನ ಸಿಗುತ್ತಿಲ್ಲ, ಅದು ಬೇರೆ ವಿಚಾರ. ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ಮಂಡಲ ಪಂಚಾಯಿತಿ ಜಿಲ್ಲಾ ಪರಿಷತ್ತುಗಳು ಬಂದಮೇಲೆ ಅನೇಕ ಗುಂಡುತೋಪುಗಳಲ್ಲಿ ಸಸಿಗಳನ್ನು ಹಾಕಿ ಮರಗಳನ್ನು ಬೆಳೆಸಿ ಕೆಲವು ಕಡೆ ಒಳ್ಳೆಯ ಕೆಲಸ ಮಾಡಿದ್ದಾರೆ. ಕೆಲವು ಪ್ರಧಾನರು ಕೆಲವು ಜಿಲ್ಲಾ ಪರಿಷತ್ತುಗಳು ಉತ್ತಮವಾದ ಕೆಲಸ ಮಾಡಿವೆ. ಆದ್ದರಿಂದ ಅದನ್ನು ದಯವಿಟ್ಟು ರೆಗ್ಯುಲರೈಸ್ ಮಾಡುವುದಕ್ಕೆ ಹೋಗಬೇಡಿ. ಇವತ್ತು ಬಿಲ್ ಪಾಸ್ ಮಾಡಿಕೊಡುತ್ತೇವೆ. ಏಕೆಂದರೆ ಮೂರು ಲಕ್ಷ ಕುಟುಂಬಗಳಿಗೆ ಉಪಯೋಗವಾಗುತ್ತದೆ. ಅವರು ಉದ್ಧಾರ ಆಗುತ್ತಾರೆ. ಆದ್ದರಿಂದ ನಾವು ಬಿಲ್ ಪಾಸ್ ಮಾಡಿಕೊಡುತ್ತೇವೆ. ಆದರೆ ತಾವು ರೂಲ್ಸ್ ಫ್ರೇಂ ಮಾಡುವಾಗ ಇದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಸರ್ಕಾರಿ ಭೂಮಿ ಎಂದರೆ ಕೇವಲ ಕಂದಾಯ ಇಲಾಖೆಗೆ ಸೇರಿರತಕ್ಕದ್ದೇ? ಈಗ ಕೃಷಿ ಇಲಾಖೆಯದು ಇದೆ. ಪಶುಸಂಗೋಪನಾ ಇಲಾಖೆಯದು ಇದೆ. ತೋಟಗಾರಿಕೆ ಇಲಾಖೆಯದು ಇದೆ. ಅಬ್ಕಾರಿ ಇಲಾಖೆಯದು ಇದೆ. ನೀರಾವರಿ ಇಲಾಖೆಯದು ಇದೆ. ಸರ್ಕಾರ ಭೂಮಿ ಎಂದರೆ ಕೇವಲ ಕಂದಾಯ ಇಲಾಖೆಗೆ ಸೇರಿರತಕ್ಕದ್ದೆ? ಅಥವಾ ಅರಣ್ಯ ಇಲಾಖೆ, ಕೃಷಿ ಇಲಾಖೆ, ಪಶುಸಂಗೋಪನಾ ಇಲಾಖೆ, ತೋಟಗಾರಿಕೆ ಇಲಾಖೆ, ಅಬ್ಕಾರಿ ಇಲಾಖೆ, ನೀರಾವರಿ ಇಲಾಖೆ, ಶಿಕ್ಷಣ ಇಲಾಖೆ ಈ ಇಲಾಖೆಗಳಿಗೆ ಸೇರಿರತಕ್ಕ ಜಮೀನು ಏನು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅದರ ಗತಿ ಏನು ಎಂಬುದನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ದಯಮಾಡಿ ತಿಳಿಸಬೇಕು. ಈ ಇಲಾಖೆಗಳಿಗೆ ಸೇರಿರತಕ್ಕ ಜಮೀನಿನ ವಿಚಾರ ಏನು ಎಂಬುದನ್ನು ತಿಳಿಸಬೇಕು. ಉದಾಹರಣೆಗೆ ಅರಣ್ಯ ಇಲಾಖೆ. ಮಾನ್ಯ ಯಡಿಯೂರಪ್ಪನವರು ಹೇಳಿದರು. ಮಧ್ಯಪ್ರದೇಶ ಸರ್ಕಾರದವರು ಡೆಲ್ಲಿಯಲ್ಲಿ ಕುಳಿತುಕೊಂಡು ಅದನ್ನೆಲ್ಲಾ ರೆಗ್ಯುಲರೈಸ್ ಮಾಡುವುದಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂತ ಪರ್ಮಿಷನ್ ತೆಗೆದುಕೊಂಡು ಬಂದಿದ್ದಾರೆ, ಕೆಲಸ ಮಾಡಿದ್ದಾರೆ ಎಂದು. ಈಗ ನಾನು ಅಂದುಕೊಂಡಿರುವುದು ಅರಣ್ಯ ಇಲಾಖೆ ಎಂದರೆ ರಿಸರ್ವ್ ಫಾರೆಸ್ಟ್‌ನಲ್ಲಿ ಕೆಲಸ ಮಾಡುವ ಅಗತ್ಯ ಇಲ್ಲ. ಅರಣ್ಯ ಇಲಾಖೆಗೆ ಸೇರಿದ್ದು ಅರಣ್ಯ ಬೆಳೆಸುವುದಕ್ಕೆ ಆಗದೇ ಇರತಕ್ಕದ್ದು, 20-30ವರ್ಷಗಳಿಂದ ಕೇವಲ ರೆಕಾರ್ಡ್‌ಪರ್ಪಸ್‌ಗೆ ಇರುವಂಥ ಅರಣ್ಯ ಜಮೀನುಗಳಿವೆ. ಅಲ್ಲಿ ಬಂಡೆಗಳು ಕೂಡ ಇತ್ತು. ಅದು ಇಂದು ಲೂಟಿಯಾಗುತ್ತಿದೆ. ಇಂಥ ಜಮೀನನ್ನು ಕೊನೇಪಕ್ಷ ಸಾಗುವಳಿ ಮಾಡುವುದಕ್ಕೆ ಖಾಯಂ ಮಾಡತಕ್ಕ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ಫೈನ್ ಹಾಕುವುದರ ಬಗ್ಗೆ ತಾವು ಹೇಳಿದ್ದೀರೆ. ಮುಂದೆ ಈ ಬಗ್ಗೆ ರೂಲ್ಸ್ ಫ್ರೇಂ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಇದರಿಂದ ಮುಂದೆ ಎಲ್ಲ ಸಣ್ಣ ಹಿಡುವಳಿದಾರರಿಗೆ,

ಹಿಂದುಳಿದವರಿಗೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಅನುಕೂಲವಾಗುವಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಶಾಸಕರನ್ನು ಇದರ ಅಧ್ಯಕ್ಷರನ್ನಾಗಿ ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ. ನಾನೂ ಒಬ್ಬ ಶಾಸಕನೆ. ನನಗೂ ಅಧಿಕಾರ ಹೆಚ್ಚಿಗೆ ಬೇಕು ಎಂಬ ಮಾತಿದೆ. ನಾವು ಎಲೆಕ್ಟೆಡ್ ರೆಪ್ರಸೆಂಟೆಟೀವ್ಸ್. ಎಲ್ಲಾ ಕಡೆಯಿಂದ ನಮ್ಮ ಖುರ್ಚಿ ಭದ್ರ ಮಾಡಿಕೊಳ್ಳುವುದಕ್ಕೆ ಎಲ್ಲಾ ತರಹದ ಪ್ರಯತ್ನವನ್ನು ಮಾಡುತ್ತೇವೆ. ನಾವು ಒತ್ತಡಗಳಿಗೆ ಒಳಗಾಗಬೇಕಾಗುತ್ತದೆ. ನಾವು ಸದಸ್ಯರಾಗಿ ಇರೋಣ. ನಮ್ಮ ಅಭಿಪ್ರಾಯ ಕೊಡೋಣ. ಆದರೆ ನನಗನ್ನಿಸುತ್ತದೆ, ರೆಗ್ಯುಲರೈಸ್ ಮಾಡುವ ವಿಚಾರದಲ್ಲಿ ಅಸಿಸ್ಟೆಂಟ್ ಕಮಿಷನರ್‌ನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಅವರೂ ಇನ್‌ಫ್ಲುಯೆನ್ಸ್‌ಗೆ ಒಳಗಾಗುವುದಿಲ್ಲ ಎಂದು ಹೇಳುವುದಿಲ್ಲ. ಅವರೂ ಒಳಗಾಗಬಹುದು. ಆದರೆ ಶಾಸಕರನ್ನು ಅಧ್ಯಕ್ಷರಾಗಿ ಮಾಡದೇ ಹೋದರೆ ಅವರಿಗೆ ಬಹಳ ಅನುಕೂಲವಾಗುತ್ತದೆ. ಅನೇಕ ಜನ ಶಾಸಕರು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಇದ್ದು ಒಳ್ಳೆಯ ಕೆಲಸ ಮಾಡುವುದಕ್ಕೆ ಹೋಗಿ ಕೆಟ್ಟ ಹೆಸರನ್ನು ಸಂಪಾದನೆ ಮಾಡಿಕೊಂಡಿದ್ದಾರೆ. ಆದ್ದರಿಂದ ಇದೊಂದು ವಿಚಾರದಲ್ಲಿ ತಾವು ದಯವಿಟ್ಟು ಮರುಪರಿಶೀಲನೆ ಮಾಡಬೇಕು. ಎಲ್ಲಾ ಕಮಿಟಿಗಳಲ್ಲಿ ಒಬ್ಬ ಪರಿಶಿಷ್ಟ ಜಾತಿಯವರು, ಒಬ್ಬ ಪರಿಶಿಷ್ಟ ವರ್ಗದವರು ಮತ್ತು ಒಬ್ಬ ಹಿಂದುಳಿದ ವರ್ಗದವರು ಸದಸ್ಯರಾಗಿರಲೇಬೇಕೆಂದು ಒತ್ತಾಯ ಮಾಡುತ್ತೇನೆ. ಅಸಿಸ್ಟೆಂಟ್ ಕಮಿಷನರ್ ಅವರು ಆ ಕಮಿಟಿಯ ಅಧ್ಯಕ್ಷರಾಗಿದ್ದರೆ ಸರಿಯಾಗಿರುತ್ತದೆ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದನ್ನು ಸ್ವಾಗತ ಮಾಡುವ ಸಂದರ್ಭದಲ್ಲಿ ಅವರು ಏನೇನು ದಾಖಲಾತಿಗಳನ್ನು ಅವರು ಕೊಡಬೇಕು ಎಂಬ ಬಗ್ಗೆ ತಾವು ಹೇಳಿಲ್ಲ. ಈಗ ಇದನ್ನು ಪ್ರಿಸ್ಕ್ರೈಬ್ ಮಾಡಬೇಕೆಂದು ರೂಲ್ಸ್‌ಮಾಡವಾಗ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಸ್ಥಳೀಯ ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇದೆಯೇ? ಅಥವಾ ಸರ್ಕಾರೀ ದಾಖಲೆಗಳು ಏನೇನು ಸಿಗುತ್ತದೆ? ಅಥವಾ ಸಾಗುವಳಿದಾರರ ಮಕ್ಕಳು ಶಾಲೆಗೆ ಹೋಗುತ್ತಾರೆಯೇ ಎಂಬುದನ್ನು ನೋಡಬೇಕು. ಏಕೆಂದರೆ, ಬಗರ್ ಹುಕುಂ ಸಕ್ರಮ ಮಾಡುತ್ತೇವೆಂದ ತಕ್ಷಣ ತೋಳ್ಬಲ ಉಳ್ಳವರು, ದೊಣ್ಣೆ ಹಿಡಕೊಂಡಿರುವವು ನಾವು ಸಾಗು ಮಾಡುತ್ತಿದ್ದೇವೆಂದು ಹೇಳಿ ಯಾರನ್ನೋ ಹಿಡಿದು ರೆಕಾರ್ಡ್ಸ್ ಕ್ರಿಯೇಟ್ ಮಾಡುವುದು ಬಹಳ ಸುಲಭ, ಇದರ ಬಗ್ಗೆ ಬಹಳ ಎಚ್ಚರಿಕೆ ಬೇಕಾಗುತ್ತದೆ. ಸ್ಥಳೀಯವಾಗಿ ಪರಿಶೀಲನೆ ಮಾಡಬೇಕು. ಇದರಲ್ಲಿ ಸ್ವಲ್ಪ ನಿಧಾನವಾದರೂ ಚಿಂತೆ ಇಲ್ಲ. ತಾವು ಕಟಾಫ್ ಡೇಟ್ ಕೊಟ್ಟಿದ್ದೀರಿ, 6 ತಿಂಗಳಲ್ಲ 1 ವರ್ಷ ಆಗಲಿ, ಹತ್ತಾರು ವರ್ಷಗಳಿಂದ ಆಗದೇ ಇರುವ ಒಳ್ಳೆಯ ಕೆಲಸವನ್ನು ಮಾಡುತ್ತಾ ಇರುವಾಗ ಇನ್ನು 8-10 ತಿಂಗಳು ತಡವಾದರೆ ಏನೂ ಆಗುವುದಿಲ್ಲ. ಸ್ಥಳೀಯರ ಬಗ್ಗೆ ಪರಿಶೀಲನೆಗೆ ಸಮಿತಿ ಮಾಡದೇ ತೀರ್ಮಾನ ಆಗಬಾರದು, ಈ ಬಗ್ಗೆ ಒಂದು ರೂಲ್ಸ್ ಫ್ರೇಮ್ ಮಾಡಬೇಕೆಂದು ಹೇಳಿ, ಒಟ್ಟಿನಲ್ಲಿ ಈ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತ ಮಾಡಿ, ಇದು ಒಂದು ಕ್ರಾಂತಿಕಾರಕವಾದ ಬಹಳ ದೊಡ್ಡ ಒಂದು ಕೆಲಸ ಎಂದು ನಾನು ಇಲ್ಲಿ ಒಪ್ಪಿಕೊಳ್ಳದೇ ಹೋದರೂ, ಬಡವರಿಗೆ ಉಪಯೋಗ ಆಗುವ ಒಂದೇ ಒಂದು ಕೆಲಸವನ್ನು ಈ ಸರ್ಕಾರ ಮಾಡಿದೆ, ಇದಕ್ಕೆ ಸ್ವಾಗತ ಮಾಡಿ, ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ. ಸಿದ್ಧಯ್ಯ (ಸಂತೇಮಾರನಹಳ್ಳಿ) : ಮಾನ್ಯ ಅಧ್ಯಕ್ಷಿಣಿಯವರೇ, ಇವತ್ತಿನ ದಿವಸ, ಈ ಸದನದ ಮುಂದೆ ಇರುವ ಈ ಬಿಲ್ಲನ್ನು ನಾನು ಸ್ವಾಗತ ಮಾಡಲೇಬೇಕಾಗಿದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದರ ಹಿಂದೆ

ಇರತಕ್ಕ ಹಿಂದುಳಿದ ವರ್ಗದವರಿಗೆ ಅದರಲ್ಲೂ ಹರಿಜಹ ಗಿರಿಜನರಿಗೆ ಅವರ ಸ್ಥಾನಮಾನಗಳನ್ನು ಹೆಚ್ಚಿಗೆ ಮಾಡತಕ್ಕದ್ದು ನಮಗೆ ಬೇಕಾಗಿದೆ. ಇವರಿಗೆ ಒಂದು ಸ್ಥಾನಮಾನ ಸಮಾಜದಲ್ಲಿ ಇರತಕ್ಕದ್ದು ಬಹಳ ಕಡಿಮೆ ಇದೆ. ಇವರು ಲ್ಯಾಂಡ್‌ಲೆಸ್ ಪೀಪಲ್ ಆಗಿದ್ದು, ಯಾವುದೇ ಬಿಸಿನೆಸ್ ಸಹಾ ಇವರಿಗೆ ಇಲ್ಲ. ಇವರಿಗೆ ಸ್ವಯಂ ಉದ್ಯೋಗವಾಗಲೂ, ನೌಕರಿಯಾಗಲೀ ಬಹಳ ಕಡಿಮೆ ಇದೆ. ಈ ಜನರ ಸ್ಟೇಟಸ್ ಜಾಸ್ತಿಯಾಗಬೇಕಾದರೆ, ಇವರು ಭೂಮಾಲೀಕರಾಗುವುದರಿಂದ ಇವರ ಸ್ಟೇಟಸ್ ಹೆಚ್ಚು ಮಾಡುವುದಕ್ಕೆ ಮಾರ್ಗವಾಗುತ್ತದೆ. ಇವತ್ತಿನ ದಿವಸ ಇವರಲ್ಲಿ ನೂರಕ್ಕೆ 90 ಜನ ಭೂಹೀನರಾಗಿದ್ದರೆ, ಇವತ್ತಿನ ದಿವಸ ರೈತರಿಗೆ ಇವರು ಒಂದು ರೀತಿಯ ಚಿರಸೊತ್ತು ಇದ್ದಹಾಗೆ. ಈ ರೈತರು ಹಾಗೂ ಇತರ ಜನರು ತಮ್ಮ ಪ್ರತಿದಿನದ ಜೀವನಕ್ಕೆ ಈ ಜನರನ್ನೇ ಅವಲಂಬಿಸಿರಬೇಕಾಗಿದೆ. ಅದು ಬಿಟ್ಟರೆ ಬೇರೆ ಗತಿಯಿಲ್ಲ. ಆದುದರಿಂದ ಇವತ್ತು ಭೂಮಾಲೀಕತ್ವವನ್ನು ಅವರಿಗೆ ಕೊಡಬೇಕಿದ್ದರೆ ಭೂಮಿ ಇದ್ದರೇ ತಾನೇ? ಭೂಮಿ ಇಲ್ಲದೇ ಇರುವುದರಿಂದ ಕೊಡುವುದಕ್ಕಾಗುವುದಿಲ್ಲ ಅಥವಾ ಇರತಕ್ಕವರನ್ನು ಸುಲಭವಾಗಿ ಓಡಿಸಿ ಅವರಿಗೆ ಈ ಜಮೀನನ್ನು ಕೊಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಎನ್‌ಕ್ರೋಚ್‌ಮೆಂಟ್ ಏನೋ ಆಗಿದೆ. ಅದನ್ನು ತಪ್ಪಿಸಿ ಈ ಜನರಿಗೆ ಕೊಡಬೇಕೆಂದರೆ ಅಷ್ಟು ಸುಲಭ ಸಾಧ್ಯ ವಿಚಾರವಲ್ಲ. ಆದುದರಿಂದ ಈ ಬಿಲ್ಲನ್ನು ನಾನು ಸ್ವಾಗತ ಮಾಡಲೇಬೇಕಾಗಿದೆ. ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಈ ಜನರಿಗೆ ಕೊಡುವ ಭೂಮಿಯಲ್ಲಿ ಅವರ ಸ್ಥಿತಿಗತಿಯನ್ನು ಉತ್ತಮ ಮಾಡಬೇಕೆನ್ನುವ ದೃಷ್ಟಿಯಿಂದ ಈ ಕಾನೂನಿನಲ್ಲಿ ಸಹಾ ಭೂಮಿಯಲ್ಲಿ ಅರ್ಧ ಭಾಗವನ್ನು ಎಂದರೆ ಒಟ್ಟು ಜಮೀನಿನಲ್ಲಿ ಅರ್ಧ ಭಾಗದ ಜಮೀನನ್ನು ಕೊಡಬೇಕೆಂದು ರೂಲ್ಸ್‌ನಲ್ಲಿ ಇದೆ. ಇವತ್ತಿನ ದಿವಸ ಅದನ್ನು ನಾವು ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ಹೇಳಿದ ಹಾಗೆ ಬಹುಶಃ ಈ ಜನರಿಗೆ ಕೊಡಬೇಕಾದಾಗ ಲ್ಯಾಂಡ್ ಗ್ರಾಂಟ್ ರೆಗ್ಯುಲರೈಸ್ ಮಾಡುವಾಗ ಎಕ್ಸಸ್ 7 ಲಕ್ಷಕ್ಕಿಂತಲೂ ಹೆಚ್ಚು ಇದೆ. ರೂಲ್ಸ್ ಪ್ರಕಾರ ಅವರಿಗೆ ಬರಬೇಕಾಗಿರುವುದು ಸುಮಾರು ಮೂರೂವರೆ ಲಕ್ಷವೇ ಬರಬೇಕಾಗುತ್ತದೆ. ಆದರೆ ಇಷ್ಟು ಜಮೀನು ಅವರಿಗೆ ಬರುವುದಿಲ್ಲ. ಬಹುಶಃ 1 ಲಕ್ಷ ಸ್ವಲ್ಪ ಭಾಗ ಜಾಸ್ತಿ ಮಾತ್ರ ಬರುತ್ತದೆ. ಆದುದರಿಂದ ಇದು ಕಾನೂನಿನಲ್ಲಿ ಇದ್ದರೂ ಕೂಡಾ ಇವರಿಗೆ ದಕ್ಕೋ ಮಟ್ಟಿಗೆ ಇಲ್ಲ. ಇನ್ನು ಉಳಿದಿರತಕ್ಕದ್ದು ಏನೆಂದರೆ, ಅನಿವಾರ್ಯವಾಗಿ ಇವರು ಕೂಲಿ ಗುಲಾಮರಾಗಿ ಉಳಿಯತಕ್ಕ ಸ್ಥಿತಿ ಇದ್ದೇ ಇರುತ್ತದೆ.

ಬಹುಶಃ ಅಷ್ಟು ಸುಲಭವಾಗಿ ಅವರ ಸ್ಟೇಟಸ್ ಅನ್ನು ಹೆಚ್ಚಿಸತಕ್ಕಂತಹ ಸಾಧ್ಯತೆ ಬಹಳ ಕಡಿಮೆ ಇದೆ. ಆದ್ದರಿಂದ ಇವರು ಇವತ್ತೂ ಕೂಲಿ ಗುಲಾಮರೇ ಎಂದು ಹೇಳಬೇಕಾಗುತ್ತದೆ. ಏಕೆಂದರೆ ನೌಕರಿಯಲ್ಲೂ ಸಹ ಇವತ್ತಿನ ಕಾನೂನು ಪ್ರಕಾರ ಇರತಕ್ಕಂತಹ ಇವರಿಗೆ ದೊರೆಯಬೇಕಾದಂತಹ ಒಂದು ಸೌಲಭ್ಯಗಳು ಹಾಗೂ ಅವರಿಗೆ ಎಷ್ಟು ದಾಮಾಕ್ಷಾಗಳು ಸಿಗಬೇಕಾಗಿತ್ತು. ಅದು ಸಹ ಸಿಗುವುದಿಲ್ಲ. ಸರಕಾರಿ ನೌಕರಿಯಲ್ಲೂ ಕೂಡ ಎನ್‌ಕ್ರೋಚ್‌ಮೆಂಟ್ ವಿಪರೀತವಾಗಿ ಹೋಗಿದೆ. ನಂತರ ಇವು ರೆಗ್ಯುಲರೈಸ್ ಆಗಿವೆ. ಈ ರೆಗ್ಯುಲರೈಸ್ ಮಾಡತಕ್ಕಂಥಾದ್ದು ಏನು ಇದೆ, ಇದು ಮೊಟ್ಟ ಮೊದಲನೇ ಬಾರಿ ಏನೂ ಅಲ್ಲ. ಹಿಂದೆ ಇಂಥಾದ್ದು 2-3 ಸಾರಿ ಇದು ಆಗಿದೆ. ಆ ಕಾಲದಲ್ಲೂ ಸಹ ಈ ರೆಗ್ಯುಲರೈಸ್ ಬಗ್ಗೆ ಯಾವುದೋ ಒಂದು ರೂಲ್ಸ್ ಇತ್ತಲ್ಲ ಅದರ ಪ್ರಕಾರ ಅವತ್ತೂ ಅವರಿಗೆ ದೊರೆತಿಲ್ಲ. ಆದ್ದರಿಂದ ಇವರಿಗೆ ಕಾನೂನಿನ ರೀತಿಯಲ್ಲಿ ಎಷ್ಟು ಪ್ರಾತಿನಿಧ್ಯ

ಸಿಗಬೇಕಾಗಿತ್ತೋ ಅಷ್ಟು ಪ್ರಾತಿನಿಧ್ಯ ಪ್ರತಿಸಲವೂ ರೆಗ್ಯುಲರೈಸ್ ಆಗತಕ್ಕಂತಹ ಕಾಲದಲ್ಲಿ ಇವರಿಗೆ ಸಿಕ್ಕಿಲ್ಲ. ಆದ್ದರಿಂದಾಗಿ ಇವರಿಗೆ ಯಾವ ರೀತಿಯಾಗಿಯೂ ಜಮೀನಿನ ಹಿಡುವಳಿಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ಒಂದನ್ನು ಮಾಡಬಹುದು, ಒಂದು ಮಾರ್ಗ ಇದೆ, ಅದನ್ನು ನಾನು ಸೂಚನೆ ಮಾಡುತ್ತೇನೆ. ಲ್ಯಾಂಡ್ ರಿಫಾರ್ಮ್ಸ್ ಪ್ರಕಾರ ಅಲ್ಲಿ ಬರತಕ್ಕಂತಹ ಎಕ್ಸಸ್ ಲ್ಯಾಂಡ್ ಏನು ಇದೆ ಅದರಲ್ಲಿ ಅರ್ಧಭಾಗ ಕೊಡಬಹುದು ಎಷ್ಟು ಎಕ್ಸಸ್ ಲ್ಯಾಂಡ್ ಬರುತ್ತದೆನ್ನುವುದನ್ನು ನೋಡಿ ಅದರಲ್ಲಿ ಇವರಿಗೆ ಎಷ್ಟು ಡಿಫಿಷಿಯನ್ಸಿ ಕಡಿಮೆ ಬರುತ್ತದೆ, ಅಷ್ಟನ್ನು ಕೊಡಬಹುದು. ಈ ರೀತಿ ಮಾಡಿದರೆ ನಮ್ಮ ದೇಶದ ಭೂ ಕೂಲಿ ಗುಲಾಮರು ಯಾರಿದ್ದಾರೆ ಈ ಗುಲಾಮ ಗಿರಿಯಿಂದ ಸ್ವಲ್ಪವಾದರೂ ಮೇಲಕ್ಕೆ ಎತ್ತತಕ್ಕಂತಹ ಸಾಧ್ಯತೆಯಾಗುತ್ತದೆ ಎಂದು ಸಲಹೆ ಮಾಡುತ್ತೇನೆ. ಇದರ ಜೊತೆಗೆ ಅನೇಕ ಸದಸ್ಯರುಗಳು ಹೇಳಿದ ರೀತಿಯಲ್ಲಿ ರೈತರ ಕೂಗು ಬಹಳ ಇದೆ. ಅದಕ್ಕೆ ಸರಕಾರ ಕೂಡ ಸ್ಪಂದಿಸಬೇಕು. ಅವರ ಅನೇಕ ತೊಂದರೆಗಳನ್ನು ಒತ್ತಾಯ ಪೂರ್ವಕವಾಗಿ ಹೇಳಿದ್ದಾರೆ ಅದು ನಿಜವೂ ಇರಬಹುದು. ಆದರೆ ತಾವು ಹೇಳಿದ ರೀತಿಯಲ್ಲಿ ಇವತ್ತು ಎಷ್ಟು ಜನ ಮಾರ್ಜಿನಲ್ ರೈತರು ಇದ್ದಾರೆ ಸಣ್ಣ ಹಿಡುವಳಿದಾರರು ಇದ್ದಾರೆಂಬುದನ್ನು ವಿಚಾರ ಮಾಡಬೇಕು. ದೊಡ್ಡ ರೈತರು ಅಂದರೆ 54ಎಕರೆ ಅಥವಾ ಇನ್ನೂ ಹೆಚ್ಚು ಎಕರೆ ಇಟ್ಟುಕೊಂಡಿರತಕ್ಕಂತಹವರು ಇರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರ ಬಗ್ಗೆ 2-3 ಸಲ ಚರ್ಚೆಯಾಗಿದೆ. ಇನ್ನೂ 2-3 ಬಿಲ್ ಇದೆ. ಸರ್‌ಪ್ಲಸ್ ಲ್ಯಾಂಡ್ ಎಲ್ಲಿ ಸಿಗುತ್ತದೆ ಅದನ್ನು ಹೆಚ್ಚಿನ ರೀತಿಯಲ್ಲಿ ಎಸ್.ಸಿ., ಎಸ್.ಟಿ. ಯವರಿಗೆ ಕಾಂಪನ್‌ಸೇಟ್ ಮಾಡಬೇಕೆಂದು ಹೇಳಿದ್ದೇವೆ ಪುನಃ ರೂಲ್ಸ್‌ನಲ್ಲಿ ಈ ಬಗ್ಗೆ ಅಮೆಂಡ್‌ಮೆಂಟ್ ಮಾಡಿಕೊಳ್ಳಬಹುದು.

ಶ್ರೀ ಕೆ. ಸಿದ್ಧಯ್ಯ : ಹಿಂದೆ ಮಾಜಿ ಮುಖ್ಯಮಂತ್ರಿಗಳು ಮಾತನಾಡುವಾಗ ದೊಡ್ಡ ರೈತರ ಸಂಖ್ಯೆ ಎಷ್ಟು ಇದೆ ಎಂದು ಹೇಳಿದ್ದಾರೆ, ಅವರ ಸಂಖ್ಯೆ ಬಹಳ ಕಡಿಮೆ. ಆದರೆ ಅವರ ಪ್ರಭಾವ ಈ ಭೂಹೀನರ ಮೇಲೆ ಬಹಳ ಇದೆ. ಅವರನ್ನು ಯಾವ ರೀತಿ ನೋಡುತ್ತಾರೆ ಎಂದರೆ ಅವರು ಇವರಿಗೆ ಒಂದು ರೀತಿಯ ಚಿರ ಸೊತ್ತು ಇದ್ದ ಹಾಗೆ ಅಂದರೆ ಎರಡು ಕಾಲಿನ ಎತ್ತು ಇದ್ದ ಹಾಗೆ ಆ ಸ್ಥಿತಿಯಲ್ಲಿ ಇವರನ್ನು ಇಟ್ಟುಕೊಂಡಿದ್ದಾರೆ. ಎರಡು ಕಾಲಿನ ಎತ್ತು ಇದ್ದಹಾಗೆ ಅವರಿಗೆ. ಆದುದರಿಂದ ದಯಮಾಡಿ ದೊರಕತಕ್ಕಂತಹ ಎಕ್ಸಸ್ ಲ್ಯಾಂಡ್ ಅನ್ನು ಇವರಿಗೆ ಕೊಡಬೇಕು. ಇದರಿಂದ ಲ್ಯಾಂಡ್‌ರಿಫಾರ್ಮ್ಸ್‌ನಲ್ಲಿ ಯಾವ ಡಿಫಿಷಿಯನ್ಸಿಯೂ ಇಲ್ಲ ಇದನ್ನು ಮೇಕಪ್ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಲ್ಯಾಂಡ್ ಸೀಲಿಂಗ್ ಅನ್ನು ಇನ್ನು ಸ್ವಲ್ಪ ಕಡಿಮೆ ಮಾಡಬಹುದು.

ಉಪಾಧ್ಯಕ್ಷರು : ಈಗ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇನ್ನೂ 2-3 ಬಿಲ್ಸ್; ಇದೆ ಸಂಕ್ಷಿಪ್ತವಾಗಿ ಮುಗಿಸಿ.

ಶ್ರೀ ಕೆ. ಸಿದ್ಧಯ್ಯ : ಈ ಸೀಲಿಂಗ್ ಅನ್ನು ಕಡಿಮೆ ಮಾಡಿದರೆ ಒಳ್ಳೆಯದು, ಆದ್ದರಿಂದ ಹೆಚ್ಚಿಗೆ ಬರತಕ್ಕಂತಹ ಜಮೀನಿನಲ್ಲಿ ಏಕೆ ಇದನ್ನು ಮಾಡಬಾರದು. ಸರಕಾರ ಇದನ್ನು ಪರಿಶೀಲನೆ ಮಾಡಬೇಕು ಮಾಡಲೇಬೇಕೆಂದೇನೂ ಇಲ್ಲ ; ಮಾಡಿದರೆ ಒಳ್ಳೆಯದೆಂದು ನಾನು ಹೇಳುತ್ತಿದ್ದೇನೆ. ಇಂದಹ ದೊಡ್ಡ ರೈತರ ಸಂಖ್ಯೆ ಬಹಳ ಕಡಿಮೆ. ಮಾರ್ಜಿನಲ್, ಸಣ್ಣ ಹಿಡುವಳಿದಾರರ ಸಂಖ್ಯೆ

ಬಹಳ ಹೆಚ್ಚಾಗಿದೆ. 25 ಎಕರೆಗಿಂದ ಹೆಚ್ಚು ಇರತಕ್ಕಂತಹ ರೈತರು ಎಷ್ಟು ಜನ ಸಿಗುತ್ತಾರೆ ಅದನ್ನು 10-15-20ಎಕರೆಗೆ ಇಳಿಸಲಿಕ್ಕೆ ಏಕೆ ಕ್ರಮ ತೆಗೆದುಕೊಳ್ಳಬಾರದು. ಹೀಗೆ ಮಾಡಿದರೆ ಸಣ್ಣ ಕುಟುಂಬಗಳಿಗೆ ಅನುಕೂಲವಾಗುತ್ತದೆ. 4-5 ಎಕರೆ ಇಟ್ಟುಕೊಂಡಿರತಕ್ಕಂತಹವರು ಜೀವನ ಮಾಡುತ್ತಿಲ್ಲವೇ ಹಾಗೇ 50-100 ಎಕರೆ ಇಟ್ಟುಕೊಂಡಿರತಕ್ಕಂತಹವರು ಅದನ್ನು ಕಡಿಮೆ ಮಾಡಿಕೊಂಡು ಜೀವನ ಮಾಡುವುದಕ್ಕಾಗುವುದಿಲ್ಲವೇ ಅದನ್ನು 5-10 ಎಕರೆಗೆ ಇಳಿಸುವುದಕ್ಕಾಗುವುದಿಲ್ಲವೇ, ಇದನ್ನು ತಾವು ಯೋಚನೆ ಮಾಡಿ. ಇದರ ಜೊತೆಗೆ ಈಗ ಸದ್ಯದಲ್ಲಿರತಕ್ಕಂತಹ ಜಮೀನನ್ನು ಹಿಂದುಳಿದವರಿಗೆ ಎಸ್.ಸಿ., ಎಸ್.ಟಿ.ಯವರಿಗೆ ಕೊಡಬೇಕೆಂದು ಏನು ಇದ್ದೀರಿ ಕೊನೆ ಪಕ್ಷ ಅವರಿಗೆ ಫ್ರೀಯಾಗಿಯಾದರೂ ಕೊಟ್ಟರೆ ಅನುಕೂಲವಾಗುತ್ತದೆ. ಇದರಲ್ಲಿ ತಮ್ಮ ಸರಕಾರದ ಮತ್ತು ಈ ಸದನದಲ್ಲಿರತಕ್ಕಂತಹ ಮಾನ್ಯ ಸದಸ್ಯರುಗಳ ಒಂದು ಮ್ಯಗ್ನ್ಯಾನಿಮಿಟಿ ಇದರಿಂದ ವ್ಯಕ್ತವಾಗುತ್ತದೆಂದು ಹೇಳುತ್ತಾ ತಮ್ಮನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ) : ಮಾನ್ಯ ಉಪಾಧ್ಯಕ್ಷಣೀಯವರೆ, ನಾನು ದೀರ್ಘವಾಗಿ ಮಾತನಾಡುವುದಿಲ್ಲ. ಇದು ಕಳೆದ ಏಳೆಂಟು ವರ್ಷಗಳಿಂದ ಅಕ್ರಮ ಸಾಗುವಳಿ ಭೂಮಿ ಏನಿದೆ ಅದನ್ನು ಸಕ್ರಮಗೊಳಿಸುತ್ತೇವೆಂದು ಹೇಳುವುದು ಪತ್ರಿಕೆಗಳಲ್ಲಿ ಈ ಸದನದಲ್ಲಿ ಬಂದು ಆಗಿದೆ. ನಮ್ಮ ನಮ್ಮ ಕ್ಷೇತ್ರಗಳಿಗೆ ಹೋದರೆ ನಮ್ಮ ಮತದಾರರು ಅದು ಯಾವಾಗ ಬರುತ್ತದೆನ್ನುವ ಮಾತನ್ನು ಬಡವರು ಕೇಳುತ್ತಿದ್ದರು. ಆದರೆ ಅನೇಕ ಕಂದಾಯ ಮಂತ್ರಿಗಳು ಬಂದರು ; ಹೋದರು. ಅವರ ಪಾಲಿಗೆ ಈ ಸೌಭಾಗ್ಯ ಸಿಗಲಿಲ್ಲ. ಅದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಆ ಸೌಬಾಗ್ಯ ಸಿಕ್ಕಿದೆ. ಅದನ್ನು ಅವರು ಚಾಲೂ ಮಾಡಿದ್ದಾರೆ. ಇವತ್ತು ಅಕ್ರಮ ಸಾಗುವಳಿ ಭೂಮಿ ಸಕ್ರಮವಾಗುತ್ತಿದೆ. ನಿಜವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಡವರಿಗೆ ಬಹಳ ಸಂತೋಷವಾಗಿದೆ. ಅದಕ್ಕಾಗಿ ಅವರನ್ನು ಅಭಿನಂದಿಸಿ ಒಂದು ಸಲಹೆಯನ್ನು ಮಾತ್ರ ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಅದೇನೆಂದರೆ ಎಲ್ಲ ಗ್ರಾಮಗಳಲ್ಲಿಯೂ ಸ್ಮಶಾನ ಭೂಮಿಗೆ ಅದು ಮುಸಲ್ಮಾನರದು ಆಗಲಿ, ಹಿಂದೂಗಳದು ಆಗಲಿ ಕ್ರೈಸ್ತರದು ಆಗಲಿ ಕೆಲವು ಕಡೆಗಳಲ್ಲಿದೆ ಆದರೆ ಕೆಲವು ಕಡೆಗಳಲ್ಲಿ ಸ್ಮಶಾನ ಭೂಮಿಯೇ ಇಲ್ಲ. ಅದು ಎಲ್ಲರಿಗೂ ಇರುವಹಾಗೆ ಮಾಡಿ. ಎಲ್ಲ ಜನರು ದಫನ ಮಾಡಲಿಕ್ಕೆ ದಹನ ಮಾಡಲಿಕ್ಕೆ ವ್ಯವಸ್ಥೆ ಇಲ್ಲದಿದ್ದರೆ ಅಲ್ಲಿ ಆಗತಕ್ಕ ತೊಂದರೆ ಎಷ್ಟೆಂಬುದು ತಮಗೆ ಗೊತ್ತಿದೆ. ಅದನ್ನು ಮಾಡಲಿಕ್ಕೆ ಹೆಚ್ಚಿನ ಗಮನ ಕೊಡಬೇಕು. ಅದು ಆದಷ್ಟು ಶೀಘ್ರವಾಗಿ ಬರುವಂತೆ ಮಾಡಿ ; ಅದು ಬೇಗನೆ ಚಾಲೂ ಆಗುವ ಹಾಗೆ ಮಾಡಬೇಕು. ಇಷ್ಟು ಬೇಗ ಈ ಮಸೂದೆಯನ್ನು ತಂದು ದೊಡ್ಡ ಉಪಕಾರವನ್ನು ಕರ್ನಾಟಕ ರಾಜ್ಯಕ್ಕೆ ಮಾಡಿದ್ದೀರಿ ಎಂದು ನಾನು ತಮಗೆ ಸ್ವಾಗತ ಬಯಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಮಂತ್ರಿಗಳು........

ಶ್ರೀ ಬಿ.ಹೆಚ್. ಬನ್ನಿಕೊಡ್ : ಮಾನ್ಯ ಉಪಾಧ್ಯಕ್ಷಿಣೀಯವರೆ, ದಯವಿಟ್ಟು ನಾನೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವುದಾದರೂ ತಪ್ಪಿದ್ದರೆ ತಿದ್ದಿಕೊಳ್ಳುವುದಕ್ಕೆ ಬರುತ್ತದೆ ; ಇದೇನು ಶಾಶ್ವತವಲ್ಲ. ಇದು ಮೊದಲು ಆಗಲಿ;

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) : ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಹುಲ್ಲುಗಾವಲು ಪ್ರದೇಶವನ್ನು ರೆಗ್ಯುಲರೈಸ್ ಮಾಡಿ ಅವರಿಗೆ ಪಟ್ಟಾ ಕೊಟ್ಟರೆ, ಊರಿನ ಆಡು, ಕುರಿ, ದನಕರುಗಳು ಎಲ್ಲಿ ಹೋಗಬೇಕು? ಬಡವರಿಗೆ ಭೂಮಿ ಇಲ್ಲದವರಿಗೆ ಆಡು, ಕುರಿ, ಆಕಳು, ಎಮ್ಮೆಗಳನ್ನು ಸಾಕಲಿಕ್ಕೆ ಐಆರ್‌ಡಿಪಿ ಇತರೆ ಸಾಲಗಳನ್ನು ನಾವೇ ಕೊಡಿಸುತ್ತಿದ್ದೇವೆ. ಇವತ್ತು ಹೈನುಗಾರಿಕೆ ಅಭಿವೃದ್ಧಿಯಾಗಬೇಕೆಂದು ಹೇಳುತ್ತಿದ್ದೇವೆ. ಹುಲ್ಲುಗಾವಲು ಪ್ಲದೇಶವನ್ನು ಸುಗುವಳಿ ಮಾಡಿರುವವರಿಗೆ ಕೊಟ್ಟರೆ ಗ್ರಾಮದ ರೈತರಿಗೆ ಜಮೀನು ಇಲ್ಲದವರಿಗೆ ಅವರು ಜಾನುವಾರುಗಳಿಗೆ ಮೇವು ಇಲ್ಲದ ಹಾಗೆ ಆಗುತ್ತದೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ಫಾರೆಸ್ಟ್ ಲ್ಯಾಂಡನ್ನು ಪ್ಲಾಂಟೇಶನ್ ಲ್ಯಾಂಡನ್ನು ಯಾವ ರೀತಿಯಿಂದ ಸಾಗುವಳಿಗೆ ಕೊಡಬಾರದೆಂದು ಇದೆ, ಅದೇ ರೀತಿ ಹುಲ್ಲುಗಾವಲು ಪ್ರದೇಶವನ್ನು ಸಾಗುವಳಿಗೆ ಕೊಡಬಾರದೆಂದು ಮಾಡಿ. ದನಕರುಗಳ ಸಂಖ್ಯೆಗೆ ಅನುಗುಣವಾಗಿ ಹುಲ್ಲುಗಾವಲು ಪ್ರದೇಶ ಇರಬೇಕು. ಅದಕ್ಕಿಂದ ಹೆಚ್ಚಾಗಿದ್ದರೆ ಸಾಗುವಳಿಗೆ ಕೊಡಬೇಕು. ಅದೇ ರೀತಿ ಅರಣ್ಯ ಭೂಮಿಯನ್ನು ಅಕ್ರಮ ಸಾಗುವಳಿ ಮಾಡಿದ್ದರೆ ಅದನ್ನು ಕೊಡಲಿಕ್ಕೆ ಅಡ್ಡಿಯಿಲ್ಲ. ನೂರಾರು ವರ್ಷಗಳಿಂದ ಅರಣ್ಯ ಭೂಮಿಯನ್ನು ರೈತರು ಸಾಗುವಳಿ ಮಾಡುತ್ತಿದ್ದಾರೆ. ಅದು ಅರಣ್ಯ ಭೂಮಿಯೆಂದು ದಾಖಲೆಗಳಲ್ಲಿ ಇದ್ದರೂ ಕೇಂದ್ರಸರ್ಕಾರದ ಅನುಮತಿಯನ್ನು ಪಡೆದು ಅವರಿಗೆ ಕೊಡಬೇಕು. 7.5 ಲಕ್ಷ ಎಕರೆ ಭೂಮಿ ಸಿ. ಅಂಡ್ ಡಿ. ಲ್ಯಾಂಡ್ ಇದೆ. ಅದನ್ನು ರೆಗ್ಯುಲರೈಸ್ ಮಾಡಿ ರೈತರಿಗೆ ಸಾಗುವಳಿಗೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಾಧ್ಯಕ್ಷಿಣೀಯವರೆ, ಈಗ ಮಾನ್ಯಮಂತ್ರಿಗಳು ತಂದಿರತಕ್ಕ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಈಗ ಮಾತನಾಡಿದಂತಹ ಕೆಲವು ಸದಸ್ಯರುಗಳು ಹೇಳಿದರು. ಏನೆಂದರೆ, ಈವೊಂದು ವಿಧೇಯಕ ಕ್ರಾಂತಿಕಾರಕವಾಗಿಲ್ಲವೆನ್ನುವ ಅಭಿಪ್ರಾಯವನ್ನು ಕೊಟ್ಟರು. ಕೆಲವರು ಇದನ್ನು ಸ್ವಾಗತ ಮಾಡಿದರು. ನಾನು ಕಂಡುಕೊಂಡಹಾಗೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಮಾತ್ರ ಅಕ್ರಮ ಸಾಗುವಳಿ ಭೂಮಿ ಸಕ್ರಮವಾಗುತ್ತಿದೆಯೇ ಹೊರತು ಜನತಾ ಸರ್ಕಾರವಾಗಲಿ, ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದಂಥಹ ಸಂದರ್ಭದಲ್ಲಿ ಈವೊಂದು ಮಸೂದೆಯನ್ನು ತರಲಿಕ್ಕೆ ಪ್ರಾಮಾಣಿಕ ಕಾಳಜಿಯನ್ನು ಅವರು ಮಾಡಲಿಲ್ಲ. ಹಲವಾರು ಕಂದಾಯ ಮಂತ್ರಿಗಳು ಬಂದಿದ್ದಾರೆ. ತಮ್ಮ ಭಿನ್ನ ಭಿನ್ನ ರೀತಿಯ ವಿಧೇಯಕವನ್ನು ಸದನದಲ್ಲಿ ಮಂಡಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ. ಈ ವಿಧೇಯಕ ಜಾರಿಗೆ ಬಂದಮೇಲೆ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವಂತಹ ಸಂದರ್ಭದಲ್ಲಿ ಎಷ್ಟೋ ಗುರುತಿಸಲಾಗದ ಜನರು ಅಕ್ರಮ ಸಾಗುವಳಿ ಮಾಡಿಕೊಂಡಿದ್ದಾರೆ. ಅವರಲ್ಲಿ ದಾಖಲೆಗಳು ಇಲ್ಲದಿರಬಹುದು; ಅದನ್ನು ಸಕ್ರಮಗೊಳಿಸುವಾಗ ಅಂಕಿ ಸಂಖ್ಯೆಗಳಲ್ಲಿ ವ್ಯತ್ಯಾಸ ಇದ್ದಿರಬಹುದು ಅವರ ಸಾಗುವಳಿಯನ್ನು ಸಹ ಸಕ್ರಮಗೊಳಿಸಬೇಕು. ಈ ವಿಧೇಯಕವನ್ನು ತಂದು ಜಾರಿಗೆ ಕೊಡುತ್ತಿರುವ ಮಾನ್ಯ ಕಂದಾಯ ಮಂತ್ರಿಗಳನ್ನು ನಾವು ಸ್ವಾಗತಿಸಲೇಬೇಕಾಗುತ್ತದೆ. ಈಗಾಗಲೇ ಹೇಳಿದಂತೆ ಅರಣ್ಯ ಭೂಮಿಯಲ್ಲಿ

ಅಕ್ರಮ ಸಾಗುವಳಿ ಮಾಡಿರತಕ್ಕ ಭೂಮಿಯನ್ನು ಸಹ ಸಕ್ರಮಗೊಳಿಸತಕ್ಕ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

1.00 ಪಿ.ಎಂ

+ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಮಂತ್ರಿ) : ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರು ಈ ಒಂದು ಬಿಲ್ ಬಗ್ಗೆ ಬೆಳಕು ಚೆಲ್ಲಿದ್ದಾರೆ ಮತ್ತು ಸಂತೋಷವನ್ನು ಕೂಡ ವ್ಯಕ್ತಪಡಿಸಿದ್ದಾರೆ. ಬಹುಶಃ ಎಲ್ಲ ಸದಸ್ಯರು ಕೂಡ ಬಹಳ ಸಂತೋಷದಿಂದ ಇದರ ಬಗ್ಗೆ ಸ್ವಾಗತ ಮಾಡಿದ್ದಾರೆ. ಮತ್ತು ಕೆಲವು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಈಗಾಗಲೇ ನಾನು ನನ್ನ ಪ್ರಸ್ತಾವಿಕ ಭಾಷಣದಲ್ಲಿ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಿದ್ದೆ. ಏಕೆಂದರೆ ಇದು ತಿದ್ದುಪಡಿಗಳ ಮೇಲೆ ನಾವು ಕೆಲವು ತಿದ್ದುಪಡಿಯನ್ನು ತಂದಿದ್ದೇವೆ. ಈ ಬಗ್ಗೆ ಬಹಳ ಚರ್ಚೆ ಮಾಡಿ ಜನರಿಗೆ ಸಹಾಯ ಆಗತಕ್ಕಂಥ ರೀತಿಯಲ್ಲಿ ತರಬೇಕು ಎನ್ನತಕ್ಕಂಥ ದೃಷ್ಟಿಯಿಂದಲೇ ಇದನ್ನು ನಾವು ತಂದಿದ್ದು. ಇದರಿಂದ ಇವತ್ತು 3 ಲಕ್ಷ 17 ಸಾವಿರ ಜನ ಏನು ಅನಧೀಕೃತ ಸಾಗುವಳಿ ಮಾಡಿದ್ದಾರೆ. ಕೃಷಿ ಕಾರ್ಮಿಕರಾಗಲೀ, ಅಥವಾ ಮಾರ್ಜಿನಲ್ ಮತ್ತು ಸ್ಮಾಲ್ ಫಾರ್ಮರ್ಸ್ ಆಗಲಿ ಹಿಡುವಳಿದಾರರು ಮಾತ್ರವಲ್ಲದೆ ಫಾರೆಸ್ಟ್ ಲ್ಯಾಂಡನ್ನು 15 ಲಕ್ಷ ಎಕರೆಯಷ್ಟು ಜಮೀನನ್ನು ಸಿ ಅಂಡ್ ಡಿ ಕ್ಲಾಸ್ ಜಮಿನನ್ನು ರೆವಿನ್ಯೂ ಡಿಪಾರ್ಟಮೆಂಟನಿಂದ ಹ್ಯಾಂಡ್‌ಓವರ್ ಮಾಡಲಾಗಿತ್ತು, ಅದರಲ್ಲಿ ಸಹ ಸುಮಾರು 4 ಲಕ್ಷ 25 ಸಾವಿರ ಎಕರೆ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ. ಅದನ್ನು ಕೂಡ ಮೊನ್ನೆ ತಾನೆ ನಮ್ಮ ಕ್ಯಾಬಿನೇಟ್‌ನಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಆ ಜಮೀನನ್ನು ನಾವು ವಾಪಸ್ಸು ತೆಗೆದುಕೊಂಡು ಏನು ಫಾರೆಸ್ಟ್ ಡಿಪಾರ್ಟಮೆಂಟ್‌ಗೆ ಹ್ಯಾಂಡ್ ಓವರ್ ಮಾಡಿದ್ದೇವೆ. ಅದನ್ನು ತೆಗೆದುಕೊಂಡು ಎಲ್ಲಿ ಎನ್‌ಕ್ರೋಚ್‌ಮೆಂಟ್ ಇದೆ, ಅದನ್ನು ಕೂಡ ರೆಗ್ಯುಲರೈಸ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಆದ್ದರಿಂದ ಈ 7 ಲಕ್ಷ 10 ಸಾವಿರ ಎಕರೆ ಅಲ್ಲದೇನೆ ಇನ್ನೂ ನಾಲ್ಕು ಲಕ್ಷ ಎಕರೆ ಕೂಡ ರೆಗ್ಯುಲರೈಸ್ ಆಗುತ್ತದೆ. ಹೀಗೆ ಸುಮಾರು 11 ಲಕ್ಷ ಎಕರೆಗಿಂತಲೂ ಹೆಚ್ಚಿಗೆ ಜಮೀನನ್ನು ಸಕ್ರಮಗೊಳಿಸತಕ್ಕಂಥ ಒಂದು ದಿಟ್ಟ ಹೆಜ್ಜೆಯನ್ನು ಐತಿಹಾಸಿಕ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಇದಕ್ಕೆ ತಾವೆಲ್ಲರೂ ಅಭಿನಂದಿಸಿದ್ದೀರಿ. ಆದರೆ ತಾಪ ತ್ರಯ ಎಲ್ಲಿ ಬಂದಿದೆ ಎಂದರೆ, ಎರಡು ಲಕ್ಷ ಎಕರೆಯಷ್ಟು ಫಾರೆಸ್ಟ್ ಜಮೀನು ನೊಟಿಫೈ ಆಗಿದೆ, ಇದು ಅವರ ರಿಜಿಸ್ಟರ್ ಬುಕ್‌ನಲ್ಲಿ ನೋಂದಣಿಯಾಗಿದೆ. ಅಂಥಾದ್ದರಲ್ಲಿ ಮಾತ್ರ ತಾಪತ್ರಯವಾಗಿದೆ. ಇದನ್ನೂ ಕೂಡ ಕೇಂದ್ರ ಸರ್ಕಾರಕ್ಕೆ ಬರೆದು ಅವರು ಒಪ್ಪಿದರೆ, ಏಕೆಂದರೆ ಅದು ಎಷ್ಟು ಕಠಿಣ ಕಾನೂನು ಇದೆಯೆಂದು ತಮಗೆ ಗೊತ್ತಿದೆ. ಇದು ಕೂಡ ಬಂದರೆ ಸುಮಾರು 13 ಲಕ್ಷ ಎಕರೆಗಿಂತಲೂ ಹೆಚ್ಚಿನ ಜಮೀನನ್ನು ಸಕ್ರಮಗೊಳಿಸುವುದಕ್ಕೆ ಸಾಧ್ಯ ಆಗುತ್ತದೆ.

ಅಂದರೆ ಸಧ್ಯದ ಪರಿಸ್ಥಿತಿಯಲ್ಲಿ 11 ಲಕ್ಷ ಎಕರೆ ಜಮೀನು ಬಡವರಿಗೆ ಸಿಗುತ್ತದೆ. ಇದು ಮೂರು ಲಕ್ಷ ಅಲ್ಲದೇನೆ ಇನ್ನೂ ಸುಮಾರು ಒಂದೂವರೆ ಲಕ್ಷ ಜನ ಏನು ಸಿ ಅಂಡ್ ಡಿ ಕ್ಲಾಸ್ ಜಮೀನನ್ನು ಒತ್ತುವರಿ ಮಾಡಿದವರೂ ಕೂಡ ಬರುತ್ತಾರೆ. ಈ ಒಂದು ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಇದಕ್ಕೆ ನೀವೆಲ್ಲರೂ ಕೂಡ ಒಪ್ಪಿಗೆಯನ್ನು ಸರ್ವಾನುಮತದಿಂದ ಕೊಟ್ಟಿದ್ದೀರಿ, ಇನ್ನು ಇನ್‌ಸ್ಟಾಲ್‌ಮೆಂಟ್ ಬಗ್ಗೆ ಸಲಹೆ ಮಾಡಿದ್ದೀರಿ. ಲ್ಯಾಂಡ್ ಗ್ರಾಂಟ್

ಮಾಡುವಾಗ ಏನು ಐದುನೂರು ಪಟ್ಟು ಇದೆ, ಅದನ್ನು ಕಡಿಮೆ ಮಾಡಬೇಕೆಂದು ಹೇಳಿದ್ದೀರಿ. ಈಗಾಗಲೇ ನಾವು ಒಂದು ತಿದ್ದುಪಡಿಯನ್ನು ತಂದು ರೂಲ್ಸ್‌ನಲ್ಲಿ ಎಷ್ಟರಮಟ್ಟಿಗೆ ಫಿಕ್ಸ್ ಮಾಡಬೇಕು ಅಥವಾ ಫ್ರೀ ಕೊಡಬೇಕೋ ಅಥವಾ ಎಲ್ಲರಿಗೂ ಒಂದೇ ರೀತಿ ನಾಮಿನಲ್ ರೇಟ್ ಮಾಡಬೇಕೆಂದು ಯೋಜನೆ ಮಾಡಿ ಅದನ್ನು ಪ್ರಿಸ್ಕ್ರೈಬ್ಡ್ ರೂಲ್ಸ್ ಮಾಡಿದ್ದೇವೆ. ಕಾನೂನಿನಲ್ಲಿ 500 ಪಟ್ಟು ಎಂದು ಇಟ್ಟರೆ ನಮ್ಮ ತಹಸೀಲ್ದಾರರಾಗಲೀ ಕಮಿಟಿಗಳಾಗಲೀ ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡುತ್ತಾರೆ ಎಂದು ತಿಳಿದುಕೊಂಡು, ರೂಲ್ಸ್‌ನಲ್ಲಿ ಕಡಿಮೆ ಮಾಡತಕ್ಕ ದೃಷ್ಟಿಯಿಂದಲೇ ಆಸ್ ಪ್ರಿಸ್ಕ್ರೈಬ್ಡ್ ಬೈದಿ ರೂಲ್ಸ್, ಎಂದು ಮಾಡಿದ್ದೇವೆ. ಅಂದಮೇಲೆ ತಮ್ಮ ಸಂಶಯ ಏನಿದೆ ಅದು ನಿವಾರಣೆಯಾಗುತ್ತದೆ. ಅದಷ್ಟು ಕಡಿಮೆ ಹಣವನ್ನು ನಿಗದಿಮಾಡಿ ಅವರಿಗೆ ಕೊಡುವ ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತೇನೆ. ಲ್ಯಾಂಡ್ ಲೆಸ್ ಎಂದರೆ ಅದರಲ್ಲಿ ಎಲ್ಲರೂ ಬರುತ್ತಾರೆ. ಆದರೆ ಇದಕ್ಕೆ ಒಂದು ಲಿಮಿಟ್ ಇದೆ. ತಮ್ಮ ಒಂದು ಸಲಹೆಯನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಏಕೆಂದರೆ ಎರಡು ಹೆಕ್ಟೇರ್ಸ್ ಮೇಲೆ ಇರತಕ್ಕಂಥವರಿಗೂ ಕೂಡ ಕೊಡಬೇಕೆಂದು ತಾವು ಸಲಹೆ ಮಾಡಿದ್ದೀರಿ.

ಅದನ್ನು ಒಪ್ಪುವುದಕ್ಕಾಗವುದಿಲ್ಲ. ಏಕೆ ಆಗುವುದಿಲ್ಲವೆಂದರೆ, ನಮ್ಮಲ್ಲಿರತಕ್ಕ ಅಂಕಿ ಸಂಖ್ಯೆ ಪ್ರಕಾರ, ತಮ್ಮ ಸಲಹೆಯನ್ನು ಒಪ್ಪಿದರೆ, ಯಾರಿಗೂ ಪ್ರಯೋಜನವಾಗುವುದಿಲ್ಲ. ಅವರು ಬಹಳ ಕಡಿಮೆ ಜನ ಇದ್ದಾರೆ. ಅವರಿಗೆ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುತ್ತೇನೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು 92,736 ಜನ ಅಕ್ರಮ ಸಾಗುವಳಿ ಮಾಡಿದ್ದಾರೆ, ಇವರು ಎಷ್ಟು ಎಕರೆ ಮಾಡಿದ್ದಾರೆ ಎಂದರೆ, 1,84,568, ಅಂದರೆ ಸರಾಸರಿ 2 ಎಕರೆಗಿಂತ ಜಾಸ್ತಿ ಬರುವುದಿಲ್ಲ ರಾಜ್ಯದ ಮಾರ್ಜಿನಲ್ ರೈತರನ್ನು ತೆಗೆದುಕೊಂಡರೆ, 64,210 ಜನ ಇದ್ದಾರೆ. ಇವರು ಒಟ್ಟು ಸಾಗುವಳಿ ಮಾಡಿರುವುದು ಎಷ್ಟು 1,18,746 ಎಕರೆ, ಸರಾಸರಿ 3 ಎಕರೆಗಿಂತಲೂ ಜಾಸ್ತಿ ಇಲ್ಲ. ತದನಂತರ, ಲ್ಯಾಂಡ್‌ಲೆಸ್ ಜನ, 74,165 ಎನ್‌ಕ್ರೋಚ್‌ಮೆಂಟ್ 1,49,848 ಎಕರೆಗಳು ಇದೂ ಕೂಡ 2 ಎಕರೆಗಿಂತಲೂ ಜಾಸ್ತಿ ಬರುವುದಿಲ್ಲ. ಇದಾದಮೇಲೆ, ಇತರೆಯವರು 86,217, ಇವರು ಮಾಡಿದ್ದು ಎಷ್ಟು ಎಂದರೆ, ಒಂದು ಲಕ್ಷದ ಎಪ್ಪತ್ತು ಸಾವಿರ ಎಕರೆ ಸರಾಸರಿ 2 ಎಕರೆಗಿಂತಲೂ ಜಾಸ್ತಿ ಇಲ್ಲ. ನಾನು ಏನು ಹೇಳುತ್ತೇನೆಂದರೆ ತಮ್ಮ ಸಲಹೆಯನ್ನು ಒಪ್ಪಿದರೆ, ಕೆಲವು ಜನರಿಗೆ ಲಾಭವಾಗಬಹುದೇ ಹೊರತು, ಈ ಕೆಟಗರಿಯಲ್ಲಿ ಬರತಕ್ಕ ಯಾವುದೇ ಜನರಿಗೆ ಲಾಭವಾಗುವುದಿಲ್ಲ. ಜೊತೆಗೆ ತಾವು ಹೇಳುವುದೇನು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಇಲ್ಲ, ಅದಕ್ಕೆ ಆದಷ್ಟು ಕಡಿಮೆ ಮಾಡಿದರೆ, ಹೆಚ್ಚಿಗೆ ಜನರಿಗೆ ಪ್ರಯೋಜನವಾಗುತ್ತದೆ. ಯಾರು 5 ಎಕರೆಗಿಂತ ಜಾಸ್ತಿ ಒತ್ತುವರಿ ಮಾಡಿದ್ದಾರೆ. ಅದನ್ನು ತೆಗೆದುಕೊಂಡು ಬೇರೆಯವರಿಗೆ ಕೊಡುವುದಕ್ಕೆ ಅವೆಲಿಬಿಲಿಟಿ ಲಿಸ್ಟ್‌ಗೆ ತಂದು ಹಂಚತಕ್ಕ ಕೆಲಸ ಮಾಡಬಹುದು. ಅದಕ್ಕಾಗಿ ದಯಮಾಡಿ, ತಮ್ಮ ಸಲಹೆ, ಈ ಸಂದರ್ಭದಲ್ಲಿ ಅಷ್ಟು ಸೂಕ್ತವಾಗುವುದಿಲ್ಲ. ಈ ಅಂಕಿಸಂಖ್ಯೆ ಆಧಾರದ ಮೇಲೆ ಬಡವರಿಗೆ ಲಾಭ ಆಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಈ ಬಗ್ಗೆ ಸಲಹೆ ಕೊಟ್ಟ ಉದ್ದೇಶ ಬೇರೆ, ಅವರು ಮೂರು ಎಕರೆ ಜಮೀನು ಮಾಡುತ್ತಾರೆ, ಅವರಿಗೆ ಮೂರು ಎಕರೆ ಜಮೀನು ಇದೆ, ಆದರೆ ಅವರ ಮನೆಯಲ್ಲಿ 7-8 ಜನ ಇದ್ದಾರೆ. ಈ

3 ಎಕರೆ ಜಮೀನಿನಲ್ಲಿ, ಒಂದು ಎಕರೆ ಕಿತ್ತುಕೊಂಡು, ಇನ್ನು 2 ಎಕರೆ ಕೊಡುತ್ತೀರಿ. ಅವನಿಗೆ ಒಟ್ಟು ಅದು, ಇದೂ ಎರಡು ಸೇರಿಸಿದರೆ 5 ಎಕರೆ ಆಗುತ್ತದೆ. ಈ 5ಎಕರೆಯಲ್ಲಿ ಡ್ರೈಲ್ಯಾಂಡ್‌ನಲ್ಲಿ ಜೀವನ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿ, 4 ಹೆಕ್ಟೇರ್ ಮಾಡಿ ಎಂದು ಹೇಳಿದೆ. ಎರಡು ಎಕರೆ ಮಾಡುತ್ತಾ ಇದ್ದು, ಇನ್ನೂ 4 ಎಕರೆ ಕೊಡುವುದಕ್ಕೆ ಅಲ್ಲಿ ಜಮೀನು ಎಲ್ಲಿದೆ. ಅಲ್ಲಿ ಎರಡು ಎಕರೆಯನ್ನೇ ಕೊಡಬೇಕಾಗುತ್ತದೆ. ಮತ್ತು ಬೇರೆಯವರಿಂದ ಕಿತ್ತು ಕೊಡುವುದಕ್ಕೂ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂತಹ ಕೆಲವು ಜನರು ಇರಬಹುದು. ಆದರೆ ಈ ಸಂಖ್ಯೆ ನೋಡಿದಾಗ, ಯಾರಿಗೂ ಪ್ರಯೋಜನವಾಗುವುದಿಲ್ಲ. ನಾನು ಯೋಚನೆ ಮಾಡಿದೆ, ಕೊನಗೆ ಯಾರಿಗಾದರೂ ಲಾಭವಾಗುತ್ತದೆಂದರೆ, ನಾವು ಈ ರೀತಿ ಮಾಡಬಹುದಿತ್ತು. 20ಸಾವಿರ, 50ಸಾವಿರ ಜನರಿಗೆ ತೊಂದರೆಯಾಗುತ್ತದೆಂದು ಹೇಳಿದರೆ, ನಾವು ಕನ್‌ಸಿಡರ್ ಮಾಡಬಹುದಿತ್ತು. ಅದನ್ನು ತರಿಸಿ ನೋಡಿದ ಮೇಲೆ, ತಮ್ಮ ಸಲಹೆಯಂತೆ ಕೆಲವು ಜನರಿಗೆ ಮಾತ್ರ ಲಾಭವಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ನಿಮ್ಮ ಹತ್ತಿರ ಇರತಕ್ಕ ಅಂಕಿ ಸಂಖ್ಯೆಗಳು ಎಷ್ಟು ಎನ್‌ಕ್ರೋಚ್ ಮಾಡಿದ್ದಾರೆಂದು ಹೇಳುತ್ತವೆಯೇ ವಿನಹ ಜಮೀನು ಇದೆಯೇ ಇಲ್ಲವೇ ಎಂಬುದಕ್ಕೆ ನಿಮ್ಮ ಹತ್ತಿರ ದಾಖಲೆ ಇಲ್ಲ. ಅಲ್ಲಿ ಎಷ್ಟು ಜಮೀನು ಇದೆ ಎಂಬ ಬಗ್ಗೆ ದಾಖಲೆಗಳು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಯಾವಾಗಲೂ ಸರಾಸರಿ ತೆಗೆದುಕೊಳ್ಳಬೇಕು. ತಮಗೂ ಕೂಡ ಗೊತ್ತಿದೆ, ಕೆಲವು ಎಕ್ಸೆಪ್‌ಷನ್ ಇರಬಹುದು ಇಲ್ಲ ಎಂದು ಹೇಳುವುದಿಲ್ಲ. ಅದಕ್ಕೆ ಇದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಉಳಿದ ಎಕ್ಸೆಪ್‌ಷನ್ ಈಗಾಗಲೇ ಕೊಟ್ಟಿದ್ದೇವೆ. ಮಾನ್ಯ ದೇಶಪಾಂಡೆಯವರೂ ಹೇಳಿದರು, ತಾವೂ ಹೇಳಿದಿರಿ. ಫಾರೆಸ್ಟ್ ಲ್ಯಾಂಡ್ ಪ್ಲಾಂಟೇಷನ್ ಲ್ಯಾಂಡ್ or lands referred to in subsection 2 of section 9,

ಇವೆಲ್ಲವೂ ಇದಕ್ಕೆ ಎಕ್ಸೆಪ್‌ಷನ್ ಇದೆ. ನನ್ನ ಹತ್ತಿರ ಲಿಸ್ಟ್ ಇದೆ. ಇದು ತಮಗೂ ಗೊತ್ತಿದೆ. ಠಾಣೆ, ಬಾಣೆ ಇಂತಾದ್ದೆಲ್ಲಾ ಇದರಲ್ಲಿ ಬರುತ್ತದೆ. ಅದಕ್ಕೆ ಎಕ್ಸೆಪ್‌ಷನ್ ಏನಿದೆ, ಅದನ್ನು ಹಾಗೆಯೇ ಇಟ್ಟಿದ್ದೇವೆ. ಈ ಕಾನೂನು ಪ್ರಕಾರ, ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕ ಜಮೀನು ಏನಿದೆ, ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸಂಪೂರ್ಣವಾದ ವಿಧೇಯಕವನ್ನು ತಂದಿದ್ದೇವೆ.

ಈಗ ಎಲ್ಲಾ ಕಡೆ ಎನ್‌ಕ್ರೋಚ್ ಮಾಡುತ್ತಿದ್ದಾರೆ, ಎಲ್ಲಾ ಕಡೆ ಸಿಗುತ್ತದೆ ಎಂಬ ತಮ್ಮ ಸಂಶಯ ಏನಿದೆ ಅದಕ್ಕೆ ಅವಕಾಶ ಇಲ್ಲ. ಎಲ್ಲೆಲ್ಲಿ ಈ ಕಾನೂನು ಪ್ರಕಾರ,ಲ್ಯಾಂಡ್ ರೆವಿನ್ಯೂ ಅಕ್ಟ್ ಪ್ರಕಾರ ಕೊಡತಕ್ಕಂಥಾದ್ದು ಇದೆ, ಅದನ್ನು ರೆಗ್ಯುಲರೈಸ್ ಮಾಡುತ್ತೇವೆ. ಈ ಕಾನೂನಿನ ಪ್ರಕಾರವೇ ಇಷ್ಟು ಎಕರೆ ಜಮೀನು ಇರತಕ್ಕದ್ದು. ಇದರಿಂದ ಯಾರಿಗೂ ತೊಂದರೆ ಆಗುವುದಿಲ್ಲ, ಅನಾನುಕೂಲ ಕೂಡ ಆಗುವುದಿಲ್ಲ. ತಾವೇನು ಪ್ರೈಸ್ ಫಿಕ್ಸೇಷನ್ ಬಗ್ಗೆ ಸಲಹೆ ಕೊಟ್ಟಿದ್ದೀರಿ ಅದನ್ನೂ ಕೂಡಾ ಗಮನದಲ್ಲಿಡುತ್ತೇವೆ. ಬೆಂಗಳೂರು, ಬೆಳಗಾಂ, ಗುಲ್ಬರ್ಗಾ, ಹುಬ್ಬಳ್ಳಿ- ಧಾರವಾಡ, ಮಂಗಳೂರು ಸಿಟಿ ಇವರಿಗೆಲ್ಲಾ ಲಿಮಿಟ್ ಹಾಕಿದ್ದೇವೆ. ಇದು ಮೊದಲಿನ ತಿದ್ದುಪಡಿಯಲ್ಲಿ 19 ಕಿಲೋಮೀಟರ್ ಇತ್ತು, ಈಗ ಅದು 18ಕಿಲೋಮೀಟರ್ ಆಗಿದೆ. ಬೆಳಗಾಂ, ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ, ಮಂಗಳೂರು

ಮೈಸೂರ ಸಿಟಿಗಳಿಗೆ, 10 ಕಿಲೋಮೀಟರ್, ಮತ್ತು ಆಲ್ ಸಿಟಿ ಮುನಿಸಿಪಾಲಿಟೀಸ್‌ಗೆ 5 ಕಿಲೋಮಿಟರ್, ಟೌನ್ ಮುನಿಸಿಪಾಲಿಟೀಸ್‌ಗೆ ಎಕ್ಸೆಂಪ್ಷನ್ ಇದೆ, ಅವು ರೆಗ್ಯುಲರೈಸ್ ಇರತಕ್ಕಂಥಾದ್ದಕ್ಕೆ ಮಾತ್ರ ಅವು ಬಹಳ ಬೆಲೆ ಬಾಳುವ ಜಮೀನು ಇದೆ, ಅವು ರೆಗ್ಯುಲರೈಸ್ ಆಗುತ್ತವೆ ಎಂಬ ದೃಷ್ಟಿಯಿಂದ ನಾವು ಒಂದು ಹತೋಟಿಯನ್ನು ಇಡಬೇಕೆಂದು ಅದಕ್ಕೆ ರಿಸ್ಟ್ರಿಕ್ಷನ್ ಹಾಕಿದ್ದೇವೆ. ರೆಗ್ಯುಲರೈಸ್ ಮಾಡಬಾರದೆಂದು ಎಂದು ಹೇಳಿ ಮಾಡಿದ್ದೇವೆ. ಈ ಒಂದು ಸಮಸ್ಯೆ ಕೂಡಾ ಬಗೆಹರಿದಿದೆ. ಮತ್ತು ಸೆಕ್ಷನ್ 95 ಕ್ಲಾಸ್ 4 ಏನಿದೆ, ಅದರ ಪ್ರಕಾರ ಸಿಡಿಪಿ ಏರಿಯಾ ಮತ್ತು ಒಡಿಪಿ ಏರಿಯಾದಲ್ಲಿ ನೇರವಾಗಿ ಇವತ್ತಿನದಿವಸ ಡೆಪ್ಯುಟಿ ಕಮೀಷನರ್‌ಗೆ ಅಪ್ಲಿಕೇಷನ್ ಕೊಟ್ಟರೆ ಅವರು ಅದನ್ನು ರೆಫ್ಯೂಸ್ ಮಾಡುವಹಾಗೆ ಇಲ್ಲ, ನೇರವಾಗಿ ಕನ್‌ವರ್ಷನ್ ಮಾಡಿ ಕೊಡಬೇಕು. ಇಲ್ಲಿಯವರೆಗೆ ಏನಾಗುತ್ತಿತ್ತು ಎಂದರೆ ಅಪ್ಲಿಕೇಷನ್ ಹಿಡಿದುಕೊಂಡು ಹೋಗುವುದು, ಅವರು ಅಬ್ಜೆಕ್ಷನ್ ಹಾಕುವುದು, ಹೀಗೆ ತಿರುಗಿ ಅನೇಕ ಜನ ಗೋಳಾಡುತ್ತಿದ್ದರು. ಇದರಿಂದ ಒಂದು ಕಡೆ ಕರಪ್ಷನ್ ಕಡಿಮೆಯಾಗುತ್ತದೆ,ಇನ್ನೊಂದು ಕಡೆ ಫಾರ್ಮರ್ಸ್‌ಗೆ ಆಗುತ್ತಿದ್ದ ಹ್ಯರಾಸ್‌ಮೆಂಟ್ ತಪ್ಪುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಈ ತಿದ್ದುಪಡಿ ತಂದಿದ್ದೇವೆ. ಇದು ಒಳ್ಳೆಯ ತಿದ್ದುಪಡಿ ಇದೆ. ಮೊದಲು ನಾನು ಏನು ತಿದ್ದುಪಡಿ ಕೊಟ್ಟಿದ್ದೆ, ಅದಕ್ಕೆ ನಾವು ಪ್ರೆಸ್ ಮಾಡುವುದಿಲ್ಲ, ಕ್ಲಾಸ್ ಫೋರ್‌ಗೆ ಸಂಬಂಧಪಟ್ಟಂತೆ ಸಮಗ್ರವಾಗಿ ಈ ತಿದ್ದುಪಡಿಯಲ್ಲೇ ತಂದ ಕಾರಣ ಇದನ್ನು ತಾವೆಲ್ಲಾರೂ ಕೂಡ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ತಾವು ಒಪ್ಪಿಗೆ ಕೊಟ್ಟಿದ್ದೀರಿ. ಕಮಿಟಿ ಬಗ್ಗೆ ಕೆಲವರು ಮಾತನಾಡಿ ಶಾಸಕರಿಗೆ ಏತಕ್ಕೆ ಇಟ್ಟಿದ್ದೀರಿ ಎಂದು ಕೇಳಿದರು. ಒಂದು ಕಡೆ ಹಾಗೆ ಮಾತನಾಡುತ್ತೀರಿ, ಇನ್ನೊಂದು ಕಡೆ ಹೀಗೆ ಮಾತನಾಡುತ್ತೀರಿ. ಏತಕ್ಕೆ ಮಾಡಿದ್ದೇವೆ ಎಂದರೆ ಅಟ್‌ಲೀಸ್ಟ್ ಒಬ್ಬರು ಶಾಸಕರನ್ನು ಹಾಕಿ ಇನ್ನು ಇಬ್ಬರು ನಾನು ಅಫಿಷಿಯಲ್ ಮೆಂಬರ್ಸ್ ಹಾಕುತ್ತೇವೆ. ಅವರು ಕೂಡ ಹೋಗಿ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಬಹುದು. ಒಳ್ಳೆಯದು ಕೆಟ್ಟದ್ದು ಅವರಿಗೆ ಗೊತ್ತಿರುತ್ತದೆ. ರೆಕಾರ್ಡ್ಸ್ ನೋಡುತ್ತಾರೆ. ಸಂಶಯ ಬಂದ ಕಡೆ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡುತ್ತಾರೆ. ನಮ್ಮ ಶಾಸಕರನ್ನು ನಾವು ನಂಬಬೇಕು. ಈ ದೃಷ್ಟಿಯಿಂದ ಹಾಕಿದ್ದೇವೆ. ತಮಗೆ ಗೊತ್ತಿರುವಹಾಗೆ ಕೆಲವು ಕಡೆ ಟೆರಿಟೋರಿ ಯಾರಿಗೆ ಹೆಚ್ಚಾಗಿ ಬರುತ್ತದೆ, ಅಂತಹವರನ್ನು ಹಾಕುತ್ತೇವೆ. ಕಡಿಮೆ ಬರತಕ್ಕಂಥವರ ಪ್ರಶ್ನೆ ಇಲ್ಲ, ಅವರಿಗೆ ಮೆಂಬರ್ ಎಂದು ಹಾಕಬಹುದು. ಆದರೆ ಇದು ಕಮಿಟೆಡ್ ಇರತಕ್ಕಂಥವರ ಕೆಲಸ ಇದೆ. ಎಲ್ಲರೂ ಕಮಿಟೆಡ್ ಇಲ್ಲ ಎಂದು ನಾನು ಹೇಳುವುದಿಲ್ಲ, ಅನೇಕ ಸಲ ನಮ್ಮ ಲ್ಯಾಂಡ್ ರಿಫಾರಮ್ಸ್ ಆಕ್ಟ್ ಬಂದಾಗ, ಲ್ಯಾಂಡ್ ರೆವಿನ್ಯೂ ಆಕ್ಟ್ ಬಂದಾಗ ಎಷ್ಟೋ ಜನ ವಿರೋಧ ಮಾಡುವವರು ಇದ್ದಾರೆ. ಆದರೆ ನಾವು ಇವತ್ತು ಜನರ ಕೆಲಸ ಮಾಡುತ್ತಾರೆ, ಒಳ್ಳೆಯದು ಮಾಡುತ್ತಾರೆ ಎಂದು ನಂಬಿಕೊಂಡು, ಜನರಿಂದ ಆರಿಸಿ ಬಂದವರಿಗೆ, ಜನರ ಬಗ್ಗೆ ಕಳಕಳಿ ಇರುತ್ತದೆ, ಅಭಿಮಾನ ಇರುತ್ತದೆ, ಅವರು ಅನ್ಯಾಯ ಮಾಡದೇ ಇರಬಹುದು ಎಂಬ ದೃಷ್ಟಿಯಿಂದ ಆ ಕಮಿಟಿಗಳನ್ನು ಮಾಡಿರುತ್ತೇವೆ. ಆರು ತಿಂಗಳ ಸಮಯ ಕೊಟ್ಟಿದ್ದೇವೆ. ಆ ಆರು ತಿಂಗಳ ಒಳಗಾಗಿ ಅವರೆಲ್ಲರೂ ಅಪ್ಲಿಕೇಷನ್ ಹಾಕುತ್ತಾರೆ. ಮೀನ್‌ವೈಲ್ ರೆಗ್ಯುಲರೈಸ್ ಮಾಡಬೇಕೆಂದು ಆದೇಶ ಇದೆ. ಎರಡುಮೂರು ವರ್ಷ ಇದನ್ನು ಬೆಳೆಸಿಕೊಂಡು ಹೋಗತಕ್ಕಂಥಾದ್ದಲ್ಲ; ಇದಕ್ಕೆ ಟೈಮ್ ಬಾಂಡ್ ಪ್ರೋಗ್ರಾಂ ಕೊಡುತ್ತೇವೆ. ಹಿಂದೆ ನಾನು ರೆವಿನ್ಯೂ

ಮಿನಿಸ್ಟರ್ ಆಗಿದ್ದಾಗ ಲ್ಯಾಂಡ್ ರಿಫಾರಮ್ಸ್‌ಗೆ ಕೂಡಾ ಟೈಮ್ ಬಾಂಡಾ ಪ್ರೋಗ್ರಾಂ ಕೊಟ್ಟು ಇಷ್ಟು ದಿವಸದಲ್ಲಿ ಇದನ್ನು ಮಾಡಬೇಕೆಂದು ಹೇಳಿದಾಗ, 6-7 ಲಕ್ಷ ಟೆನೆಂಟ್ಸ್‌ಗೆ ಕನ್‌ಫರ್ಮ್ ಮಾಡತಕ್ಕ ಕೆಲಸವನ್ನು ಆ ಕಾಲದಲ್ಲಿ ಮಾಡಿದೆವು. ಅದೇ ರೀತಿ ಇದಕ್ಕೂ ಟೈಮ್ ಬಾಂಡ್ ಪ್ರೋಗ್ರಾಂ ಕೊಟ್ಟು ತಮ್ಮ ಅಧ್ಯಕ್ಷತೆಯಲ್ಲಿಯೇ ಸರಿಯಾದ ರೀತಿ ನಿರ್ವಹಣೆ ಆಗಬೇಕೆಂದು ಉದ್ದೇಶ ಇಟ್ಟುಕೊಂಡು ಈ ಕಾನೂನನ್ನು ತಂದಿದ್ದೇವೆ. ಇದಕ್ಕೆ ತಾವು ಮನಸ್ಸಿಟ್ಟು ಬಹಳ ಅಭಿಮಾನದಿಂದ, ಇದನ್ನು ಪಾಸ್ ಮಾಡುತ್ತೀರೆಂದು ನಂಬಿಕೊಂಡು ಇದನ್ನು ಸರ್ವಾನುಮತದಿಂದ ಪಾಸ್ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹುಲ್ಲುಗಾವಲು ಹಾಗೂ ಫಾರೆಸ್ಟ್‌ಲ್ಯಾಂಡ್‌ನ್ನು ತಾವು ಸಾಗುವಳಿಗೆ ಕೊಟ್ಟರೆ ಹೇಗೆ? ಇದರ ಬಗ್ಗೆ ಮಾಹಿತಿ ಕೊಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಎನ್‌ಕ್ರೋಚ್ ಮಾಡಿದ್ದರೆ ಅದರ ಪ್ರಶ್ನೆಯೇ ಬರುವುದಿಲ್ಲ. ಎಲ್ಲಿದೆ ಹುಲ್ಲುಗಾವಲು. ಅದೇನಾದರೂ ಉಳಿದಿದ್ದರೆ ಉಳಿಸಬಹುದು.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಸಚಿವರು ಉತ್ತರ ಕೊಡಬೇಕು..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಎನ್‌ಕ್ರೋಚ್ ಮಾಡಿರುವುದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆಗದೇ ಇರುವುದನ್ನು ಹಾಗೇ ಇಡುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ನಾನು ಕೆಲವು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅವುಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ. ಅದಕ್ಕೆ ನಾನು ಕೆಲವು ಕ್ಲಾರಿಫಿಕೇಶನ್ಸ್ ಕೇಳುತ್ತೇನೆ. ಸಿಟಿ ಮುನಿಸಿಪಾಲಿಟಿಗಳಲ್ಲಿ ರಿಸ್ಟ್ರಿಕ್ಷನ್ ಮಾಡಿದ್ದೀರಿ. ಅದು 5 ಕಿಲೋಮೀಟರ್ ಒಳಗೆ ಇರಬೇಕೆಂದು. ಅಲ್ಲಿ ಲ್ಯಾಂಡ್ ಸಿಗುವುದಾದರೆ ಅದನ್ನು ಒಪ್ಪಿಕೊಳ್ಳೋಣ. ಆದರೆ ಅದು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಅಧೀನದಲ್ಲಿ ಬಂದಿದ್ದರೆ ಕನ್ಸಿಡರ್ ಮಾಡಬೇಕೆಂದು ನಾನು ಹೇಳಿದ್ದೆ. ಈಗ ಸಿಟಿ ಮುನಿಸಿಪಾಲಿಟಿಗಳಲ್ಲಿ ಲಿಮಿಟ್ ಇದೆ. ಅದೇ ರೀತಿ ಇಲ್ಲೂ ಮಾಡಬೇಕು. ಎರಡನೆಯದಾಗಿ ಗ್ರೇಜಿಂಗ್ ಲ್ಯಾಂಡ್ ಪ್ರತಿಯೊಂದು ಹಳ್ಳಿಯಲ್ಲೂ ಇರಬೇಕು, ದನಕರುಗಳಿಗೆ ಗ್ರೇಜಿಂಗ್ ಲ್ಯಾಂಡ್ ಇಲ್ಲ. ಇಂತಹ ಜಮೀನನ್ನು ಕೊಟ್ಟು ಬಿಟ್ಟರೆ ದನಕರುಗಳು ಎಲ್ಲಿ ಹೋಗಬೇಕು?

ಶ್ರೀ ಕಾಗೋಡು ತಿಮ್ಮಪ್ಪ : ಬಗರ್ ಹುಕುಂ ಸಾಗುವಳಿ ಮಾಡಿರುವ ಲ್ಯಾಂಡ್‌ನ್ನು ಸಕ್ರಮಗೊಳಿಸುವ ಕಾನೂನು ಇದು...

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮೂರನೆಯದಾಗಿ ನಾನು ಪ್ರಾವಿಜನ್‌ನಲ್ಲಿರುವ ಕನ್‌ಫ್ಯೂಶನ್ ಬಗ್ಗೆ ಹೇಳಿದೆ. ಈಗ ಇರುವ ಪ್ರಾವಿಜನ್ ಪ್ರಕಾರ ತಹಶೀಲ್ದಾರರಿಗೆ ಅಧಿಕಾರ ಕೊಟ್ಟಿದ್ದೀರಿ. ಅದನ್ನು ತೆಗೆದು ಕಮಿಟಿಗೆ ಆ ಅಧಿಕಾರ ಕೊಡಿ ಎಂದು ಹೇಳಿದೆ. ನಾಲ್ಕನೆಯದಾಗಿ ಇನ್‌ಸ್ಟಾಲ್‌ಮೆಂಟ್ ಹಣ ಕಟ್ಟಲು 30 ದಿವಸ ಟೈಮ್ ಕೊಟ್ಟಿದ್ದೀರಿ ಅದರೊಳಗೆ ಅವರು ಹಣ ಕಟ್ಟಲು ಆಗುವುದಿಲ್ಲ ಇನ್ನು

ಹೆಚ್ಚು ಸಮಯ ಬೇಕೆಂದು ಹೇಳಿದೆ ; ಆ ಸಮಯದಲ್ಲಿ ಅವರು ಹಣ ಕಟ್ಟದೆ ಡಿಫಾಲ್ಟರ್ ಆದರೆ ತೊಂದರೆಯಾಗುತ್ತದೆ, ಅದಕ್ಕೆ ಅವರಿಗೆ ಸ್ವಲ್ಪ ಕನ್‌ಸೀಷನ್ ಕೊಡಬೇಕೆಂದು ಹೇಳಿದೆ. ಅದಕ್ಕೂ ತಾವು ಉತ್ತರ ಕೊಡಲಿಲ್ಲ. ಮತ್ತು ನಾನು ಹೇಳಿದೆ ; ಯಾವ ಬಡವರಿಗೆ ತಾವು ಜಮೀನು ಕೊಡುತ್ತಿದ್ದೀರಿ ಅವರಿಗೆ ಅಗ್ರಿಕಲ್ಚರ್ ರೂರಲ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಂದ ಸಾಲ ಕೊಡುವ ವ್ಯವಸ್ಥೆ ಮಾಡಿ ಎಂದು ಹೇಳಿದೆ; ಇದರ ಬಗ್ಗೆ ಕೂಡಾ ತಾವು ಏನನ್ನೂ ಹೇಳಲಿಲ್ಲ ಆಮೇಲೆ ರೈತರು ಈಗ ಆ ಜಮೀನುಗಳಲ್ಲಿ ಗಿಡಮರಗಳನ್ನು ಏನು ಬೆಳೆಸಿದ್ದಾರೆ ಆ ಮರಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ತಾವು ಕಾನೂನಿನಲ್ಲಿ ಹೇಳಿದ್ದೀರಿ. ಅದು ಸರಿಯಲ್ಲ ಆ ಮರಗಳನ್ನು ರೈತರಿಗೆ ಕೊಡಬೇಕೆಂದು ನಾನು ಹೇಳಿದೆ ಅದರ ಬಗ್ಗೆ ಕೂಡ ನನಗೆ ಸ್ಪಷ್ಟೀಕರಣ ಕೊಡಲಿಲ್ಲ. ಇದಕ್ಕೆಲ್ಲಾ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನು ಹೇಳಿದೆ, ಎಲ್ಲಿಯಾದರೂ ಅಡೆತಡೆಗಳು ಬಂದರೆ ಅವುಗಳನ್ನು ಸರಿ ಮಾಡೋಣ ಎಂದು. ಸಧ್ಯದಲ್ಲಿ ತಾವು ಇದನ್ನು ರೆಗ್ಯುಲರೈಜ್ ಮಾಡುವುದಕ್ಕೆ ಒಪ್ಪಿಗೆ ಕೊಡಿ. ನಾವು ರೂಲ್ಸ್‌ನಲ್ಲಿ ನಾಮಿನಲ್ ಆಗಿ ಹಾಕುತ್ತೇವೆ. price for land ಕಿಮ್ಮತ್ತು ಕಡಿಮೆ ಮಾಡಿ ಇನ್‌ಸ್ಟಾಲ್‌ಮೆಂಟ್ಸ್ 3-4 ಕೊಡಬೇಕೋ ಎಷ್ಟು ಕೊಡಬೇಕೆನ್ನುವ ಬಗ್ಗೆ ಬಗ್ಗೆ ಆಮೇಲೆ ರೂಲ್ಸ್‌ನಲ್ಲಿ ನಾವು ಮಾಡುತ್ತೇವೆ.We have got discretion. That suggestion iss for consideration. ಆಮೇಲೆ ತಾವು ಹೇಳಿದಿರಿ 30 ದಿವಸ ಟೈಮ್ ಕೊಟ್ಟಿದ್ದೀರಿ ಅದು ಸಾಕಾಗುವುದಿಲ್ಲ ಎಂದು. ನಮಗೆ ಗೊತ್ತಾಗುತ್ತದೆ. ಯಾರು ನಿಜವಾಗಿ ಈ ಹಣ ಅಷ್ಟು ಸಮಯದಲ್ಲಿ ಕಟ್ಟಲು ಸಾಧ್ಯವಿಲ್ಲ ಎನ್ನುವುದು ಅಂತಹವರಿಗೆ ಬೇಕಾದರೆ ಜಾಸ್ತಿ ಟೈಮ್ ಕೊಡೋಣ. ಆದರೆ ಸಾರಾಸಗಟಾಗಿ ಟೈಮ್ ಕೊಟ್ಟರೆ ಬಹುಶ: ಹಳ್ಳಿಗಳಲ್ಲಿ ಇದರಿಂದಲೇ ಜಗಳಗಳು ಪ್ರಾರಂಭವಾಗುತ್ತವೆ. ಇದನ್ನು ಸಹ ನಾವು ವಿಚಾರ ಮಾಡಬೇಕಾಗುತ್ತದೆ. ಈಗ ನಾವು 30 ದಿವಸ ಇಟ್ಟಿದ್ದೇವೆ; ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ನಲ್ಲಿ ಈಗ ಏನಿದೆ ಅದನ್ನು ಫಾಲೋ ಮಾಡೋಣ. ಮುಲ್ಕಿ ಅದರ ಬಗ್ಗೆ ಒಂದು ನಾಮಿನಲ್ ಪ್ರೈಜ್ ತೆಗೆದುಕೊಂಡು ಕೊಡತಕ್ಕಂಥ ವ್ಯವಸ್ಥೆ ಮಾಡೋಣ. ರೂಲ್ಸ್‌ನಲ್ಲಿ ತಾವು ಹೇಳಿದ್ದನ್ನು ಮಾಡಬಹುದು. ತಮಗೆ ಗೊತ್ತಿದೆ. ಲಾಸ್ಟ್ ಟೈಮ್ ನಾನು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಒಂದು ಆರ್ಡರ್ ಇಶ್ಯೂ ಮಾಡಿದ್ದೆ. ಈ ಎಸ್ ಸಿ ಮತ್ತು ಎಸ್ ಟಿ ಜನಗಳಿಗೆ ಜಮೀನು ರೆಗ್ಯುಲರೈಜ್ ಮಾಡಬೇಕೆಂದು; ಆಗ ಬರೀ ಒಂದು ಗೌರ್ನಮೆಂಟ್ ಆರ್ಡರ್ ಮೇಲೆ ಒಂದು ಲಕ್ಷ 75 ಸಾವಿರ ಜನಗಳಿಗೆ ರೆಗ್ಯುಲರೈಜ್ ಮಾಡಿದ್ದೇವೆ. ನಂತರ ಆ ಗೌರ್ನಮೆಂಟ್ ಆರ್ಡರ್ ಸರಿಯಿಲ್ಲ ಎಂದು ಈ ಕಾನೂನು ಬಂತು. ಈ ಕಾನೂನು ಬರುವವರೆಗೂ ಈ ಗೌರ್ನಮೆಂಟ್ ಆರ್ಡರ್ ಕಂಟಿನ್ಯೂ ಆಯಿತು. ಅದನ್ನು ಕೋರ್ಟಿನಲ್ಲಿ ಯಾರೂ ಕೂಡ ಆಗ ಚಾಲೇಂಜ್ ಮಾಡಲಿಲ್ಲ. ಹಾಗೆ ಅದು ಸುಮಾರು 8 ವರ್ಷಗಳ ಕಾಲ • ನಡೆದುಕೊಂಡು ಬಂತು. ಈಗ ಇರುವ ಪ್ರಾವಿಜನ್ ಪ್ರಕಾರ ಕಮಿಟಿಯವರು ಸ್ಯಾಂಕ್ಷನ್ ಮಾಡಬೇಕೆಂದು ಇದೆ; ಆದರೆ ಹಣ ತೆಗೆದುಕೊಂಡು ಸರ್ಟಿಫಿಕೇಟ್ ಕೊಡುವವರು ತಹಶೀಲ್ದಾರರು. ಅವರ ಕೈಗೆ ಕಮಿಟಿಯವರು ಒಂದು ಲಿಸ್ಟ್ ಕೊಟ್ಟಿರುತ್ತಾರೆ. ಅಷ್ಟೇ ಮಾತ್ರ ಬೇರೇನೂ ಇಲ್ಲ. ಆಮೇಲೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು ಹಾಗೂ ಮುನಿಸಿಪಾಲಿಟಿಗಳ ಬಗ್ಗೆ ತಾವು ಹೇಳಿದಿರಿ. ಅಲ್ಲಿ ತೊಂದರೆಯಾಗುತ್ತದೆ ಎಂದು. ಅಂತಹ ತೊಂದರೆ

ಆದರೆ ಪುನ: ಪರಿಶೀಲನೆ ಮಾಡೋಣ. ಆಮೇಲೆ ಗ್ರೇಜಿಂಗ್ ಲ್ಯಾಂಡ್ ಬಗ್ಗೆ ತಾವು ಹೇಳಿದಿರಿ ; ಲ್ಯಾಂಡ್ ಎನ್‌ಕ್ರೋಚ್‌ಮೆಂಟ್ ಮಾಡಿದ್ದರೆ ಲ್ಯಾಂಡ್ ಇಲ್ಲದೆ ಇದ್ದರೆ ತಾವು ಗ್ರೇಜಿಂಗ್ ಲ್ಯಾಂಡ್ ಇಲ್ಲಿ ತರುತ್ತೀರಿ? ಲ್ಯಾಂಡ್ ಇದ್ದರೆ ನಾವು ಅದನ್ನು ಪ್ರೊಟೆಕ್ಟ್ ಮಾಡೋಣ.

ಶ್ರೀ ಆರ್. ವಿ. ದೇಶಪಾಂಡೆ : ಹಾಗಿದ್ದರೆ ದನಕರುಗಳು ಎಲ್ಲಿ ಹೋಗಬೇಕು?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಕಳೆದ 10-15 ವರ್ಷದಿಂದ ಅವನು ಕಲ್ಟಿವೇಟ್ ಮಾಡುತ್ತಿದ್ದಾನೆ ಎಂದರೆ, ಅದರ ಅರ್ಥ ಅದು ಗ್ರೇಜಿಂಗ್ ಲ್ಯಾಂಡ್ ಅಲ್ಲ ಅದು ಅಗ್ರಿಕಲ್ಚರಲ್ ಲ್ಯಾಂಡ್ ಆಗಿ ಕನ್‌ವರ್ಟ್ ಆಗಿ ಕನ್‌ವರ್ಟ್ ಆಗಿದೆ ಎಂದು ಆಗುತ್ತದೆ. ಅಂತಹ ರೆಕಾರ್ಡ್ಸ್ ನೋಡಿ ಮಾಡುತ್ತೇವೆ. ಎಲ್ಲೀ ರೆಕಾರ್ಡ್ಸ್ ಇಲ್ಲ, ಅವನು ಸಫಿಷಿಯಂಟ್ ಹೋಲ್ಡರ್ ಇದ್ದು ಒತ್ತುವರಿ ಮಾಡಿದ್ದ ಎಂದರೆ ಈ ಪ್ರಶ್ನೆಯೇ ಬರುವುದಿಲ್ಲ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ “1990ನೇ ಇಸವಿಯ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುವುದು”

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು : ಖಂಡ ಎರಡಕ್ಕೆ ಮಾನ್ಯ ಕಂದಾಯ ಮಂತ್ರಿಗಳು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : I move : “That clause 2 shall be omitted”

ಇದನ್ನು ನಾವು ಈಗಾಗಲೇ ಒಪ್ಪಿಕೊಂಡಿದ್ದೇನೆ. ಇದನ್ನು ಯಾವಕಾರಣಕ್ಕಾಗಿ ತರಲಾಗಿದೆ ಎಂಬುದನ್ನು ನಾನು ಈಗಾಗಲೇ ಎಕ್ಸ್‌ಪ್ಲೈನ್ ಮಾಡಿರುತ್ತೇನೆ. ಇದನ್ನು ಈ ಸದನದ ಎಲ್ಲಾ ಮಾನ್ಯ ಸದಸ್ಯರೂ ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಉಪಾಧ್ಯಕ್ಷರು : ಖಂಡ ಎರಡಕ್ಕೆ ತಿದ್ದುಪಡಿಯನ್ನು ಮಂಡಿಸಲಾಗಿದೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ “ That clause 2 shall be omitted ಪ್ರಸ್ತಾಪ ಅಂಗೀಕೃತವಾಯಿತು.

ಖಂಡ 3

ಉಪಾಧ್ಯಕ್ಷರು : ಖಂಡ ಮೂರಕ್ಕೆ ಮಾನ್ಯ ಆರ್. ಎಲ್. ಜಾಲಪ್ಪನವರು ತಿದ್ದುಪಡಿಯನ್ನು ಕೊಟ್ಟಿರುತ್ತಾರೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಉಪಾಧ್ಯಕ್ಷರೇ, ನಾನು ತಿದ್ದುಪಡಿಯನ್ನು ಪ್ರೆಸ್ ಮಾಡುವುದಿಲ್ಲ.

ಉಪಾಧ್ಯಕ್ಷರು : ಖಂಡ 3 ಕ್ಕೆ ಕೊಟ್ಟ ಶ್ರೀ ಆರ್. ಎಲ್. ಜಾಲಪ್ಪನವರ ತಿದ್ದುಪಡಿಯನ್ನು ವಾಪಸ್ಸು ಪಡೆಯಲಾಯಿತು.

ಉಪಾಧ್ಯಕ್ಷರು : ಖಂಡ ಮೂರಕ್ಕೆ ಮಾನ್ಯ ಕಂದಾಯ ಮಂತ್ರಿಗಳು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಖಂಡ 3ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ನಾನು ಮಂಡಿಸುತ್ತೇನೆ.

2. CLAUSE 3

For clause 3 of the said Bill, the following shall be substituted, namely:

"3. Insertion of new section 94-A. After section 94 of the principal Act, the following shall be inserted, namely:

"94-A. Regularisation of certain cases of unauthorised occupation by constituting Committee etc:

(1) Subject to such rules as may be prescribed the State Government shall, by notification, constitute for each taluk a committee consisting of such number of members not exceeding three of whom one shall be a member of Legislative Assembly for the purpose of grant of land under sub-section(4).

(2) The Tahsildar of the concerned taluk shall be the Secretary of the committee.

(3) The committee shall follow such procedure as may be prescribed.

(4) Nothing in section 94 shall prevent the committee constituted under sub-section(1), but subject to such rules as may be prescribed, if anu to grant to the person liable to be evicted under that section, the land which he had unauthorisedly occupied prior to the fourteenth day of April, 1990 (hereinafter referred to as the said date) or any portion thereof, if he satisfies the prescribed conditions(including the extent of the land held and unauthorisedly occupied by him) and makes within a period of six months from the date of commencement of the Karnataka Land Revenue(Amendment) Act, 1990 (hereinafter referred to as the Amendment Act), an application for such grant in such form alongwith such fees as may be prescribed and on payment of the amount payable under sub-section(5):

Provided that the land so granted togethere with the land already held by such person, shall not exceed two hectares of 'D' class of land or its equivalent thereto:

Provided further that no land shall be granted in the areas lying within the limits of Cities and City Municipalities specified in column(2) of the Table below and within the distance from such limits specified in the corresponding entries in column(3) thereof:

TABLE

Sl. No.	Places	Distances
1.	Bangalore City under the Karnataka Municipal Corporations Act, 1976.	18 Kms.
2.	The Cities of Belgaum, Gulbarga, Hubli-Dharward, Mangalore and Mysore respectively under the provisions of Karnataka Municipal Corporations Act, 1976..	10 Kms
3.	All City Municipalities under the Karnataka Muncipalities Act 1964.	5 Kms.

Provided that nothing in this section shall apply to Forest Lands, Plntation lands or lands referred to in sub-section(2) of section 79.

Explanation : For the purpose of this section, 'D' class of land means 'D' class of land or an extent equivalent thereto consisting of one or more classes of land, as specified and determined in accordance with the formula in Schedule I to the Karnataka Land Reforms Act, 1961.

(5) The amount payable for the grant of land under sub-section(1) shall be such as may be prescribed.

(6) Notwithstanding anything contained in the preceding sub-scection,

(a) The grant of land, if any, shall be provisional, subject to confirmation by the concerned Tahsildar, on the amount payable being paid, in three equal instalments, of which the first one shall be paid before the expiry of a period of thirty days from the date of communication of the order of provisional grant and the remaining two wihtin the period prescribed; and

(b) if any instalment is not paid within the period referred to above, the provisional order of grant shall stand cancelled and the amount or amounts of the instalments paid, if any, shall also be liable for forfeiture, and

(c) the trees, if any, standing on the land granted and the granite in such land shall continue to belong to the Government, which may at its discretion be disposed of by it, in such manner as it may deem fit".

ಉಪಾಧ್ಯಕ್ಷರು : ಖಂಡ ಮೂರಕ್ಕೆ ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನಾನು ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಎಲ್ಲರೂ ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಈ ತಿದ್ದುಪಡಿಯನ್ನು ಅಂಗೀಕರಿಸಬೇಕೆಂದು ನಾನು ಕೋರುತ್ತೇನೆ.

MADAM DEPUTY SPEAKER: The question is:

that for clause 3 of the said Bill, the following shall be substituted, namely :

"3. Insertion of new section 94-A, After section 94 of the principal Act, the following shall be inserted, namely:

"94-A Regularisation of certain cases of unauthorised occupation by constituting Committee etc :

(1) Subject to such rules as may be prescribed the State Government shall, by notification, constitute for each taluk a committee consisting of such number of members not exceeding three of whom one shall be a member of Legislative Assembly for the purpose of grant of land under sub-section (4)

(2) The Tahsildar of the concerned taluk shall be the Secretary of the Committee.

(3) The committee shall follow such procedure as may be prescribed.

(4) Nothing in section 94 shall prevent the committee consitituted under sub-section (1), but subject to such rules as may be prescribed, if any to grant to the person liable to be evicted under that section, the land which he had unauthorisedly occupied prior to the fourteenth day of April, 1990 (hereinafter referred to as the said date) or any portion there of, if he satisfies the prescribed conditions (including the extent of the land held and unauthorisedly occupied by him) and makes within a period of six months from the date of commencement of the Karnataka Land Revenue (Amendment) Act, 1990 (hereinafter referred to as the Amendment Act), an application for such grant in such form along with such fees as may be prescribed and on payment of the amount payable under sub-section (5):

Provided that the land so granted together with the land already held by such person, shall not exceed two hectares of 'D' class of land or its equivalent thereto:

Provided further that no land shall be granted in the areas lying within the limits of Cities and City Municipalities specified in column (2) of the Table below and within the distance from such limits specified in the corresponding entries in column (3) there of:

TABLE

Sl. No.	Places	Distances
1.	Bangalore City under the Karnataka Municipal Corporations Act, 1976.	18 Km.s
2.	The cities of Belgaum, Gulbarga, Hubli-Dharwad, Mangalore and Mysore respectively under the provisions of Karnataka Municipal Corporations Act, 1976.	10 Kms.
3.	All city Municipalities under the Karnataka Municipalities Act,	1964.5 Kms.

Provided that nothing in this section shall apply to forest lands, Plantation lands or lands referred to in sub-section (2) of section 79.

Explanation : For the purpose of this section, 'D' class of land means 'D' class of land or an extent equivalent there to consisting of one or more classes of land, as specified and determined in accordance with the formula in Schedule I to the Karnataka Land Reforms Act, 1961.

(5) The amount payable for the grant of land under sub-section (1) shall be such as may be prescribed.

(6) Notwithstanding anything contained in the preceding sub-section,

(a) The grant of land, if any, shall be provisional, subject to confirmation by the concerned Tahsildar, on the amount payable being paid, in three equal instalments, of which the first one shall be paid before the expiry of a period of thirty days from the date of communication of the order of provisional grant and the remaining two within the period prescribed; and

(b) if any instalment is not paid within the period referred to above, the provisional order of grant shall stand cancelled and the amount or amounts of the instalments paid, if any, shall also be liable for forfeiture, and

(c) the trees, if any, standing on the land granted and the granite in such land shall continue to belong to the Government, which may at its discretion be disposed of by it, in such manner as it may deem fit."

(ಪ್ರಸ್ತಾವ ಅಂಗೀಕೃತವಾಯಿತು ಮತ್ತು ತಿದ್ದುಪಡಿಯನ್ನು ವಿಧೇಯಕಕ್ಕೆ) ಸೇರಿಸಲಾಯಿತು.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ತಿದ್ದುಪಡಿಯಾದ ಮೂರನೆಯ ಖಂಡವು ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕೃತವಾಯಿತು

(ಖಂಡ ಮೂರು ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಯಿತು)

ಖಂಡ 4

ಉಪಾಧ್ಯಕ್ಷರು : ಖಂಡ ನಾಲ್ಕಕ್ಕೆ ಮಾನ್ಯ ಕಂದಾಯ ಮಂತ್ರಿಗಳು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ ಖಂಡ ನಾಲ್ಕಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ:

3. CLAUSE 4

That In clause 4 of the said Bill,

(i) for sub-clause (1), the following shall be substantial namely:

"(1) in sub-section (2) ,

(a) after the words "he shall", the words "notwithstanding anything contained in any law for the time being in force", shall be and shall be deemed to have been inserted with effect from the Fifteenth day of January, 1965;

(b) in the proviso for the words " Provided that" the words "provided further that", shall be substituted and for the words and brackets "dry (punja) land", the words and brackets "dry (Punja) land, wet land or garden land", shall be substituted;

(c) before the first proviso as so amended, the following proviso shall be inserted, namely:

"Provided that the Deputy Commissioner shall not refuse permission for diversion of such land included in the outline Development Plan or the Comprehensive Development Plan published under the Karnataka Town and Country, Planning Act, 1961 (Karnataka Act 11 of 1963), if such diversion is in accordance with the purpose of land use specified in respect of the land in such plan".;

"(3) In sub-section (7), for the words "proviso" the words "Provisos", shall be subsititued.

ಉಪಾಧ್ಯಕ್ಷರು : ಖಂಡ ನಾಲ್ಕಕ್ಕೆ ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಇದರ ಬಗ್ಗೆ ಸಹ ಹೇಳಿರುತ್ತೇನೆ. ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

MADAM DEPUTY SPEAKER : The question is :

In clause 4 of the said Bill,

(i) for sub-clause (1), the following shall be substantial namely:

"(1) in sub-section (2) ,

(a) after the words "he shall", the words "notwithstanding anything contained in any law for the time being in force", shall be and shall be deemed to have been inserted with effect from the Fifteenth day of January, 1965;

(b) in the proviso for the words " Provided that" the words "provided further that", shall be substituted and for the words and brackets "dry (punja) land", the words and brackets "dry (Punja) land, wet land or garden land", shall be substituted;

(c) before the first proviso as so amended, the following proviso shall be inserted, namely:

"Provided that the Deputy Commissioner shall not refuse permission for diversion of such land included in the outline Development Plan or the Comprehensive Development Plan published under the Karnataka Town and Country, Planning Act, 1961 (Karnataka Act 11 of 1963), if such diversion is in accordance with the purpose of land use specified in respect of the land in such plan".;

"(3) In sub-section (7), for the words "proviso" the words "Provisos", shall be subsititued.

(ಪ್ರಸ್ತಾವ ಅಂಗೀಕೃತವಾಯಿತು ಮತ್ತು ತಿದ್ದುಪಡಿಯನ್ನು ವಿಧೇಕಕ್ಕೆ ಸೇರಿಸಲಾಯಿತು)

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ತಿದ್ದುಪಡಿಯಾದ 4ನೇ ಖಂಡ ವಿಧೇಯಕದ ಅಂಗವಾಗಿರಬೇಕು.

(ತಿದ್ದುಪಡಿಯಾದ 4ನೇ ಖಂಡವು ವಿಧೇಯಕದ ಅಂಗವಾಯಿತು)

ಖಂಡ 4 ರಿಂದ 5ರವರೆಗೆ

ಉಪಾಧ್ಯಕ್ಷರು : "ಖಂಡ 4 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 4 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 6 :

ಉಪಾಧ್ಯಕ್ಷರು : ಖಂಡ 6ಕ್ಕೆ ಮಾನ್ಯ ಕಂದಾಯ ಮಂತ್ರಿಗಳು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ಅದನ್ನು ಮಂಡಿಸುವುದು.

SRI M. MALLIKARJUNA KHARGE : I move : "That clause 6 shall be omitted"

clauses 3, 4 and 5 shall be renumbered as claused 2,3 and 4 respectively.

ಉಪಾಧ್ಯಕ್ಷರು : ತಿದ್ದುಪಡಿಯನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ವಲಿಡಿಟ್ ಕ್ಲಾಸ್ ಇದ್ದು ಇದನ್ನು ತೆಗೆಯುವುದರಿಂದ ಏನೂ ತೊಂದರೆ ಆಗುವುದಿಲ್ಲವೆಂದು ಹೇಳಿದ್ದೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

4. CLAUSE 6

Clause 6 shall be omitted.

Clause 3, 4 and 5 shall be renumbered as clauses 2, 3 and 4 respectively.

ಪ್ರಸ್ತಾವ ಅಂಗೀಕೃತವಾಯಿತು

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ ತಿದ್ದುಪಡಿಯಾದ 6ನೇ ಖಂಡವು ವಿಧೇಯಕದ ಅಂಗವಾಗಿರಬೇಕು.

(ತಿದ್ದುಪಡಿಯಾದ 6ನೇ ಖಂಡವು ವಿಧೇಯಕದ ಅಂಗವಾಯಿತು)

ಖಂಡ 2 ರಿಂದ 6 ರವರೆಗೆ

ಉಪಾಧ್ಯಕ್ಷರು : "ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೂ " ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವವನ್ನು ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ಕಂದಾಯ ಮಂತ್ರಿಗಳು) "1990ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ" ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1990ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ'ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

MADAM DY. SPEAKER : Now the House stands adjourned to meet again at 2.30 p.m.

(ಸಭೆಯು 1 ಗಂಟೆ 28 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ 2.30 ಕ್ಕೆ ಸೇರಲು ನಿಶ್ಚಯಿಸಿತು)

ಸದನವು 2 ಘಂಟೆ 45 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು.

(ಉಪಾಧ್ಯಕ್ಷಣೆಯವರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷಪೀಠದಲ್ಲಿ ಉಪಸ್ಥಿತರಿದ್ದರು)

ಉಪಾಧ್ಯಕ್ಷಣೆಯವರು : ಈಗ 1990ನೇ ಇಸವಿಯ ಕರ್ನಾಟಕ ಇನಾಮ್‌ಗಳು ರದ್ದಿಯಾತಿ ಕಾನೂನುಗಳ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳೋಣ.

1990ನೇ ಇಸವಿಯ ಕರ್ನಾಟಕ ಇನಾಮುಗಳು ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, 1990ನೇ ಇಸವಿಯ ಕರ್ನಾಟಕ ಇನಾಮ್ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಸಿಂಪಲ್ ಅಮೆಂಡ್‌ಮೆಂಟ್ ಇದೆ. ಇದರಲ್ಲಿ ಕೇವಲ ಸಂಡೂರು ಇನಾಮ್ ಅಬಾಲಿಷನ್ ಮತ್ತು ಕರ್ನಾಟಕ ಸರ್ಟನ್ ಇನಾಮ್ ಅಬಾಲಿಷನ್ ಆಕ್ಟ್ ಕೆಳಗಡೆ ಸುಮಾರು ಇನ್ನೂ 60 ಸಾವಿರ ಎಕರೆ ಜಮೀನಿನ ಬಗ್ಗೆ ಟೆನೆಂಟ್ಸ್ ಅಪ್ಲಿಕೇಷನ್ ಹಾಕಬೇಕಾಗಿತ್ತು. ಅವರು ಹಾಕಿರಲ್ಲಿಲ್ಲ. ಅದಕ್ಕಾಗಿ ಅವರಿಗೆ ಅನುಕೂಲ ಆಗಲಿ ಎಂಬ ದೃಷ್ಟಿಯಿಂದ ಈ ಸಣ್ಣ ತಿದ್ದುಪಡಿ ತಂದಿದ್ದೇವೆ. ಇದರಿಂದ ಸಾವಿರಾರು ಟೆನೆಂಟ್ಸ್‌ಗೆ ಅನುಕೂಲವಾಗುತ್ತದೆ ಇದರ ಡೇಟ್‌ನ್ನು 31 ಮಾರ್ಚ್ 1991ರ ವರೆಗೆ ಎಕ್ಸ್‌ಟೆಂಡ್ ಮಾಡಿದ್ದೇವೆ. ಅಲ್ಲಿಯವರೆಗೆ ವಿಸ್ತರಿಸಲು ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೇ, ಇದಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ. ಒಪ್ಪಿಗೆ ಕೊಡಲೇ ಬೇಕಾಗುತ್ತದೆ. ಇದಕ್ಕೆ ನಾವು ಒಂದು ಲಿಮಿಟೇಷನ್ಸ್ ಹಾಕಬೇಕು. ಇದೇ ಪ್ರಕಾರ ಎಕ್ಸ್‌ಟೆಂಡ್ ಮಾಡುತ್ತಾ ಹೋದರೆ ಕೆಲವು ಜನರು ಇದರ ದುರುಪಯೋಗ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇದು ಕೊನೆ ಎಕ್ಸ್‌ಟೆನ್‌ಷನ್ ಎಂದು ತಾವು ಹೇಳಬೇಕಾಗುತ್ತದೆ. ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಭೂ ಶಾಸನ ಕಾಯಿದೆಯ ಸೆಕ್ಷನ್ 48 (ಅ) ಪ್ರಕಾರ ಡಿಕ್ಲರೇಷನ್ ಫೈಲ್ ಮಾಡುವುದಕ್ಕೆ ಸಾಕಷ್ಟು ಟೈಮ್ ಕೊಟ್ಟಿದ್ದೀರಿ. ಇದರಿಂದ ಏನು ಬಹಳಷ್ಟು ಬಡ ರೈತರು, ನಿರಕ್ಷರಸ್ತರು ಅರ್ಜಿ ಹಾಕಲಿಲ್ಲ. ಇವತ್ತು ಎಷ್ಟೋ ಜಮೀನುಗಳು ಸರ್ಕಾರಕ್ಕೆ ಜಮಾ ಆಗಿದ್ದಾವೆ. ಹೇಳುತ್ತಿಲ್ಲ. ಯಾವ ಪ್ರಕಾರ ಅರ್ಜಿ ಹಾಕಲಿಲ್ಲ, ಇವತ್ತು ಎಷ್ಟೋ ಜಮೀನುಗಳು ಈ ಸಲುವಾಗಿ ಇವತ್ತು ನೀವು ಎಕ್ಸ್‌ಟೆನ್‌ಷನ್ ಕೊಡಬೇಕು ಎಂದು ಹೇಳುತ್ತಿಲ್ಲ. ಯಾವ ಪ್ರಕಾರ ಈ ಸಮಸ್ಯೆಯನ್ನು ಬಗೆಹರಿಸುತ್ತೀರಿ? ಏಕೆಂದರೆ ನಿಮಗೆ